
ಸಂಪುಟ 23 ಸಂಚಿಕೆ 10
ಮಾರ್ಚ್ 11, 2001 ಬೆಲೆ ರೂ. 3.00

ದುಡಿವ ಜನ



ಬಜೆಟ್

ದುಡಿಯುವವರ ಮೇಲೆ ಬಿಜೆಪಿ ಸಾರಿದ ಯುದ್ಧ



ಅಕ್ಕಿ ಆಲೂರು:

ಕೋಮು ದ್ವೇಷಕ್ಕೊಂದು ದಲಿತ ಮುಖವಾಡ

ಸಿನಿಮಾ:

ಮತದಾನ

ಮುಚ್ಚಿದ ಚಿನ್ನದ ಗಣಿ

ಕಾಂಗ್ರೆಸ್ ಕೈಗೊಂಬೆ ರಾಜ್ಯಪಾಲ

ಅವರ ಶುದ್ಧ ಚಾರಿತ್ರ್ಯ ಮತ್ತು ಜನರಿಗೆ ಅವರಲ್ಲಿರುವ ಅಪಾರ ಗೌರವದಿಂದಾಗಿ ಹತ್ಯೆಗೆ ಅವರೊಬ್ಬ ತುಂಬಾ ಸೂಕ್ತ ಅಭ್ಯರ್ಥಿ ಆಗಿದ್ದರು. ನಮ್ಮ ವಿರುದ್ಧ ಹರಿಯಬಿಟ್ಟ ಅಪಪ್ರಚಾರಕ್ಕೆ ಕೂಡ ಅವರು 'ಸೂಕ್ತ' ವ್ಯಕ್ತಿಯಾಗಿದ್ದರು. ಚುನಾವಣೆಯಲ್ಲಿ ಸ್ಪರ್ಧಿಸಿದ ಅಭ್ಯರ್ಥಿಗಳನ್ನು ನಾಶಮಾಡುವುದಾಗಿ ನಕ್ಸಲೀಯರು ಆಗಲೇ ಘೋಷಣೆ ಮಾಡಿದ್ದರು.

ಆದರೆ ಕಾಂಗ್ರೆಸ್ ಪಕ್ಷ ತನಗೆ ಏನೂ ಗೊತ್ತಿಲ್ಲ ಎನ್ನುವಂತೆ ಹತ್ಯೆಯಲ್ಲಿ ಸಿಪಿಐ(ಎಂ) ಕೈವಾಡವಿದೆ ಎಂದು ಬೊಬ್ಬೆ ಹಾಕಿತು. ಆಳುವ ಕಾಂಗ್ರೆಸ್ ಪಕ್ಷದ ನಾಯಕ ಸಿದ್ಧಾರ್ಥ ಶಂಕರ ರಾಯ್ ಆಗ ಉತ್ತರ ಬಂಗಾಳದಲ್ಲಿದ್ದರು. ಪಾತಕ ಕೃತ್ಯಕ್ಕೆ ಸಿಪಿಐ(ಎಂ) ಹೊಣೆ ಎನ್ನುವುದು ತನಗೆ ಗೊತ್ತಿದೆ ಎಂದು ಅವರು ಹೇಳಿದರು.

ತುಂಬಾ ಸರಳವಾಗಿ ಹೇಳಬೇಕೆಂದರೆ ನಾವು ಆಘಾತಗೊಂಡಿದ್ದೆವು. ಹೇಮಂತ ಬೋಸರಂಥ ಒಬ್ಬ ಅತಿ ಗೌರವಾನ್ವಿತ ಧುರೀಣರನ್ನು ಕೊಂದವರ ಹೇಡಿತನ ಹಾಗೂ ಕ್ರೌರ್ಯವನ್ನು ಬಣ್ಣಿಸಲು ನಮ್ಮಲ್ಲಿ ಪದಗಳೇ ಇರಲಿಲ್ಲ. ಆ ಕೊಲೆಯ ಆರೋಪವನ್ನು ನಮ್ಮ ಮೇಲೆ ಹೇರಲು ಯತ್ನಿಸಿದ ಕಾಂಗ್ರೆಸ್ ವರ್ತನೆಯನ್ನು ಕೂಡ ಹೇಗೆ ವರ್ಣಿಸುವುದೋ ಗೊತ್ತಾಗದು.

ಪ್ರಜಾಪ್ರಭುತ್ವದ ಬಗ್ಗೆ ಕಿಂಚಿತ್ತಾದರೂ ಗೌರವವುಳ್ಳ ಯಾರಾದರೂ ಆತ್ಮ ವಿಮರ್ಶೆ ಮಾಡಿಕೊಳ್ಳಬೇಕು. ಈ ಹತ್ಯೆಯ ಬಗ್ಗೆ ನಮ್ಮ ಪಕ್ಷ ತೀವ್ರ ಆಕ್ರೋಶ ವ್ಯಕ್ತಪಡಿಸುತ್ತದೆ. ಹಾಗೂ ಪ್ರತಿಭಟನೆಯಾಗಿ ಒಂದು ಸಾರ್ವತ್ರಿಕ ಹರತಾಳ ನಡೆಸಲು ಜನರಿಗೆ ಮನವಿಮಾಡಿಕೊಳ್ಳುತ್ತದೆ. ರಾಜ್ಯದಲ್ಲಿ ಈ ರೀತಿಯ ಹಿಂಸೆಯ ಅಲೆ ಮತ್ತು ಪಿತೂರಿಯ ಕೊಲೆಗಳನ್ನು ನಡೆಸುತ್ತಿರುವವರನ್ನು ಕಠಿಣ ಶಿಕ್ಷೆಗೆ ಗುರಿಪಡಿಸಬೇಕೆಂದು ನಾವು ಆಗ್ರಹಿಸುತ್ತೇವೆ. ಎಂದು ನಮ್ಮ ಪಕ್ಷದ ಪ್ರಧಾನ ಕಾರ್ಯದರ್ಶಿ ಪ್ರಮೋದ್ ದಾಸ್‌ಗುಪ್ತ ಹೇಳಿಕೆಯೊಂದರಲ್ಲಿ ತಿಳಿಸಿದರು.

ಫೆಬ್ರವರಿ 22 ರಂದು ರಾಜ್ಯದಲ್ಲಿ ಸಾರ್ವತ್ರಿಕ ಹರತಾಳ ನಡೆಯಿತು.

ಹೇಮಂತ ಬಾಬು ಹತ್ಯೆ ಹಿನ್ನೆಲೆಯಲ್ಲಿ ನಮ್ಮನ್ನು ಖಂಡಿಸುವ ವಿಚಾರದಲ್ಲಿ ಎಂಟು ಪಕ್ಷಗಳ ರಂಗ ಕಾಂಗ್ರೆಸ್ ಜತೆ ದನಿ ಗೂಡಿಸಿತು. ಆದರೆ, ತಾವು ತಪ್ಪು ಮಾಡುತ್ತಿದ್ದೇವೆ ಎನ್ನುವುದು ಬಹಳಷ್ಟು ಪಕ್ಷಗಳಿಗೆ ಮನವರಿಕೆಯಾಯಿತು.

ಅಂತೂ ಕೊನೆಗೂ ಚುನಾವಣೆಗಳು ನಡೆದವು. ಮತದಾರರು ಗಣನೀಯ ಸಂಖ್ಯೆಯಲ್ಲಿ ತಮ್ಮ ಹಕ್ಕನ್ನು ಚಲಾಯಿಸಿದರು. ಮತದಾನದ ದಿನ ಪೊಲೀಸ್ ಗೋಲಿಬಾರಿನಲ್ಲಿ ಹತ್ತು ಜನರು ಮೃತಪಟ್ಟರು.

ಕುತೂಹಲದಿಂದ ನಿರೀಕ್ಷಿಸಿದ ಫಲಿತಾಂಶ ಹೊರಬಿತ್ತು. ನಮ್ಮ ವಿರುದ್ಧ ಹಿಂಸಾಚಾರದ ಹೊಳೆಯನ್ನೇ ಹರಿಯಬಿಟ್ಟರೂ ಸಿಪಿಐ(ಎಂ) ಏಕೈಕ ದೊಡ್ಡಪಕ್ಷವಾಗಿ ಹೊರಹೊಮ್ಮಿತು. 280 ಸ್ಥಾನಗಳ ವಿಧಾನಸಭೆಯಲ್ಲಿ ಅದು111 ಸ್ಥಾನಗಳಲ್ಲಿ ಜಯಭೇರಿ ಬಾರಿಸಿತು. ಚುನಾವಣೆಗೆ ಮುಂಚೆ ಹಾಗೂ ಮತದಾನದವೇಳೆ ನಮ್ಮ ಮೇಲೆ ಹಲ್ಲೆ, ಆಕ್ರಮಣ, ದಬ್ಬಾಳಿಕೆ ನಡೆಯದಿದ್ದರೆ ನಾನು ಇನ್ನಷ್ಟು ಕ್ಷೇತ್ರಗಳಲ್ಲಿ ಗೆಲ್ಲುತ್ತಿದ್ದೆವು ಎನ್ನುವುದರಲ್ಲಿ ಅನುಮಾನವೇ ಇಲ್ಲ.

ಬಾರಾನಗರದಲ್ಲಿ ನನ್ನ ಹಾಗೂ ಅಜಯಬಾಬು ನಡುವೆ ನೇರ ಹಣಾಹಣಿ ನಡೆದಿತ್ತು. ಈ ಕ್ಷೇತ್ರದಲ್ಲಿ ಸಿಪಿಐ(ಎಂ) ನ್ನು ಸೋಲಿಸಿ ಹೇಗಾದರೂ ಗೆಲ್ಲಬೇಕೆಂದು ಕಾಂಗ್ರೆಸ್ ಹಾಗೂ ಅವರ ಮಿತ್ರರ 'ಉತ್ಸಾಹಕ್ಕೆ' ಪ್ರಕಟಿತ ಫಲಿತಾಂಶ ತಣ್ಣೀರು ಎರಚಿತ್ತು. ನಾನು 11,053 ಮತಗಳ ಅಂತರದಲ್ಲಿ ಗೆದ್ದೆ, ದೇಶದ್ರೋಹಿಗಳ ಹೇಯ ಪಿತೂರಿಯನ್ನು ಬಾರಾನಗರ ಕ್ಷೇತ್ರದ ಜನರು ವಿಫಲಗೊಳಿಸಿದ್ದರು.

ಅಸಂಬ್ಲಿ ಜತೆಗೆ ಲೋಕಸಭೆಗೂ ನಡೆದ ಚುನಾವಣೆಯಲ್ಲಿ ರಾಜ್ಯದ 40 ಸ್ಥಾನಗಳ ಪೈಕಿ 20 ರಲ್ಲಿ ಸಿಪಿಐ(ಎಂ)ಗೆ ಜಯಲಕ್ಷ್ಮಿ ಒಲಿದಿದ್ದಳು. ಕಾಂಗ್ರೆಸ್ ಬೆಂಬಲಿತ ಕಮ್ಯುನಿಸ್ಟರು ಮೂರು ಸ್ಥಾನಗಳಲ್ಲಿ ಗೆದ್ದರು.

ನಮ್ಮ ಪಕ್ಷ ಹಾಗೂ ವಿಧಾನಸಭೆಯಲ್ಲಿನ ಎಡಪಕ್ಷಗಳ ಹೊಸ ರಂಗದ ಮುಖಂಡನಾಗಿ ನನ್ನನ್ನು ಚುನಾಯಿಸಲಾಯಿತು. ಹೊಸ ಮಂತ್ರಿಮಂಡಳದ ರಚನೆಗಾಗಿ ನನ್ನ ಜತೆ ಬೇಗನೆ ಸಮಾಲೋಚನೆ ಆರಂಭಿಸುವ ವಿಶ್ವಾಸವಿದೆ ಎಂದು ನಾನು ರಾಜ್ಯಪಾಲರಿಗೆ ಪತ್ರ ಬರೆದೆ. ಹೊಸ ಸರ್ಕಾರ ರಚನೆಗೆ ಹಕ್ಕನ್ನು ಪ್ರತಿಪಾದಿಸುವುದಾಗಿ ಕಾಮ್ರೆಡ್ ಪ್ರಮೋದ್ ದಾಸ್. ಗುಪ್ತ ಸುದ್ದಿಗೋಷ್ಠಿಯಲ್ಲಿ ಸ್ಪಷ್ಟಪಡಿಸಿದರು.

ಆದರೆ, ರಾಜ್ಯಪಾಲರ ತಲೆಯಲ್ಲಿ ಬೇರೆಯೇ ಯೋಚನೆ ಇತ್ತು. ನಾನು ಅಧಿಕಾರಕ್ಕೆ ಬರುವುದನ್ನು ತಡೆಯಲು ತೆರೆಮರೆಯಲ್ಲಿ ಆಟಶುರುವಾಗಿತ್ತು. ಸರ್ಕಾರ ರಚಿಸಲು ನನ್ನನ್ನು ಆಹ್ವಾನಿಸುವುದಿಲ್ಲ ಎಂದು ರಾಜ್ಯಪಾಲರು ನನಗೆ ಪತ್ರ ಬರೆದರು. ಇದಕ್ಕೆ ಪ್ರತಿಯಾಗಿ ರಾಜ್ಯಪಾಲರ ನಿಲುವನ್ನು ಖಂಡಿಸಿ ಖಾರವಾದ ಪತ್ರವನ್ನು ಬರೆದೆ. ನಿಮ್ಮ ಧೋರಣೆ ಸಂಸದೀಯ ಪ್ರಜಾಪ್ರಭುತ್ವಕ್ಕೆ ಮಾರಕವಾದುದು ಎಂದು ನಾನು ಪತ್ರದಲ್ಲಿ ಹೇಳಿದೆ. ರಾಜ್ಯಪಾಲರ ಅಧಿಕಾರವನ್ನು ನೀವು ದುರುಪಯೋಗ ಪಡಿಸಿಕೊಳ್ಳುತ್ತಿರುವಿರಿ ಎಂದು ನಾನು ಟೀಕಿಸಿದೆ. ರಾಜ್ಯಪಾಲರಿಗೆ ಸಂವಿಧಾನಬದ್ಧವಾಗಿ ಇರುವ ಅಧಿಕಾರ ವ್ಯಾಪ್ತಿಯನ್ನು ನೀವು ಮೀರಿತ್ತಿದ್ದೀರಿ ಎಂದು ನಾನು ರಾಜ್ಯಪಾಲರನ್ನು ತರಾಟೆಗೆ ತೆಗೆದುಕೊಂಡೆ.

ಎಂತಹ ಕರಾಳ ಕೃತ್ಯ ನಡೆಯಬಹುದೆಂದು ನಾವು ಅಂದುಕೊಂಡಿದ್ದೆವು ಹಾಗೆಯೆ ಆಯಿತು. ಕೇಂದ್ರ ಸರ್ಕಾರದ ಒತ್ತಡಕ್ಕೆ ಮಣಿದ ರಾಜ್ಯಪಾಲರು ಒಂದು ಪ್ರತಿಗಾಮಿ ಮಿತ್ರಕೂಟ ಸರ್ಕಾರದ ರಚನೆಗೆ ಅವಕಾಶ ಕಲ್ಪಿಸಿದರು. 280 ಸದ್ಯರ ಸದನದಲ್ಲಿ ಕೇವಲ ಐದು ಸದಸ್ಯರಿದ್ದ ಬಾಂಗ್ಲಾ ಕಾಂಗ್ರೆಸ್ ನ ಮುಖಂಡ ಅಜಯ್ ಮುಖರ್ಜಿ ಸರ್ಕಾರದ ನೇತೃತ್ವವಹಿಸಿದರು. ಕಾಂಗ್ರೆಸ್, ಸಿಪಿಐ, ಫಾರ್ವಡ್ ಬ್ಲಾಕ್ ಮುಂತಾದ ಪಕ್ಷಗಳು ಅವರಿಗೆ ಒಮ್ಮತದ ಬೆಂಬಲ ನೀಡಿದವು!

ಪಶ್ಚಿಮ ಬಂಗಾಳದಲ್ಲಿನ ಈ ಕುಕೃತ್ಯದ ಗರ್ಭದಲ್ಲಿ ತುರ್ತುಪರಿಸ್ಥಿತಿಯ ಕರಾಳ ಭ್ರೂಣ ಚಿಗುರೊಡೆದಿತ್ತು. ಪಶ್ಚಿಮಬಂಗಾಳದಲ್ಲಿನ ತಪ್ಪು ರಾಜಕೀಯ ಪ್ರಯೋಗಗಳಿಗೆ ಪ್ರಯೋಗಾಲಯದಂತೆ ಆಗಿತ್ತು. ಹಾಗೂ ಕೊಲೆಗಳಿಗೆ ವೈದಾನದಂತಿತ್ತು. ಪ್ರಜಾಪ್ರಭುತ್ವ ಅದರ ಬಲಿಪಶುವಾಗಿತ್ತು.

ಪಶ್ಚಿಮ ಬಂಗಾಳದ ಜನರು ಈ ದ್ರೋಹವನ್ನು ಸಹಿಸಿಕೊಳ್ಳುವುದಿಲ್ಲ ಎನ್ನುವುದು ಇಂದಿರಾ ಗಾಂಧಿ ಮತ್ತು ಆಕೆಯ ಸಲಹೆಗಾರರಿಗೆ ಚೆನ್ನಾಗಿ ಗೊತ್ತಿತ್ತು. ಸಿಪಿಐ(ಎಂ) ಅನ್ನು ಇನ್ನಷ್ಟು ದಮನಿಸಲು ನೀಲನಕ್ಷೆಯೊಂದು ರೂಪುಗೊಂಡಿತು. ನಮ್ಮ ಬೆಂಬಲಿಗರ ಮೇಲಿನ ದಾಳಿ ದಿನದಿಂದ ದಿನಕ್ಕೆ ಹೆಚ್ಚತೊಡಗಿತು. ಚುನಾವಣೆ ನಡೆದ ಒಂದು ದಿನದ ನಂತರ ರಾಜ್ಯಾದ್ಯಂತ ನಿಷೇದಾಜ್ಞೆ ಹೇರಲಾಯಿತು. ಸಿಪಿಐ(ಎಂ) ಬಲಿಗಳನ್ನು ನಡೆಸಲು ಬಿಡಲಿಲ್ಲ. ನಮ್ಮ ನಾಯಕರನ್ನು ಮುಗಿಸಲು ರಹಸ್ಯ ಪೊಲೀಸ್ ತಂಡಗಳನ್ನು ರಚಿಸಲಾಯಿತು.

ಈ ಹಿನ್ನೆಲೆಯಲ್ಲಿ, 1971 ಏಪ್ರಿಲ್ 7 ರಂದು ನಮ್ಮ ಪಕ್ಷ ದೀರ್ಘವಾದ ಹೇಳಿಕೆಯೊಂದನ್ನು ಬಿಡುಗಡೆ ಮಾಡಿತು.

ಹಿಂದಿನ ಸಂಚಿಕೆಯಲ್ಲಿ ರಾಷ್ಟ್ರಪತಿ ಆಳ್ವಿಕೆಯ ಅರಾಜಕತೆ, ಸಿಪಿಐ(ಎಂ) ಕಾರ್ಯಕರ್ತರ ಹತ್ಯೆ, ಬಸುವರವರ ಮೇಲೆ ಬಾಂಬ್ ದಾಳಿ, ಫಾರ್ವರ್ಡಬ್ಲಾಕ್ ಗೌರವಾನ್ವಿತ ನಾಯಕ ಹೇಮಂತ ಬೋಸ್ ಕೊಲೆ ಬಗೆ ಓದಿರುವಿರಿ. ಈಸಂಚಿಕೆಯಲ್ಲಿ ಹೇಮಂತ ಬೋರ್ ಕೊಲೆಯ ಆಪಾದನೆಯನ್ನು ಸಿಪಿಐ(ಎಂ) ಮೇಲೆ ಹೇರಿದ ಕಾಂಗ್ರೆಸ್ಸಿನ ಹೀನ ವರ್ತನೆ, ಅಸೆಂಬ್ಲಿ ಚುನಾವಣೆಯಲ್ಲಿ ಸಿಪಿಐ(ಎಂ) ಏಕೈಕ ದೊಡ್ಡ ಪಕ್ಷವಾಗಿ ಜಯ ಬಾರಿಸಿದ, ಸರ್ಕಾರ ರಚಿಸುವ ಪ್ರಸ್ತಾವನೆಗೆ ರಾಜ್ಯಪಾಲರಿಂದ ತಿರಸ್ಕಾರ, ಕೇವಲ 5 ಸದಸ್ಯರಿದ್ದ ಬಾಂಗ್ಲಾ ಕಾಂಗ್ರೆಸ್ಸಿನ ಅಜರ್ಯ್ ಮುಖರ್ಜಿ ಹೊಸ ಸರ್ಕಾರದ ರಚನೆ ಮತ್ತು ಪತನದ ಬಗ್ಗೆ ಓದಿ

ಮಾಸದ ನೆನಪುಗಳು
(ಒಂದು ರಾಜಕೀಯ ಆತ್ಮಕಥನ)



ಜ್ಯೋತಿಬಸು ಆತ್ಮಕಥನ

ಕನ್ನಡಕ್ಕೆ: ವಿಶ್ವಕುಂದಾಪುರ

ಧಾರವಾಹಿ: 58

ಅಧಿಕಾರದಲ್ಲಿ ಮುಂದುವರಿಯುವ ರಾಜ್ಯದ ಕಾಂಗ್ರೆಸ್ ಸರಕಾರದ ಕುತ್ಸಿತ ಯೋಜನೆಗೆ ಕೇಂದ್ರ ಸರಕಾರ ಬೆಂಬಲ ನೀಡುತ್ತಿದೆ. ನಮ್ಮ ವಿರುದ್ಧದ ಪಿತೂರಿ ದಟ್ಟವಾಗುತ್ತಿದೆ. ನಮ್ಮ ಹಿರಿಯ ನಾಯಕ ಹಾಗೂ ಎಂಎಲ್‌ಸಿ ಸಂತೋಷ ಭಟ್ಟಾಚಾರ್ಯರ ಹತ್ಯೆ ಒಂದು ಪ್ರತ್ಯೇಕ ಪ್ರಕರಣವಲ್ಲ. ಸಮಾಜ ವಿರೋಧಿಗಳು ಹಾಗೂ ನಕ್ಸಲೀಯರ ಜತೆಯಲ್ಲಿ ಪೊಲೀಸರನ್ನು ಬಳಸಿಕೊಂಡು ನಮ್ಮ ಧುರೀಣರನ್ನು ನಾಶಮಾಡಲು ಸಂಚು ನಡೆಸಲಾಗಿದೆ.


ವೈಯಕ್ತಿಕ ಹತ್ಯೆಗಳಲ್ಲಿ ನಮಗೆ ನಂಬಿಕೆಯಿಲ್ಲ ಎಂದು ನಾವು ಹೇಳಿದರೂ ನಮ್ಮ ವಿರುದ್ಧ ಅಪಪ್ರಚಾರ ನಡೆದಿದೆ. ಕೊಲೆ ಸಂಸ್ಕೃತಿಯನ್ನು ಹರಡುವ ಪ್ರಯತ್ನಗಳನ್ನು ರಾಜ್ಯದ ಜನರು ವಿಫಲಗೊಳಿಸುತ್ತಾರೆಂಬ ವಿಶ್ವಾಸ ನಮಗಿದೆ ಎಂಬುದು ಹೇಳಿಕೆಯ ಸಾರಾಂಶ.

ಜನರು ನಮ್ಮ ಬೆಂಬಲಕ್ಕೆ ನಿಂತರು. ಆದರೆ ಕಾಂಗ್ರೆಸ್ ಇನ್ನಷ್ಟು ಕೆಳಮಟ್ಟಕ್ಕೆ ಇಳಿಯಿತು. ತನ್ನ ಪಿತೂರಿಗೆ ಒಂದು ರೀತಿಯ ಸರಕಾರದ ಒಪ್ಪಿಗೆ ಪಡೆಯಲು ಅದು ಈ ಬಾರಿ ಪ್ರಯತ್ನಿಸಿತು. ದೆಹಲಿಯಲ್ಲಿನ ಪತ್ತೇದಾರಿ ಇಲಾಖೆಯಿಂದ ಬಂಗಾಳದ ಪತ್ತೇದಾರಿ ಇಲಾಖೆಗೆ ಒಂದು 'ಗುಪ್ತ' ಟಿಪ್ಪಣಿಯನ್ನು ಕಳಿಸಲಾಯಿತು. ರಾಜಕೀಯ ವಿರೋಧಿಗಳನ್ನು ನಾಶಮಾಡಲು ಸಿಪಿಐ(ಎಂ) ಪಿತೂರಿ ಹೂಡಿದೆ ಎಂದು ಅದರಲ್ಲಿ ಹೇಳಲಾಗಿತ್ತು. ಕೆಲವು ಹೆಸರುಗಳನ್ನು ಅದರಲ್ಲಿ ಸೇರಿಸಲಾಗಿತ್ತು.

ಈ ವಿಚಾರ ನಮ್ಮ ಗಮನಕ್ಕೆ ಬಂದ ತಕ್ಷಣವೇ ಪ್ರಧಾನಿ ಇಂದಿರಾಗಾಂಧಿಗೆ ನಾನು ಒಂದು ಪ್ರತಿಭಟನೆ ಪತ್ರ ಬರೆದೆ: ಇಂಥ ತಂತ್ರಗಳು ಹಿಂದೆಯೂ ಫಲಿಸಿಲ್ಲ. ಮುಂದೆಯೂ ಫಲಿಸದು. ತಾತ್ಕಾಲಿಕವಾಗಿ ಏನಾದರೂ ಪ್ರಯೋಜನ ಆದೀತು ಆದರೆ ಇಂಥ ನೈತಿಕ ದಿವಾಳಿತನದ ಕ್ರಮಗಳು ಇತಿಹಾಸದ ಕಸದ ಬುಟ್ಟಿಗೆ ಸೇರುತ್ತದೆ. ನಮ್ಮ ವಿರುದ್ಧದ ಪಿತೂರಿಯ ವಿಚಾರವಾಗಿ ಪರಿಶೀಲಿಸಿ ನಿಮ್ಮ ರಾಜಕೀಯ ವಿರೋಧಿಗಳ ವಿರುದ್ಧ ಹೋರಾಡುವಾಗ ಪ್ರಜಾಪ್ರಭುತ್ವದ ಮೂಲ ಸಿದ್ಧಾಂತಗಳಿಗೆ ತಿಲಾಂಜಲಿ ನೀಡುವುದಿಲ್ಲವೆಂದು ನಾನು ಆಶಿಸುತ್ತೇನೆ ಎಂದು ಪತ್ರದಲ್ಲಿ ಬರೆದೆ.

(ಮುಂದುವರಿಯುವುದು)

ಸಂಗಾತಿ ಇಂದ್ರಜಿತ್ ಗುಪ್ತ ನಿಧನ



ಕಮ್ಯುನಿಸ್ಟ್ ಚಳುವಳಿಯ ಅಗ್ರಗಣ್ಯ ನಾಯಕ ಇಂದ್ರಜಿತ್ ಗುಪ್ತ ಫೆಬ್ರವರಿ 20 ರಂದು ಕಲ್ಕತ್ತಾದ ತಮ್ಮ ನಿವಾಸದಲ್ಲಿ ನಿಧನರಾಗಿದ್ದಾರೆ. 1918 ರ ಮಾರ್ಚ್ 18 ರಂದು ಕಲ್ಕತ್ತದಲ್ಲಿ ಜನಿಸಿದ ಇಂದ್ರಜಿತ್ ಗುಪ್ತಾರವರು ಜ್ಯೋತಿಬಸು, ಭೂಪೇಶ್ ಗುಪ್ತ, ಮೋಹನ್ ಕುಮಾರ್ ಮಂಗಳಂ ವರ ಸಹವರ್ತಿಗಳಾಗಿದ್ದು ಲಂಡನ್‌ನಲ್ಲಿ ಬ್ಯಾರಿಸ್ಟರ್ ಕಲಿತು ಭಾರತಕ್ಕೆ ಬಂದಾಗ ಸ್ವಾತಂತ್ರ್ಯ ಚಳುವಳಿಯ ಭಾಗವಾಗಿ, 1940 ರಲ್ಲಿ ಕಮ್ಯುನಿಸ್ಟ್ ಚಳುವಳಿಯಲ್ಲಿ ಧುಮುಕಿದರು. ಆ ಸಂದರ್ಭದಲ್ಲಿ ಕಮ್ಯುನಿಸ್ಟ್ ಪಕ್ಷವನ್ನು ಕಾನೂನು ಬಾಹಿರಗೊಳಿಸಿದ್ದರೂ ಅವರು ಎದೆಗುಂದಿರಲಿಲ್ಲ ಬದಲಾಗಿ, 'ಸಂದೇಶವಾಹಕ'ನಾಗಿ ಭೂಗತ ಕೆಲಸ ಮಾಡಿದರು.

ಪಕ್ಷದ ಮೇಲಿನ ನಿರ್ಬಂಧವನ್ನು ತೆಗೆದ ನಂತರ ಕಲ್ಕತ್ತಕ್ಕೆ ಹೋಗಿ ಸೆಣಬು ಕಾರ್ಮಿಕರ ಮಧ್ಯೆ ಕೆಲಸ ಮಾಡಿದು. ನಂತರ ಬಂದರು ಕಾರ್ಮಿಕರ ಮಧ್ಯೆ ಕೆಲಸ ಮಾಡಿದರು. ನಂತರ ಬಂದರು ಕಾರ್ಮಿಕರ ಮಧ್ಯೆ ಕೆಲಸ ಮಾಡಿದ ಅವರು ಅಖಿಲ ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸ್(ಎಐಟಿಯುಸಿ)ನ ಪ್ರಧಾನ ಕಾರ್ಯದರ್ಶಿಯಾಗಿ ಕೆಲಸ ಮಾಡಿದರು.

1992 ರಲ್ಲಿ ಅತ್ಯುತ್ತಮ ಸಂಸದೀಯ ಪಟು ಎಂದು ಗೌರವಿಸಲ್ಪಟ್ಟು ಇಂದ್ರಜಿತ್ ಗುಪ್ತಾ 1960 ರಿಂದ ಸತತ 11 ಬಾರಿ ಲೋಕಸಭೆಗೆ ಆಯ್ಕೆಯಾಗಿದ್ದರು. 1977 ರಲ್ಲಿ ತುರ್ತುಪರಿಸ್ಥಿತಿಯನ್ನು ಬೆಂಬಲಿಸದ ತಪ್ಪಿಗಾಗಿ ಒಮ್ಮೆ ಸೋಲನ್ನು ಅನುಭವಿಸಬೇಕಾಯ್ತು.

ಹಲವಾರು ಭಾಷೆಗಳನ್ನು ಬಲ್ಲವರಾಗಿದ್ದ ಅವರು ಹೆಚ್.ಡಿ.ದೇವೇಗೌಡ ಮತ್ತು ಐ.ಕೆ.ಗುಜ್ರಾಲ್ ಅವರ ಸಂಪುಟದಲ್ಲಿ ಗೃಹ ಸಚಿವರಾಗಿದ್ದರು. ಚಿಕ್ಕ ಮತ್ತು ಚೊಕ್ಕವಾಗಿ ವಿಷಯವನ್ನು ಮಂಡಿಸುತ್ತಿದ್ದ ಅವರು ಲೋಕಸಭೆಯಲ್ಲಿ ಮಾತನಾಡಲು ನಿಂತರೆ ಪಕ್ಷಾತೀತವಾಗಿ ಸದಸ್ಯರು ತದೇಕ ಚಿತ್ತದಿಂದ ಆಲಿಸುತ್ತಿದ್ದರು.

ಅವರು ಉತ್ತಮ ಬರಹಗಾರರು ಕೂಡಾ ಹಣಕಾಸು ರಕ್ಷಣೆ ಮತ್ತು ವಿದೇಶ ವ್ಯವಹಾರಗಳ ಕುರಿತಂತೆ ಹಲವಾರು ಪುಸ್ತಕಗಳನ್ನು ಬರೆದಿದ್ದಾರೆ.

ಜೀವನವಿಡೀ ಕಮ್ಯುನಿಸ್ಟ್ ಚಳುವಳಿಯಾಗಿ ಮೀಸಲಾಗಿರಿಸಿದ ಕಾಂ. ಗುಪ್ತ ಬಹುಕಾಲ ಸಿಪಿಐ ನ ಪ್ರಧಾನ ಕಾರ್ಯದರ್ಶಿಯಾಗಿದ್ದರು.

ಇಂದ್ರಜಿತ್ ಗುಪ್ತ ಅವರ ನಿಧನದಿಂದ ಎಡ ಚಳುವಳಿ ಮತ್ತು ಕಾರ್ಮಿಕ ಚಳುವಳಿಗೆ ತೀವ್ರ ನಷ್ಟವುಂಟಾಗಿದೆ.

ಓದುಗರ ಗಮನಕ್ಕೆ

ಎಸ್.ವೈ.ಗುರುಶಾಂತ್‌ರವರನ್ನು ಪತ್ರಿಕೆಯ ಸಂಪಾದಕರನ್ನಾಗಿ ಸಂಪಾದಕ ಮಂಡಳಿ ಆಯ್ಕೆ ಮಾಡಿದೆ. ದೇಶ ಹಾಗೂ ರಾಜ್ಯದಲ್ಲಿ ತೀವ್ರ ಬದಲಾಗುತ್ತಿರುವ ಪರಿಸ್ಥಿತಿ, ಜನ ಚಳುವಳಿಯ ಅಗತ್ಯ ಹಾಗೂಆದ್ಯತೆಗಳ ಹಿನ್ನೆಲೆಯಲ್ಲಿ ಸಂಪಾದಕರಾಗಿದ್ದ ಜಿ.ಎನ್.ನಾಗರಾಜ್‌ರವರಿಗಾದ ಹೊಸ ಕಾರ್ಯಹಂಚಿಕೆ ಈ ಬದಲಾವಣೆ ತಂದಿದೆ

ರಾಜ್ಯಪಾಲರ ಭಾಷಣ: ಜನರ ಸಂಕಷ್ಟಗಳಿಗೆ ಕಡು ತಿರಸ್ಕಾರ

ವಿಧಾನಸಭೆಯ ಅಧಿವೇಶನ ಆರಂಭಗೊಂಡಿದೆ. 2001-2001 ರ ಸಾಲಿನ ಬಜೆಟ್ ಮಂಡಿಸುವ ಅಧಿವೇಶನ ಎಂಬುದು ರಾಜ್ಯದ ಎಲ್ಲರೂ ಇತ್ತ ಗಮನ ಹರಿಸುವಂತೆ ಮಾಡಿದೆ.

ಈ ಸರ್ಕಾರದಿಂದ ಜನತೆ ನಿರೀಕ್ಷಿಸಿದ್ದು ಬವಣೆಯ ತಮ್ಮ ಬದುಕಿಗೆ ಏನಾದರೂ ಪರಿಹಾರ ಸಿಗುವುದೇ ಎಂದು. ಆದರೆ ಅವರ ಬದುಕು ಬಾಣಲೆಯಿಂದ ಬೆಂಕಿಗೆ.

ಕೇಂದ್ರ ಸರ್ಕಾರದ ಆಮದು-ರಫ್ತು ನೀತಿಯಿಂದ ರೈತ-ಕೂಲಿಕಾರರು ಕಂಗಾಲು. ಫಸಲಿಗೆ ಬೆಲೆ ಸಿಗದೇ, ಸಾಲ ತೀರಿಸಲಾಗದೆ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ಪ್ರಕರಣಗಳ ಸರಮಾಲೆ. ವಿದ್ಯುತ್ ದರ ಏರಿಕೆಯ ಬರೆ, ದುಬಾರಿಯಾಗುತ್ತಿರುವ ಪಡಿತರ ವಸ್ತುಗಳು, ಮುಚ್ಚುತ್ತಿರುವ ಕೈಗಾರಿಕೆಗಳು, ಉದ್ಯೋಗಗಳ ನಾಶ, ದುಬಾರಿ ಶಿಕ್ಷಣ, ಬೆಲೆ ಏರಿಕೆ ಈ ಪ್ರಶ್ನೆಗಳು ಜ್ವಲಂತ. ಈ ಅವಧಿಯಲ್ಲಿ ಅತ್ಯಂತ ಕಾಡಿ-ಗೋಳು ತಂದದ್ದು ರೈತರ ಪ್ರಶ್ನೆ. ಈ ಪ್ರಶ್ನೆಗಳಿಗೆ ಸರ್ಕಾರದಿಂದ ಸೂಕ್ತ ಉತ್ತರ-ಪರಿಹಾರವನ್ನು ಜನತೆ ಬಯಸಿದೆ. ಇವುಗಳು ಸೂಕ್ತವಾಗಿ ವಿಧಾನಸಭೆಯಲ್ಲಿ ಎತ್ತಿ ಚರ್ಚಿಸಿ, ಸೂಕ್ತ ಫಲ ಸಿಗಬಹುದೆಂದು ನಿರೀಕ್ಷಿಸಲಾಗಿದೆ. ಆದರೆ ಆರಂಭದ ಸದನಗಳನ್ನು ಉದ್ದೇಶಿಸಿ ಸರ್ಕಾರದ ದಿಕ್ಸೂಚಿಯಂತೆ

ಎಸ್.ವೈ.ಗುರುಶಾಂತ್

ಮಾತನಾಡಿದ ರಾಜ್ಯಪಾಲರ ಭಾಷಣ ಎಲ್ಲಾ ನಿರೀಕ್ಷೆಗಳನ್ನು ಹುಸಿಗೊಳಿಸಿದೆ. ಬಹುಮುಖ್ಯವಾಗಿ ಕೃಷಿರಂಗದ ಬಿಕ್ಕಟ್ಟಿಗೆ ನಿರ್ದಿಷ್ಟವಾದ ಪರಿಹಾರ, ಸೂಚನೆಯನ್ನಾಗಲೀ ಕೇಂದ್ರ ಸರ್ಕಾರದ ನೀತಿಗಳನ್ನು ಖಡಾಖಂಡಿತ ವಿರೋಧಿಸಿ, ಅವುಗಳನ್ನು ಬದಲಿಸಲು ಜನತೆ ಹಾಗೂ ಜನಪ್ರತಿನಿಧಿಗಳ ಹೋರಾಟ ರೂಪಿಸುವುದಕ್ಕಾಗಲಿ ಪ್ರಸ್ತಾವನೆ ಇಲ್ಲ. ತಜ್ಞರ ಸಮಿತಿಗಳ ರಚನೆ ಹಾಗೂ ರಾಜ್ಯ ಆವರ್ತ ನಿಧಿ ಯ ಗುಣಗಾನ ಬಿಟ್ಟರೆ ಬರುತ್ತಿರುವ ಜಾಗತೀಕರಣ, ಮುಕ್ತ ಮಾರುಕಟ್ಟೆ ಧಾಳಿಯಿಂದ ರಕ್ಷಿಸುವ ಕ್ರಮಗಳೇ ಇಲ್ಲ. ಕೇಂದ್ರಕ್ಕೆ ಶ್ವೇತಪತ್ರ ಪ್ರಕಟಣೆಯ ಆಗ್ರಹವೊಂದೇ ಸಾಕೆಂದು ಸರ್ಕಾರ ಭಾವಿಸಿದೆ. ಇನ್ನು ರಸ್ತೆಗಳನ್ನು, ನೀರಾವರಿ ವ್ಯವಸ್ಥೆಯನ್ನು ಖಾಸಗಿಗೆ ಒಪ್ಪಿಸುವ, ವಿದ್ಯುತ್ ಖಾಸಗೀಕರಣದ ಜಾಡನ್ನು ಸಮರ್ಥಿಸಿಕೊಂಡಿದೆ. ಕಂಪ್ಯೂಟರ್ ತಂತ್ರಜ್ಞಾನವೇ ಅಂತಿಮ ಎಂಬಂತೆ ಕೊಂಡಾಡಿದೆ. ಶಿಕ್ಷಣ ವಿರೋಧಿ, ಅಪ್ರಜಾಸತ್ತಾತ್ಮಕ ವಿಶ್ವವಿದ್ಯಾಲಯ ಶಿಕ್ಷಣ ಮಸೂದೆಯನ್ನು, ಖಾಸಗಿಯವರಿಗೆ ಉನ್ನತ ಶಿಕ್ಷಣ ಧಾರೆ ಎರೆಯುವುದು, ನೂತನ ಕಾಲೇಜುಗಳ ಪರವಾನಗಿಯನ್ನು ನಾಚಿಕೆಯಿಲ್ಲದೇ ಸಮರ್ಥಿಸಿಕೊಂಡಿದೆ. ಆಂತರಿಕ ಸಂಪನ್ಮೂಲ ಕ್ರೋಢೀಕರಿಸದೇ ಅಭಿವೃದ್ಧಿ ಸಾಧಿಸುವುದು ಎಂದರೆ ವಿಶ್ವಬ್ಯಾಂಕಿನ ಕೃಪೆಯಿಂದ ಮಾತ್ರ ಎಂಬ ನೀತಿಗೆ ಜೋತು ಬಿದ್ದಿದೆ. ಇವರೆಲ್ಲಾ ಮುಂಬರುವ ಅಘಾತಕಾರಿ ಬಜೆಟ್‌ನ ಮುನ್ಸೂಚನೆಯಾಗಿದೆ.

ಈ ಅಧಿವೇಶನ ಆರಂಭಗೊಂಡು ಇಲ್ಲಿಗೆ ವಾರ ಸಂದರೂ ಜನರ ಜೀವಂತ ಪ್ರಶ್ನೆಗಳು ವಿಧಾನಸಭೆಯಲ್ಲಿ ಗಂಭೀರವಾಗಿ ಪ್ರಸ್ತಾಪಿತವಾಗುತ್ತಿಲ್ಲ. ಸ್ಟಂಟ್‌ಗಳ ಮೇಲೆಯೇ ಅಧಿವೇಶನ ಕಳೆದುಬಿಡುವ , ಸರ್ಕಾರವಿದೆಯೇ ಎಂಬ ಅನುಮಾನ ಬರುತ್ತದೆ. ಅಧಿಕೃತ ವಿರೋಧ ಪಕ್ಷ ಬಿಜೆಪಿಯಂತೂ ಅನೈತಿಕ ಹಕ್ಕನ್ನು ಕಳೆದುಕೊಂಡಿದೆ.

ವಾಜಪೇಯಿ ಸರ್ಕಾರದ ಧಾಳಿ ಜನರ ದಿಕ್ಕೆಡಿಸುವ ಬಿಜೆಪಿ ಚಳುವಳಿ

ಅತ್ತ ಪಾರ್ಲಿಮೆಂಟ್ ಇತ್ತ ವಿಧಾನಸಭೆ ಅಧಿವೇಶನಗಳು ಆರಂಭಗೊಳ್ಳುತ್ತಿರುವಂತೆ ರಾಜ್ಯದ ಬಿಜೆಪಿಗಳ ನರನಾಡಿಗಳು ಹುರಿಗೊಂಡು ರೈತ ಪ್ರೀತಿ ಉಕ್ಕೇರಿ ಮುತ್ತಿಗೆ ಚಳುವಳಿಯಾಗಿ ಮಾರ್ಪಾಡಾಗಿದೆ. ಇಷ್ಟು ದಿನಗಳೂ ಮರೆತು ಹೋಗಿದ್ದ ರೈತರ ಸಂಕಷ್ಟಗಳು ಒಂದು ತಿಂಗಳ ಒಳಗಾಗಿ ಪರಿಹಾರವಾಗದಿದ್ದರೆ ವಿಧಾನಸೌಧಕ್ಕೆ ನುಗ್ಗುತ್ತೇವೆ ಎಂಬ ಗುಡುಗುಗಳು ಬೇರೆ. ಅದೇ ದಿನ ವಿಧಾನ ಪರಿಷತ್ತಿನಲ್ಲಿ ರೈತರ ಬಗ್ಗೆ ಸಿಕ್ಕಾಬಟ್ಟೆ ಕಣ್ಣೀರು ಹರಿಸಿ, ನಿಯಮಗಳನ್ನು ಗಾಳಿಗೆ ತೂರಿ ಅಧಿವೇಶನದುದ್ದಕ್ಕೂ ಒಂಟಿ ಕಾಲಿನ ಮೇಲೆ ನಿಂತು ಧರಣಿ ಮಾಡುವುದಾಗಿ ನಿಂತ ಯಡಿಯೂರಪ್ಪನವರು ಹಾಸ್ಯಾಸ್ಪದಕ್ಕೆ ಈಡಾಗಿ ಮತ್ತೆ ಆಸನದಲ್ಲಿ ಪ್ರತಿಷ್ಠಾಪಿತವಾದುದು ಮತ್ತೊಂದು ಸಂಗತಿ.

ಮಾರ್ಚ್ 1 ರಂದೇ ಯಾಕೆ ಈ ರ್‍ಯಾಲಿ ಹೂಡಲಾಯಿತು? ಕಾರಣ ಸ್ಪಷ್ಟ. ಫೆಬ್ರವರಿ 28 ರಂದೇ ಕೇಂದ್ರ ಸರ್ಕಾರದ ಬಜೆಟ್. ಅದರ ಅಘಾತಗಳಿಂದ ಜನರ ಗಮನ ವಾಜಪೇಯಿ ಸರ್ಕಾರದ ವಿರುದ್ಧ ತಿರುಗದಂತೆ ಅದು ರಾಜ್ಯ ಸರ್ಕಾರದ ವಿರುದ್ಧವಾಗುವಂತೆ ಹೂಡಿದ ನಾಟಕವೇ ಇದು. ನಾಯಕಗಣ ಮಾತನಾಡಿದ ಪ್ರತಿಯೊಂದು ಅಂಶಗಳೂ ಕೇಂದ್ರ ಸರ್ಕಾರದ ಆಮದು -ರಫ್ತು ನೀತಿ, ವಿಶ್ವಬ್ಯಾಂಕ್ ನಿರ್ದೇಶನಗಳ ಫಲಗಳು ಅಲ್ಲ. ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಗಳಿಗೆ ನಿರ್ದೇಶನ ನೀಡಿ(ಬಜೆಟ್‌ನಲ್ಲಿಯೂ) ವಿದ್ಯುತ್ ಕ್ಷೇತ್ರವನ್ನು ಖಾಸಗಿಯವರಿಗೆ ಒಪ್ಪಿಸುವಂತೆಯೂ, ದರಗಳನ್ನು ಹೆಚ್ಚಿಸಬೇಕೆಂದೂ ದಬಾಯಿಸುತ್ತಿದ್ದ ಯಡಿಯೂರಪ್ಪ, ಸೇಡಂ ಕೂಡಸ ರಾಜ್ಯ ಸರ್ಕಾರವೇ ವಿದ್ಯುತ್ ಸಮಸ್ಯೆ ಬಗೆಹರಿಸಬೇಕು ಎಂದಿದೆ. ರೈತರ ಫಸಲಿಗೆ ಕೇಂದ್ರ ಸರ್ಕಾರವೇ ಬೆಂಬಲ ಬೆಲೆ ನೀಡಬೇಕು ಮತ್ತು ಆಮದು - ರಫ್ತು ನೀತಿ ಬಿಗಿಗೊಳಿಸಬೇಕು, ಆದರೆ ಹಣಕಾಸೇ ಇಲ್ಲದ ರಾಜ್ಯ ಸರ್ಕಾರವೇ ಹೊಣೆ ಹೊರಲು ಒತ್ತಾಯಿಸುತ್ತಿರುವುದು ಎಷ್ಟು ಸಮಂಜಸ. ಇವು ಅರಿಯದಷ್ಟು ಮುಗ್ಧರೇನಲ್ಲ ಅವರು.

ಆದರೆ ಇವರೆಷ್ಟೇ ಕಸರತ್ತು ಮಾಡಿದರೂ ವಾಜಪೇಯಿ ಸರ್ಕಾರದ ಹುನ್ನಾರಗಳನ್ನು ಮರೆಮಾಚಲು ಸಾಧ್ಯವಿಲ್ಲ. ಕೇಂದ್ರದ ನೀತಿಗಳನ್ನು ರಾಜ್ಯ ಸರ್ಕಾರದ ಜಾರಿಯ ಕ್ರಮಗಳನ್ನು ಜನತೆ ಅರಿಯುತ್ತಲಿದ್ದಾರೆ.

ಕರ್ನಾಟಕ ಈ ವಾರ ಒಂದು ನೋಟ

ಮುಚ್ಚಿದ ಕೆ.ಜಿ.ಎಫ್ ಚಿನ್ನದ ಗಣಿ ಆಸ್ಟ್ರೇಲಿಯಾಕ್ಕೆ ಮಾರುವ ಹುನ್ನಾರ

ಸ್ವಾತಂತ್ರ್ಯ ಪೂರ್ವದಲ್ಲಿ ಸುಮಾರು 40 ಸಾವಿರ ಕಾರ್ಮಿಕರನ್ನು ಹೊಂದಿ ಕೆ.ಜಿ.ಎಫ್ ನಂತಹ ಲಕ್ಷಾಂತರ ಜನಸಂಖ್ಯೆ ಹೊಂದಿದ ಪತ್ರಿಕಾ ಹುಟ್ಟಿಗೆ ಕಾರಣವಾಗಿದ್ದ ದೇಶದ ಸಾರ್ವಜನಿಕ ಕ್ಷೇತ್ರದ ಒಂದು ಹೆಮ್ಮೆಯ ಕೈಗಾರಿಕೆಯಾಗಿದ್ದ ಕೆ.ಜಿ.ಎಫ್‌ನ ಚಿನ್ನದ ಗಣಿಯನ್ನು ಮುಚ್ಚಲು ಕೇಂದ್ರ ಸರ್ಕಾರ ಅಚಲವಾದ ನಿರ್ಧಾರ ಕೈಗೊಂಡಿದೆ.

ಸಿಐಟಿಯು ಒಳಗೊಂಡು ಅಲ್ಲಿನ ಎಲ್ಲಾ ಕಾರ್ಮಿಕ ಚಳುವಳಿಗಳು ಕೇಂದ್ರ ಸರ್ಕಾರವನ್ನು ಈ ಚಿನ್ನದ ಗಣಿಯನ್ನು ಲಾಭದಾಯಕವಾಗಿ ನಡೆಸಲು ಸಾಧ್ಯವಿದೆಯೆಂದು ಒತ್ತಾಯಿಸುತ್ತಾ ಪರ್ಯಾಯ ದಾರಿಯನ್ನು ತೋರಿಸುತ್ತಾ ಬಂದಿದ್ದರೂ ಕೇಂದ್ರ ಸರ್ಕಾರ ತನ್ನ ನಿರ್ಧಾರವನ್ನು ಬದಲಾಯಿಸುತ್ತಿಲ್ಲ. ಈ ಗಣಿಯನ್ನು ಉಳಿಸಿ, ಲಾಭದಾಯಕವಾಗಿ ನಡೆಸಲು ನೀಡಿದ್ದ ಹಲವು ಸಲಹೆಗಳನ್ನು ಸರ್ಕಾರ ಗಾಳಿಗೆ ತೂರಿದೆ.

ಲಾಭದಾಯಕವಾಗಿ ನಡೆಸಲು ಸಾಧ್ಯ

ಎಐಎಫ್‌ಆರ್ ಮುಂದೆ ಸಿಐಟಿಯು ಸಂಘಟನೆ ಚಿನ್ನದ ಗಣಿಯನ್ನು ಲಾಭದಾಯಕವಾಗಿ ನಡೆಸಲು ಸಾಧ್ಯವಿದೆಯೆಂದು ಒತ್ತಾಯಿಸಿತ್ತು. ಮಾತ್ರವಲ್ಲಾ ಈಗಿರುವ 34 ಲಕ್ಷ ಟನ್ ಟೇಲಿಂಗ್ಸ್ ಒಳಗಿನಿಂದ 1200 ಕೋಟಿ ರೂ ಬೆಲೆಯ ಚಿನ್ನವನ್ನು ಪಡೆಯಬಹುದೆಂಬ ಲೆಕ್ಕಾಚಾರವನ್ನು ತೋರಿಸಲಾಗಿತ್ತು. ಅದನ್ನೂ ಎಐಎಫ್‌ಆರ್ ಒಪ್ಪಿತ್ತು ಕೂಡ.

ಬಂಡವಾಳ ಸಿಗದೇ ನಿಂತ ಯೋಜನೆ

ಈ ಸೂಚನೆಯ ಮೇರೆಗೆ ಒಂದೂವರೆ ತಿಂಗಳ ಅವಧಿಯೊಳಗೆ ಯೋಜನೆಯನ್ನು ಸಿದ್ಧಗೊಳಿಸಲು ಹಾಗೂ ಅದಕ್ಕೆ ಬೇಕಾದ 70 ಕೋಟಿ ಬಂಡವಾಳವನ್ನು ಕಾರ್ಮಿಕರೇ ಒದಗಿಸಲಿ ಎಂದು ಹೇಳಿತು. 70 ಕೋಟಿರೂಪಾಯಿಗಳ ಬಂಡವಾಳ ತೊಡಗಿಸಿದಲ್ಲಿ ಪ್ರತಿವರ್ಷ 40-50 ಕೋಟಿ ರೂಪಾಯಿ ಲಾಭ ತರಬಹುದಾದ ಯೋಜನೆಯಾಗಿತ್ತು. ಆದರೆ ಕಾರ್ಮಿಕರಿಗೆ 70 ಕೋಟಿ ಬಂಡವಾಳ ತೊಡಗಿಸಲು ಸಾಧ್ಯವಾಗದ ಕಾರಣ ಯೋಜನೆ ನಿಂತು ಹೋಯ್ತು.

ಗಣಿ ಮುಚ್ಚಿದ ಕೇಂದ್ರ ಸರ್ಕಾರ

ಎಐಎಫ್‌ಆರ್ ಕೇಸನ್ನು ವಜಾಮಾಡಿದ ನಂತರ ಗಣಿಯನ್ನು ಮುಚ್ಚುವ ನಿರ್ಧಾರಕ್ಕೇ ಮತ್ತೆ ಕೇಂದ್ರ ಸರ್ಕಾರ ಬಂದಿದೆ. ಗಣಿಯನ್ನು ಸಾರ್ವಜನಿಕ ರಂಗದಲ್ಲಿ ಉಳಿಸಿ ಮುನ್ನಡೆಸಲು 70 ಕೋಟಿ ಕೊಡಲೊಪ್ಪದ ಸರ್ಕಾರ ಸ್ವಯಂ ನಿವೃತ್ತಿ ಯೋಜನೆ (ವಿ.ಆರ್.ಎಸ್)ಯಡಿಯಲ್ಲಿ ಈಗಿರುವ ಸಂಬಳದ ಆಧಾರದಲ್ಲಿ ಒಟ್ಟು 120 ಕೋಟಿಯಷ್ಟಾಗುವ ಹಣವನ್ನು ಕೊಟ್ಟು ಗಣಿಯನ್ನು ಮುಚ್ಚುವ ಪ್ರಯತ್ನ 9.2.2001 ರಂದು ನಡೆಯಿತು.

ಬಾಲ ಹಿಡಿದು ಓಡಾಡುತ್ತಿರುವ ಅನಂತಕುಮಾರ್ ಚೇಲಾಗಳು

ಈಗಿರುವ 4000 ಕಾರ್ಮಿಕರಲ್ಲಿ ಕೇವಲ 200 ಕಾರ್ಮಿಕರು ವಿ.ಆರ್.ಎಸ್. ಒಪ್ಪಿರುತ್ತಾರೆ. ಈ ಹಿಂದೆ ಕಾಂಗ್ರೆಸ್‌ನ ಮುಖಂಡರು ಮತ್ತು INTUCಯ ಮುಖಂಡರಾಗಿದ್ದ ಸುಂದರ ಮೂರ್ತಿ ಎಂಬುವವರು ಇದೀಗ ಬಿಜೆಪಿ ನಾಯಕನಾಗಿ ಕೇಂದ್ರದ ಮಂತ್ರಿ ಅನಂತಕುಮಾರ್‌ರವರ ಬಾಲ ಹಿಡಿದು ಗಣಿಯನ್ನು ಮುಚ್ಚಲು, ಕಾರ್ಮಿಕರಿಗೆ ಹೆಚ್ಚಿನ ಪರಿಹಾರ ಒದಗಿಸಲು ಓಡಾಡುತ್ತಿದ್ದಾನೆ.

ಆಸ್ಟ್ರೇಲಿಯನ್ ಕಂಪನಿಗೆ ಮಾರುವ ಸಂಚು

ಇದಕ್ಕಿಂತ ಮುಂಚೆ ವೇತನ ಪುನರ್ ವಿಮರ್ಶೆ ಮಾಡುವ ಯೋಜನೆಯನ್ನು ಮುಂದಿಟ್ಟಿದ್ದಾರೆ. ಅದಾದಲ್ಲಿ 120 ಕೋಟಿ ಆಗುವ ಬದಲು 140 ಕೋಟಿಯಷ್ಟು ಸ್ವಯಂ ನಿವೃತ್ತಿಯೋಜನೆಯ ಮೊತ್ತವಾಗಬಹುದು ಅಥವಾ ಇನ್ನಷ್ಟು ಜಾಸ್ತಿಯಾಗಬಹುದು ಅಷ್ಟನ್ನೂ ಕೊಟ್ಟು ಗಣಿಯನ್ನು ಮುಚ್ಚಿಬಿಡುವುದೇ ಸರ್ಕಾರದ ನಿರ್ಧಾರವಾಗಿದೆ. ತದನಂತರ ಆಸ್ಟ್ರೇಲಿಯನ್ ಕಂಪೆನಿಗೆ ಮಾರಾಟಮಾಡಿ ಕೈತೊಳೆದುಕೊಳ್ಳುವ ಯೋಜನೆ ಸರ್ಕಾರದ್ದಾಗಿದೆ.

ಸಾರ್ವಜನಿಕ ರಂಗದ ಹೆಮ್ಮೆಯ ಕೈಗಾರಿಕೆಯು ಲಕ್ಷಾಂತರ ಜನರ ಬದುಕಿಗೆ ಆಧಾರವಾಗಿದ್ದುದು ಸಾವಿರಾರು ಕೋಟಿ ದೇಶಕ್ಕೆ ಆದಾಯಕೊಟ್ಟಿದು ಜಗತ್ತಿಗೆಲ್ಲಾ ,ಚಿನ್ನ ನೀಡಿದ ಭವ್ಯ ಕೈಗಾರಿಕೆ ಮುಚ್ಚಿಹೋಗಿ ವಿದೇಶಿ ಖಾಸಗಿ ಬಹುರಾಷ್ಟ್ರೀಯ ಕಪಿ ಮುಷ್ಟಿಗೆ ತಳ್ಳುತ್ತಿರುವ ಕೇಂದ್ರ ಸರ್ಕಾರದ ಅಚಲ ನಿಲುವು ಮತ್ತೊಮ್ಮೆ ಜನವಿರೋಧಿಯೆಂಬುದನ್ನು ಸಾಬೀತುಪಡಿಸಿವೆ.

ಜನರಿಂದ ಜೈಲಿಗೆ – ಜೈಲಿನಿಂದ ಜನರೆಡೆಗೆ

ಕ್ರಿಮಿನಾಶಕ ಕುಡಿದು ಸಾಯುತ್ತಿರುವ, ನೇಣಿಗೆ ಕೊರಳೊಡ್ಡುತ್ತಿರುವ ರೈತರ ಬದುಕಿಗೆ ರಕ್ಷಣೆ ಕೊಡಿ ಎಂದು ರಸ್ತೆ ತಡೆ ನಡೆಸಿದರೆ ರಾಜ್ಯ ಗೃಹಮಂತ್ರಿ ಮಲ್ಲಿಕಾರ್ಜುನ ಖರ್ಗೆಯವರ ತವರು ಜಿಲ್ಲೆ ಗುಲ್ಬರ್ಗಾ ಪೋಲೀಸರು ಚಳುವಳಿಕಾರರನ್ನು ದನಕ್ಕೆ ಬಡಿದಂತೆ ಬಡಿದರು. ಪೆಟ್ಟು ಬಿದ್ದವರಿಗೆ ಚಿಕಿತ್ಸೆಯೂ ತಡವಾಯಿತು. ಅರೆ! ಏನಿದು ಆಸ್ಪತ್ರೆಗೆ ಕರೆ ತಂದ ಯುವ ಹೋರಾಟಗಾರರ ಕೈಗೆ ಕೈಕೋಳ! ಇದನ್ನು ಪ್ರತಿಭಟಿಸಬಾರದೇ? ಇವರೇನು ಅತ್ಯಾಚಾರ ಮಾಡಿದವರೆ, ಕೊಲೆ ಮಾಡಿದವರೆ ಎಂದು ಪ್ರಶ್ನಿಸಿದ ಕರ್ನಾಟಕ ಪ್ರಾಂತ ರೈತ ಸಂಘ ರಾಜ್ಯ ಅಧ್ಯಕ್ಷ ಮಾರುತಿ ಮಾನ್ಪಡೆಯವರ ಮೇಲೆ ಕೈ ಮಾಡಲಾಯಿತು. ಜಿಲ್ಲಾ ಕಾರ್ಯದರ್ಶಿ ವಿರೂಪಾಕ್ಷಪ್ಪ ತಡಕಲ್‌ರನ್ನು ಥಳಿಸಿ ಕೆಳಗೆ ಕೆಡವಲಾಯಿತು. ಅವರ ತಲೆ ಬುರುಡೆ ಒಡೆಯಿತು.

ಥಳಿಸಿದ್ದು ಸಾಲದೆಂದು ಮೊಕದ್ದಮೆ ಹೂಡಿ ಜೈಲಿಗೆ ಅಟ್ಟಲಾಯಿತು. ನೀಲಾ, ಗಂಗಮ್ಮನವರು ಜೈಲು ಕಂಡರು. ಹಾಗೆ 41 ಯುವಜನರೂ ಸಹ. ಗುಲ್ಬರ್ಗಾ ಬಂದ್, ಉತ್ತರ ಕರ್ನಾಟಕದ ಹಲವು ಜಿಲ್ಲೆಗಳು ಬಂದ್ ಇತ್ಯಾದಿ ಜನರ ತೀವ್ರ ಪ್ರತಿಭಟನೆ ನಡೆಯಿತು. ಈಗ ಕಾಂ. ಮಾರುತಿ ಮಾನ್ಪಡೆ ಮತ್ತು ಸಂಗಾತಿಗಳ ಬಿಡುಗಡೆಯಾಗಿದೆ. 'ಜನರಿಂದ ಜೈಲಿಗೆ, ಜೈಲಿಂದ ಜನರೆಡೆಗೆ' - ಹೋರಾಟಗಾರರನ್ನು ಸ್ವಾಗತಿಸಿ, ಅಭಿನಂದಿಸುವ ಬೃಹತ್ ಸಮಾವೇಶ ಮಾರ್ಚ್ 1 ರಂದು ಗುಲ್ಬರ್ಗಾದಲ್ಲಿ ಯಶಸ್ವಿಯಾಗಿ ನಡೆಯಿತು.

ಹೋರಾಟವನ್ನು ಮುಂದುವರಿಸುವ ಬದ್ಧತೆಯನ್ನು ಪುನರುಚ್ಚರಿಸಿದ ಸ್ಫೂರ್ತಿಯುತ ಸಮಾವೇಶ ಹೋರಾಟಗಾರರಿಗೆ ಮತ್ತಷ್ಟು ಉತ್ಸಾಹ ತುಂಬಿದೆ.



ನೀಲಾ, ಪ್ರೊ. ಆರ್.ಕೆ.ಹುಡುಗಿ, ಮಾನ್ಪಡೆ, ವಿರೂಪಾಕ್ಷ ತಡಕಲ್

ಉತ್ತರ ಕನ್ನಡದಲ್ಲಿ ಚುರುಕುಗೊಂಡ ರೈತ ಹೋರಾಟ

ಉತ್ತರ ಕನ್ನಡ ರೈತ ಹೋರಾಟದ ನೆಲ. ಈ ನೆಲದಲ್ಲಿ ಇತ್ತೀಚೆಗೆ ಕಾರ್ಮಿಕರ ಸಂಘಟನೆ, ವಿದ್ಯಾರ್ಥಿ ಸಂಘಟನೆಗಳು ಚುರುಕುಗೊಳ್ಳುತ್ತಿರುವಾಗ ರೈತರು ನಮಗೆ ಯಾವ ಉಸಾಬರಿ ಬೇಡವೆಂಬಂತೆ ಸುಮ್ಮನೆ ಕುಳಿತಿದ್ದರು.

ತಾನು, ತನ್ನ ಮನೆ, ಬೆಳೆದ ಬೆಳೆಗೆ ಹೆಚ್ಚಿಲ್ಲದಿದ್ದರೂ ತೀರಾ ಕಡಿಮೆ ಇಲ್ಲದ ಬೆಲೆ, ಹೀಗೆ ಅವರದೇ ಜಗತ್ತಿನಲ್ಲಿ ಮುಳುಗಿದ್ದವರನ್ನು ಎಬ್ಬಿಸಿದ್ದು ಸದ್ಯ ಆಡಳಿತದಲ್ಲಿರುವ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ. ಯಾರನ್ನೂ ನೆಮ್ಮದಿಯಲ್ಲಿ ಇರಲು ಬಿಡಲಾರೆ ಎನ್ನುವ ಶಪಥ ಮಾಡಿ ಕುರ್ಚಿಯಲ್ಲಿ ಕುಳಿತಿದ್ದಾರೋ ಎನ್ನುವಂತೆ ಕಾರ್ಮಿಕರನ್ನು, ಯುವಜನರನ್ನು ಬೀದಿ ಪಾಲು ಮಾಡಿದ ಈ ಕೇಂದ್ರ ಸರ್ಕಾರ ಕೊನೆಗೆ ಕೈ ಹಾಕಿದ್ದು ರೈತರ ಕುತ್ತಿಗೆಗೆ.

ಅರ್ಥವಾಗುತ್ತಿರುವ ಸತ್ಯ

ಹಿಂದೊಮ್ಮೆ ಕಾರ್ಮಿಕರು ಕನಿಷ್ಠ ಕೂಲಿಗಾಗಿ, ಖಾಸಗೀಕರಣದ ವಿರುದ್ಧ, ಜಾಗತೀಕರಣದ ದುಷ್ಪರಿಣಾಮದ ವಿರುದ್ಧ ಬೀದಿಗಿಳಿದು ಮೆರವಣಿಗೆ, ಸಭೆ, ಧರಣಿಗಳನ್ನು ನೋಡಿ ನಗೆ ಚಟಾಕಿ ಹಾರಿಸಿದ ರೈತರನೇಕರು ಇಂದು ಸತ್ಯ ಅರ್ಥಮಾಡಿಕೊಳ್ಳುತ್ತಿರುವುದು ಆಶಾದಾಯಕವಾದ ಸಂಗತಿ.

ಸಿಪಿಐ(ಎಂ), ಸಿಐಟಿಯು, ಎಸ್.ಎಫ್.ಐ.-ಡಿವೈಎಫ್ಐ ಮೊದಲಾದವರು ಜಾಗತೀಕರಣದ ಅಪಾಯಗಳ ಬಗ್ಗೆ ಹೇಳುತ್ತಿದ್ದಾಗ 'ಇವರೆಲ್ಲ ಕೂಪಮಂಡೂಕಗಳು. ಇವರಿಗೆ ಜಗತ್ತಿನ ವಿಸ್ತಾರ ತಿಳಿಯದು. ಏನೇ ಬಂದರೂ ಇವರು ವಿರೋಧಿಸುತ್ತಾರೆ' ಎಂದು ಗೇಲಿ ಮಾಡಿ ಮುಂದೆ ಹೋದವರು ಇಂದು ತಿರುಗಿ ನಿಲುತ್ತಿದ್ದಾರೆ. 'ಹೊಸ ಆರ್ಥಿಕ ನೀತಿಗೆ, ಜಾಗತೀಕರಣ ಮತ್ತು ಖಾಸಗೀಕರಣ ನೀತಿಗೆ' ಎಂದು ಕೂಗಿದರೆ ಧಿಕ್ಕಾರ ಎಂದು ಹೇಳಲು ತೊಡಗಿದ್ದಾರೆ. (ಸದ್ಯ ಕ್ಷೀಣ ಧ್ವನಿಯಲ್ಲಿ ಮುಂದೆ ಧ್ವನಿ ಮೊಳಗಬಹುದು)

ಸಾವಿನ ಸುದ್ದಿಗಾಗಿ ಕಾಯಬೇಕೆ?

ತೊಗರಿ ಬೆಳೆದವನು ಕೀಟನಾಶಕ ಸೇವಿಸಿ ಸತ್ತ, ಹತ್ತಿ ಬೆಳೆಯುವವನು ವಿಷ ಸೇವಿಸಿ ಸತ್ತ, ಆಲೂಗಡ್ಡೆ ಬೆಳೆದ ರೈತ ಆತ್ಮಹತ್ಯೆ ಮಾಡಿಕೊಂಡ. ತೆಂಗಿನ ಕಾಯಿಗೆ ಬೆಂಕಿ ಹಚ್ಚಿದರು ಎಂದು ಪತ್ರಿಕೆಯಲ್ಲಿ ಓದುತ್ತಿದ್ದವನೆ ಸತ್ತವರೆಲ್ಲ ಬಲು ದೂರದವರೆಂದು ಉಸಿರು ಬಿಡುತ್ತಿದ್ದವರಿಗೆ ಅಘಾತ ಕಾದಿದ್ದು ಅಡಿಕೆ, ತೆಂಗಿನ ಬೆಲೆ ಕುಸಿತಕ್ಕೆ ಕಾರಣವಾದ ಮುಕ್ತ ಆಮದು ನೀತಿಯಿಂದ ಸಾಲ ತುಂಬಲಾರದೆ ಮಕ್ಕಳಿಗೆ ಶಿಕ್ಷಣ ಶುಲ್ಕ ತುಂಬಲಾಗದೆ ಅಸಹಾಯಕನಾದ ಉತ್ತರ ಕನ್ನಡದ ರೈತನೊಬ್ಬ ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಎಂದು ಸುದ್ದಿ ಓದುವ ದಿನ ದೂರವಿಲ್ಲ.

ಇಂಥಹ ಸಾವಿನ ಸುದ್ದಿ ಬರುವ ಮೊದಲು ಉ.ಕ.ದ ರೈತರೆಲ್ಲ ಎಚ್ಚೆತ್ತುಕೊಳ್ಳಬೇಕಾಗಿದೆ.

15 ಸಾವಿರದ ಅಡಿಕೆಗೆ 5 ಸಾವಿರವಾಗಿ ಆರು ರೂಪಾಯಿಯ ತೆಂಗಿನಕಾಯಿ ಎರಡು ರೂಪಾಯಿ ಆಗಿ 700 ರೂ. ಭತ್ತ, 350 ರೂಪಾಯಿ ಆದಾಗ ರೈತನ ಅಸಹನೆಯ ಕಟ್ಟೆ ಒಡೆಯುತ್ತಿತ್ತು. ಪ್ರತಿಭಟನೆಯನ್ನು ವೈಯಕ್ತಿಕ ನೆಲೆಯಲ್ಲಿ ಮಾಡಹೊರಟಾಗ ಉತ್ತರ ಕನ್ನಡದ ಅನೇಕ ರಾಜಕೀಯ ನಾಯಕರು (ಸಂಯುಕ್ತ ಜನತಾದಳದ ತಂಡ) ಈ ಪ್ರತಿಭಟನೆಗೊಂದು ದಿಕ್ಕು ಕೊಡಲು ಹೋಗದೆ ಇದೇ ಪ್ರತಿಭಟನೆಯನ್ನೇ ತಣ್ಣಗಾಗಿಸಲು ಪ್ರಯತ್ನಿಸಿದರು. ಆದರೆ ಉತ್ತರ ಕನ್ನಡ ಕರ್ನಾಟಕ ಪ್ರಾಂತ ರೈತ ಸಂಘ ರೈತರಿಗೆ ಆತ್ಮಹತ್ಯೆ ಮಾರ್ಗವಲ್ಲ, ಹೋರಾಟವೇ ಮಾರ್ಗ ಎಂಬುದನ್ನು ತಿಳಿಸಿ ಹೇಳಲು ಪ್ರಯತ್ನಿಸಿತು. ಇದರ ಭಾಗವಾಗಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಪ್ರಾಂತ ರೈತ ಸಂಘ ಅಡಿಕೆ, ತೆಂಗು, ಭತ್ತ ಬೆಳೆಗಾರರನ್ನು ಸಂಘಟಿಸಿ ಹೋರಾಟಕ್ಕೆ ಇಳಿಸಲು ಹೊರಟಿದೆ.

ವಿಷ ಕೊಟ್ಟವರಾರು? ಜೀವರಕ್ಷಕರಾರು?

ಕಳೆದ ಡಿಸೆಂಬರ್ 13 ರಂದು ಶಿರಸಿಯಲ್ಲಿ ಅಡಿಕೆ, ತೆಂಗು, ಭತ್ತದ ಬೆಳೆಗಾರರ ಸಮಾವೇಶ ನಡೆಸಲಾಯಿತು. ಇದರಲ್ಲಿ ಅನೇಕ ತಾಲೂಕುಗಳ ರೈತ ಮುಖಂಡರು ಭಾಗವಹಿಸುವುದರೊಂದಿಗೆ ಮಾಜಿ ಸಚಿವ ಬಿ.ಎಸ್.ಜೈವಂತ, ಜನಮಾಧ್ಯಮ ಪತ್ರಿಕೆಯ ಸಂಪಾದಕ ಶ್ರೀ ಜೈರಾಮ ಹೆಗಡೆ, ಪ್ರಾಂತ ರೈತ ಸಂಘದ ರಾಜ್ಯ ಅಧ್ಯಕ್ಷ ಮಾರುತಿ ಮಾನ್ಪಡೆ, ನಿತ್ಯಾನಂದ ಸ್ವಾಮಿ, ಬಂಗಾರೇಶ್ವರ ಗೌಡ, ಶಾಂತರಾಮ ನಾಯಕ, ಸುಭಾಷಚಂದ್ರ ಶಿರಾಲಿ ಮೊದಲಾದವರು ಭಾಗವಹಿಸಿ ಮಾತನಾಡಿದರು. ರಾಮಕೃಷ್ಣ ಹೆಗಡೆಯವರ ಹೆಸರನ್ನು ಮಾರುತಿ ಮಾನ್ಪಡೆ ಪ್ರಸ್ತಾಪಿಸಿ ಅಂದು ರೈತರಿಗೆ ವಿಷ ಕೊಟ್ಟವರೇ ಇಂದು ಅವರ ಜೀವ ರಕ್ಷಕ ತಾವೆಂದು ಪೋಸು ಕೊಡುತ್ತಾ ಓಡಾಡುತ್ತಿದ್ದಾರೆ. ಮೊದಲ ಬಾರಿಗೆ 714 ವಸ್ತುಗಳನ್ನು ಮುಕ್ತಗೊಳಿಸಲು ಯೋಚಿಸಿದಾಗ ವಾಣಿಜ್ಯ ಸಚಿವರು ಯಾರಿದ್ದರು? ಎಂದು ಪ್ರಶ್ನಿಸಿದರು.

ಮಂಗಳೂರಿನಲ್ಲಿ ನಡೆದ ರಾಜ್ಯ ಮಟ್ಟದ ರೈತರ ಸಮಾವೇಶದಲ್ಲಿಯೂ ಉತ್ತರ ಕನ್ನಡದಿಂದ ಅನೇಕ ರೈತ ಪ್ರತಿನಿಧಿಗಳು ಭಾಗವಹಿಸಿ ಬೆಳೆಗಳ ಬೆಲೆ ಕುಸಿತಕ್ಕೆ, ಈ ದೇಶದ ಸರ್ಕಾರದ ಆರ್ಥಿಕ ನೀತಿಗೂ ಇರುವ ಸಂಬಂಧಗಳ ಬಗ್ಗೆ ತಿಳಿದು ಕೊಳ್ಳುವುದರೊಂದಿಗೆ ವಿನಂತಿ, ಮನವಿ ಅರ್ಪಣೆ, ಕಾಯುವಿಕೆಗಿಂತ ಹೋರಾಟ, ಪ್ರತಿಭಟನೆಯೇ ನಮಗಿರುವ ಅಂತಿಮ ಮಾರ್ಗವೆಂದು ತಿಳಿದುಕೊಂಡರು.

ಹೋರಾಟದ ಹೆಜ್ಜೆಗಳು

ಮುಂದಿನ ಭಾಗವಾಗಿ ನಡೆದದ್ದು ಜನವರಿ 23 ರಂದು ಕಾರವಾರದಲ್ಲಿ ಇಡೀ ಜಿಲ್ಲೆಯ ನೂರಾರು ರೈತರ ಮೆರವಣಿಗೆ, ಸಭೆ, ಜಿಲ್ಲಾಧಿಕಾರಿಗಳ ಕಛೇರಿಯ ಎದುರು ಧರಣಿ. ಇದಕ್ಕೆ ಪೂರ್ವಭಾವಿಯಾಗಿ ಜನವರಿ 1 ರಿಂದ 20 ರವರೆಗೆ ಜಿಲ್ಲೆಯ ಬೇರೆ ಬೇರೆ ಹಳ್ಳಿಗಳಲ್ಲಿ ಪ್ರಚಾರ ಸಭೆಗಳನ್ನು ಮಾಡಿ, ರೈತರು ಸಂಘಟಿತವಾಗಬೇಕಾದ ಅಗತ್ಯಗಳ ಬಗ್ಗೆ ತಿಳುವಳಿಕೆ ಕೊಟ್ಟು ಅದರ ಅಂತಿಮ ಭಾಗವಾಗಿ 23 ರಂದು ಜಿಲ್ಲಾ ಮಟ್ಟದಲ್ಲಿ ಧರಣಿಯನ್ನು ಸಂಘಟಿಸಲಾಗಿತ್ತು. ಜಿಲ್ಲೆಯ ಸುಮಾರು 400 ರಿಂದ 500 ರೈತರು ಇದರಲ್ಲಿ ಭಾಗವಹಿಸಿದರು. ಮೆರವಣಿಗೆಯಲ್ಲಿ ಉತ್ಸಾಹ ದಿಂದ ಪಾಲ್ಗೊಂಡು ಕೇಂದ್ರದ ಬಿಜೆಪಿ ದುಷ್ಟಕೂಟಕ್ಕೆ ಛೀಮಾರಿ ಹಾಕಿದರು. ದೂರದ ಜೋಯ್ಡಾದ ಕಾರಟೋಳಿಯ ರೈತರು ಹತ್ತಾರು ಕಿ.ಮಿ. ನಡೆದು ಅಲ್ಲಿಂದ ಲಾರಿ ಹತ್ತಿ ನೂರಾರು ಸಂಖ್ಯೆಯಲ್ಲಿ ಪಾಲ್ಗೊಂಡಿದ್ದು ಹೋರಾಟದ ಮುನ್ಸೂಚನೆ ಯಾಗಿತ್ತು. ಅಂದು ಧರಣಿಯನ್ನು ಉದ್ಘಾಟಿಸಿ ಮಾತನಾಡಿದ ಕಾಂ. ನಿತ್ಯಾನಂದ ಸ್ವಾಮಿ ಕೇಂದ್ರ ಬಿಜೆಪಿ ನೇತೃತ್ವದ ಸರಕಾರದ ರಾಜ್ಯದ ಕಾಂಗ್ರೆ ಸರಕಾರದ ರೈತ ವಿರೋಧಿ ನೀತಿಯನ್ನು ಬಯಲು ಗೊಳಿಸಿದರು. ಇತ್ತೀಚಿನ ರಾಜ್ಯ ಪ್ರವಾಸದಲ್ಲಿ ಪ್ರಧಾನಿಗಳು ರೈತರ ವಿಷಯದಲ್ಲಿ ವಿಮುಖ ರಾಗಿದ್ದರು. ರೈತರ ಆತ್ಮಹತ್ಯೆ ಒಂದು ಕಡೆ ನಡೆಯುತ್ತಿದ್ದರೆ ಪ್ರಧಾನಿಗಳು ಕುರುಡಾಗಿ ವರ್ತಿಸಿದ್ದಾರೆ ಎಂದು ಸ್ವಾಮಿ ಹೇಳಿದರು. ದೇಶ ಉಳಿಯಬೇಕಾದರೆ ಕೃಷಿ ಉಳಿಯಬೇಕೆಂದರು. ಶಾಂತರಾಮ ನಾಯಕ, ಬಂಗಾರೇಶ್ವರ ಗೌಡ, ಪಿ.ಜಿ.ಭಟ್, ರೈತರ ಹೋರಾಟಕ್ಕೆ ಬೆಂಬಲಿಸಿ ಸಿಐಟಿಯು ನ ಟಿ.ಎಸ್.ನಾಯ್ಕ, ಎಸ್ಎಫ್ಐ ನ ಯುವರಾಜ ಕಂಬಾಳಿ ಮಠ, ಡಿವೈಎಫ್ಐ ನ ಬೊಮ್ಮಯ್ಯನಾಯ್ಕ ಮಾತನಾಡಿದರು. ರೈತ ಮುಖಂಡರಾದ ಶಿರಸಿಯ ಸುಭಾಚಂದ್ರ ಶಿರಾಲಿ, ಕಾರವಾರದ ಜಿ.ಎಲ್. ನಾಯ್ಕ, ಶ್ಯಾಮನಾಥ ನಾಯ್ಕ, ಜೋಯಿಡಾದ ಪ್ರೇಮನಾಥ ವೇಳಿಪ್, ಹೊನ್ನಾವರದ ಶಿವಯ್ಯಗೌಡ, ಮಂಜುನಾಥ ಫುಲಕರ, ವಿಠ್ಠಲ ಭಂಡಾರಿ, ಯಮುನಾ ಗಾಂವ್ಕರ್ ಮುಂತಾದವರು ಧರಣಿ ಕಾರ್ಯಕ್ರಮದ ನೇತೃತ್ವ ವಹಿಸಿದ್ದರು.

ವರದಿ: **ವಿಠ್ಠಲ ಭಂಡಾರಿ**

ಕಾಫಿ ನಾಡಿನಲ್ಲಿ ಹೋರಾಟದ ಬೀಜ ಬಿತ್ತಿದ ಜಾಥಾ

ಹೆಸರು ಮುತ್ತಪ್ಪ, ವಯಸ್ಸು ಸುಮಾರು 48, 8 ಎಕರೆ ಭೂಮಿ ಹೊಂದಿರುವ ಕಾಫಿ ಬೆಳೆಗಾರ ಹುಟ್ಟಿದ್ದು ಕರ್ನಾಟಕದ ಕಾಶ್ಮೀರ, ಸಮೃದ್ಧಿಯ ನಾಡು ಎಂದು ಹೆಸರು ಪಡೆದ 'ಕೊಡಗಿ'ನಲ್ಲಿ.

ಆದರೆ ಕಳೆದ ಒಂದು ವರ್ಷದಿಂದ ತಾನು ಬೆಳೆದ ಕಾಫಿಗೆ ಬೆಂಬಲ ಬೆಲೆ ಸಿಗದೆ, ಮಾಡಿದ ಸಾಲ ತೀರಿಸಲು ಸಾಧ್ಯವಾಗದೆ ಆ ರೈತ ಕಂಡುಕೊಂಡ ಹಾದಿ "ಆತ್ಮಹತ್ಯೆ". ಅದೂ ಕಾಫಿಗೆ ಸಿಂಪಡಿಸಲು ತಂದಿದ್ದ ಔಷಧಿಯನ್ನೇ ಕುಡಿದು!

ಇದು ಕೇವಲ ಕೊಡಗಿನ ಮುತ್ತಪ್ಪನ ಕಥೆ ಮಾತ್ರವಲ್ಲ, ಗುಲ್ಬರ್ಗಾದ ತೊಗರಿ ಬೆಳೆಗಾರರ ರಾಯಚೂರಿನ ಬತ್ತ ಬೆಳೆಗಾರರ ಬಳ್ಳಾರಿಯ ಮೆಣಸಿನಕಾಯಿ... ದಾರವಾಡದ ಆಲೂಗಡ್ಡೆ, ಬೆಳೆಗಾರ ದೊಡ್ಡಬಳ್ಳಾಪುರ ಹೀಗೆ ಒಂದಲ್ಲ ಎರಡಲ್ಲ ಹತ್ತಲ್ಲ ಒಟ್ಟು 80 ರೈತರು ಇದುವರೆಗೂ ಸಾಲದ ಬಾಧೆ ತಾಳಲಾರದೆ ಬೆಂಬಲ ಬೆಲೆ ಸಿಗದೆ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಹಾಗಾದರೆ .. ರೈತರ ಇಂದಿನ ಎಲ್ಲಾ ಸಮಸ್ಯೆಗಳಿಗೂ ಆತ್ಮಹತ್ಯೆ ಮಾತ್ರವೆ ಪರಿಹಾರವೇ? ಇಲ್ಲ. ಆತ್ಮಹತ್ಯೆಯಲ್ಲ, ಆತ್ಮವಿಶ್ವಾಸದ ಹೋರಾಟ ಮಾತ್ರವೇ ಇದಕ್ಕೆ ಪರಿಹಾರ... ಬನ್ನಿ ಅದಕ್ಕಾಗಿ, ರೈತವಿರೋಧಿ ನೀತಿಗಳನ್ನು ಬದಲಿಸಲು ಹೋರಾಟಕ್ಕೆ ಸಿದ್ದರಾಗೋಣ ನಮ್ಮ ಬೆವರಿನ ಪಾಲನ್ನು ಪಡೆಯೋಣ.

ನಾವು ಬೆವರನ್ನು ಸುರಿಸಿ ದುಡಿಯುವ ಜನ ನಮ್ಮ ಬೆವರಿನ ಪಾಲನ್ನು ಕೇಳುವೆವು.

ಕೊಡಗು ಜಿಲ್ಲೆಯಾದ್ಯಂತ 6 ದಿನಗಳ ಕಾಲ ಯುವಜನರು ಅಭಿನಯಿಸಿದ ಬೀದಿ ನಾಟಕದ ಕಥೆಯಿದು.

ಬೀದಿ ನಾಟಕ, ಹಾಡುಗಳು, ಕರಪತ್ರ ಹಂಚಿಕೆ, ಭಾಷಣಗಳ ಮೂಲಕ ವಿರಾಜಪೇಟೆಯಿಂದ ಕುಶಾಲನಗರದವರೆಗೂ ಯುವಜನರ ಜಾಥಾಕ್ಕೆ ಜಿಲ್ಲೆಯಾದ್ಯಂತ, ಕಾಫಿ ಬೆಳೆಗಾರರಿಂದ ಕಾರ್ಮಿಕರಿಂದ ವ್ಯಾಪಾರಸ್ಥರಿಂದ ಅಭೂತಪೂರ್ವ ಪ್ರೋತ್ಸಾಹ ಬೆಂಬಲ ಸಿಕ್ಕಿದೆ ಫೆ.5,6 ಮತ್ತು 7 ರಂದು ಪ್ರಾಂತ ರೈತ ಸಂಘ, ಪ್ರಾಂತ ಕೂಲಿಕಾರರ ಸಂಘಗಳು ಸೇರಿದಂತೆ ರೈತ ಸಂಘಟನೆಗಳು ನಡೆಸುತ್ತಿರುವ ದೇಶವ್ಯಾಪಿ ರಸ್ತೆತಡೆ, ರೈಲು ತಡೆ, ಸರ್ಕಾರಿ ಕಛೇರಿಗಳ ಪಿಕೆಟಿಂಗ್ ಕಾರ್ಯಕ್ರಮಕ್ಕೆ ಪೂರಕವಾಗಿ, ಡಿ.ವೈ.ಎಫ್.ಐ ಕೊಡಗು ಜಿಲ್ಲಾ ಸಮಿತಿಯು ಕಾಫಿ ರಕ್ಷಿಸಿ ಕೊಡಗು ಉಳಿಸಿ" ಎಂಬ ವಿಶಿಷ್ಠ ಜಾಥಾವನ್ನು ಸಂಘಟಿಸಿತ್ತು.

ಈ ವರ್ಷದಲ್ಲಿ ಕಾಫಿಯಿಂದ ಬಂದ ನನ್ನ ಒಟ್ಟು ಆದಾಯ 6 ಲಕ್ಷ ರೂ.ಗಳು ಆದರೆ ನಾನು ಕಾಫಿ ಬೆಳೆಯಲು ಖರ್ಚು ಮಾಡಿದ್ದು ರೂ. 8.50 ಲಕ್ಷಗಳು. ಇಂತಹ ಪರಿಸ್ಥಿತಿ ಇದ್ದರೆ ಕಾಫಿ ಬೆಳೆಗಾರರು ಬದುಕುವುದಾದರೂ ಹೇಗೆ? ಯಾರಾದರೂ ನನಗೆ ಪ್ರತಿ ತಿಂಗಳು 10 ಸಾವಿರ ಹಣ ನೀಡುವುದಾದರೆ ಸಾಕು. ನನ್ನ ಭೂಮಿಯನ್ನು ಅವರಿಗೆ ಬಿಟ್ಟುಕೊಡುವೆ.

ಸ್ವತಃ ಕಾಫಿ ಬೆಳೆಗಾರರು-ಮಾಜಿ ವಿಧಾನ ಪರಿಷತ್ ಸದಸ್ಯರಾದ ಎ.ಕೆ. ಸುಬ್ಬಯ್ಯನವರು ಸಿದ್ದಾಪುರದಲ್ಲಿ ಜಾಥಾದ ಅಂಗವಾಗಿ ನಡೆದ ಬಹಿರಂಗ ಸಭೆಯಲ್ಲಿ ಹೇಳಿದ ಈ ಮಾತು ನಿಜಕ್ಕೂ ಕೊಡಗಿನ ಬೆಳೆಗಾರರ ಪರಿಸ್ಥಿತಿಗೆ ಹಿಡಿದ ಕನ್ನಡಿಯಾಗಿತ್ತು.

ಜಿಲ್ಲೆಯ ವಿವಿಧ ಪ್ರದೇಶಗಳಲ್ಲಿ ಸುಮಾರು 2 ಗಂಟೆಗಳವರೆಗೂ ಬೀದಿ ಭಾಷಣಗಳು ಬಹಿರಂಗ ಸಭೆಗಳು ನಡೆಸಿದರೂ ಜನರು ತದೇಕಚಿತ್ತರಾಗಿ, ಮಾತುಗಳನ್ನು ಆಲಿಸುತ್ತಿದ್ದು, ಪರಿಸ್ಥಿತಿಯ ನಿಜವಾದ ಚಿತ್ರಣವಾಗಿತ್ತು.

ಮಾತ್ರವಲ್ಲ, ಜಾಥಾದ ಕಲಾವಿದರು ಪ್ರತಿಸಭೆ ಬಳಿಕ ಹಣ ಸಂಗ್ರಹ ಮಾಡುತ್ತಿದ್ದಾಗಲೂ ಎಲ್ಲಾ ವರ್ಗದ ಜನರು ಯಾವುದೇ ವಿರೋಧ ವ್ಯಕ್ತಪಡಿಸದೇ (ಸಣ್ಣ ಪ್ರಮಾಣದಲ್ಲಿ ಬಿಜೆಪಿಯವರೂ ಅಡ್ಡಿಪಡಿಸಿದ ಚೆಟ್ಟಳ್ಳಿಯೂ ಸೇರಿ)ಹಣ ಸಹಾಯ ಮಾಡಿ ಪ್ರೋತ್ಸಾಹಿಸಿದ್ದಾರೆ.

ಕಾಫಿ ಪ್ಲಾಂಟರ್‌ಗಳಿಂದ ಸ್ವಾಗತ :

ಕಾಫಿ ಪ್ಲಾಂಟರ್‌ಗಳ ಪೆಟ್ಟಿಗೆಯಲ್ಲಿ ದುಡ್ಡು ತುಂಬಿರಬೇಕು. ಅದ್ದರಿಂದಲೇ ಪರಿಸ್ಥಿತಿ ಇಷ್ಟು ಬಿಗಡಾಯಿಸಿದ್ದರೂ ಅವರು ಬೀದಿಗಿಳಿಯುತ್ತಿಲ್ಲ. ಎಂಬ ಎ.ಕೆ.ಸುಬ್ಬಯ್ಯನವರ ಮಾತಿಗೆ ಅಪವಾದವೆಂಬಂತೆ, ಸೋಮವಾರಪೇಟೆ ಹತ್ತಿರದ ನಂಜರಾಯ ಪಟ್ಟಣದಲ್ಲಿ ಸುಮಾರು 15-20 ಜನ, ಜಾಥಾವನ್ನು ಸ್ವಾಗತಿಸಿದರು. ಮಾತ್ರವಲ್ಲ ಒಂದು ಬಹಿರಂಗ ಸಭೆಯನ್ನು ವ್ಯವಸ್ಥೆ ಮಾಡಿದ್ದರು. ಯುವಜನರ ಜಾಥಾ-ಬೀದಿ ನಾಟಕದಿಂದ ಭಾಷಣಗಳಿಂದ ಪರಿಸ್ಥಿತಿಯನ್ನು ಅರ್ಥಮಾಡಿಕೊಂಡ ಅವರುಗಳು ಫೆ. 7 ರಂದು ನಡೆಯುವ ಜೈಲ್ ಭರೋ ಚಳುವಳಿಯಲ್ಲಿ ನಾವು 4-5 ಜೀಪುಗಳ ಜನರು ಭಾಗವಹಿಸಲು ತೀರ್ಮಾನಿಸಿರುವುದನ್ನು ಬಹಿರಂಗವಾಗಿ - ಘೋಷಿಸಿದರು.

ಬಿಜೆಪಿಗಳಿಂದ ಜಾಥಕ್ಕೆ ಅಡ್ಡಿ

ದಿನಾಂಕ 27 ರಂದು ಯುವಜನರ ಜಾಥಾ ಶನಿವಾರಸಂತೆ, ಕೂಡ್ಲಿಪೇಟೆ, ಮಾದಪುರ, ಶುಂಠಿಕೊಪ್ಪಗಳಲ್ಲಿ ಕಾರ್ಯಕ್ರಮ ಮುಗಿಸಿ, ಚೆಟ್ಟಳ್ಳಿಯನ್ನು ತಲುಪಿದಾಗ ಸಂಜೆ 7 ಗಂಟೆ. ಬಸ್‌ಸ್ಟಾಂಡ್ ಸಮೀಪದಲ್ಲಿ ಕಾರ್ಯಕ್ರಮ ನಡೆಸಲು ಪ್ರಚಾರ ನಡೆಸಿದ ಪರಿಣಾಮವಾಗಿ ಸುಮಾರು 300 ರಷ್ಟು ಜನರು ಜಮಾಯಿಸಿದರು. ಕಲಾವಿದರು ನಾಟಕ ಪ್ರಾರಂಭಿಸುತ್ತಿದ್ದಂತೆ ಜಿಲ್ಲಾ ಯುವಮೋರ್ಚಾದ ಉಪಾಧ್ಯಕ್ಷ ಮತ್ತು ಅವನ ಹಿಂಬಾಲಕರು ಓಡಿಬಂದವರೆ, ಮೈಕ್ ಕಸಿದುಕೊಂಡು ಎಳೆದಾಡತೊಡಗಿದರು. ಮಾತ್ರವಲ್ಲ ನೀವೆಲ್ಲರೂ ಕೇಂದ್ರ ಸರ್ಕಾರದ ವಿರುದ್ದ ಅಪಪ್ರಚಾರ ಮಾಡುತ್ತಿದ್ದೀರಿ, ಕೊಡಗಿನಲ್ಲಿ ಕಾಫಿ ಬೆಲೆ ಕುಸಿತಕ್ಕೆ ಕೇಂದ್ರ ಸರ್ಕಾರ ಕಾರಣವಲ್ಲ. ಗ್ಯಾಟ್, ಡಂಕೆಲ್, ಒಪ್ಪಂದದಲ್ಲಿ ಕಾಫಿ ಮೆಣಸು, ಇಲ್ಲ ಇತ್ಯಾದಿಯಾಗಿ ಕೂಗಾಡತೊಡಗಿದರು ಆಗ ಜಾಥಾದ ಮುಖಂಡರಾಗಿದ್ದ ವಸಂತಕುಮಾರ್ ಹೊಸಮನೆ ಪ್ರಜಾಪ್ರಭುತ್ವದಲ್ಲಿ ನಾವು ಮಾತನಾಡುವ ಹಕ್ಕಿದೆ, ನಾಟಕ ಮಾಡುವುದನ್ನು ತಡೆಯುವಂತಿಲ್ಲ ಎಂದು ಪ್ರತ್ಯುತ್ತರ ನೀಡಿದರು. ಸಭೆಯಲ್ಲಿ ಬಹುಸಂಖ್ಯಾತ ಜನರು ಅವರ ಕೃತ್ಯವನ್ನು ಬಹಿರಂಗವಾಗಿ ಖಂಡಿಸಿದರು. ಮಾತ್ರವಲ್ಲ ಸಭೆ ನಡೆಸಿ ಎಂದು ಬೆಂಬಲಿಸಿದರು. ಆಗ ಡಿವೈಎಫ್ಐ ರಾಜ್ಯ ಕಾರ್ಯದರ್ಶಿ ಕೆ. ಮಹಂತೇಶ್ ಮಾತನಾಡಿ ಕಾಫಿ, ಬತ್ತ, ತೆಂಗು ಅಡಿಕೆ ಬೆಳೆಗಳ ಬೆಲೆ ಕುಸಿತಕ್ಕೆ ಕಾರಣಗಳನ್ನು ಮನಮುಟ್ಟುವಂತೆ ವಿವರಿಸಿದರು. ಜಾಥಾಕ್ಕೆ ಸಭೆಯಲ್ಲಿ ವ್ಯಾಪಾರಸ್ಥರಿಂದ ಜನರಿಂದ ಹಣ ಸಂಗ್ರಹವಾಗುವುದರ ಮೂಲಕ ಬಿಜೆಪಿಗೆ ತಿರುಗೇಟು ನೀಡಿತು.

ಜನಮನ ಹೊಕ್ಕ ಜಾಥಾ

ಬೆಲೆ ಕುಸಿತದ ಕಾರಣವನ್ನು ಬೆಳೆಗಾರರಿಗೆ ವಿವರಿಸಿ ಕೇಂದ್ರ ಸರಕಾರದ ವಿರುದ್ಧ ಬೆಳೆಗಾರರು ಸಂಘಟಿತರಾಗಿ ಹೋರಾಡುವ ಜಾಗೃತಿ ಮೂಡಿಸಲು ಡಿ.ವೈ.ಎಫ್ ಐ.ನ ಕೊಡಗು ಜಿಲ್ಲಾ ಸಮಿತಿಯ ಆಶ್ರಯದಲ್ಲಿ 7 ದಿನಗಳ ಜಾಥಾವನ್ನು ಜ. 24 ರಂದು ವಿರಾಜಪೇಟೆಯಲ್ಲಿ ಕಾಂ॥ ಎಸ್.ವೈ. ಗುರುಶಾಂತ್‌ರವರು ಉದ್ಘಾಟನೆ ಮಾಡಿದರು.

ಈ ಸಭೆಯಲ್ಲಿ ಕೊಡಗು ಕಾಫಿ ಬೆಳೆಗಾರರ ಮುಖಂಡ ಕುಟ್ಟಂಡ ಗೋಪಿ ಅಪ್ಪಯ್ಯ, ಹೆಚ್.ಎಂ.ಕಾಳಯ್ಯ, ಕೃಷ್ಣ ಕುಮಾರ್ ಹಾಗೂ ಪೀಟರ್ ಲೋಬೋರವರು ಮಾತನಾಡಿದರು

ಜಿಲ್ಲೆಯ 3 ತಾಲೂಕುಗಳಲ್ಲಿ ಸಂಚರಿಸುವ ಈ ಜಾಥಾ ವಸಂತ್ ಕುಮಾರ್ ಹೊಸಮನೆ, ಪೀಟರ್ ಲೊಬೊ, ವಿಜಯ, ರಾಮನಾಥರ ನೇತೃತ್ವದಲ್ಲಿ ಮನ ಸೆಳೆಯುವ ನಾಟಕ ಪ್ರದರ್ಶನದೊಂದಿಗೆ ಸಾಗಿತು. ಸಹಸ್ರಾರು ಜನರನ್ನು ಆಕರ್ಷಿಸಿತು.

ಸಿದ್ದಾಪುರದಲ್ಲಿ ಸೂರ್ಯ ನಾರಾಯಣರಾವ್, ಎ. ಕೆ. ಸುಬ್ಬಯ್ಯ ಭಾಷಣ ಮಾಡಿದರು. ಈ ಸಭೆಯಲ್ಲಿ ಹಿರಿಯ ಕಾರ್ಮಿಕ ಮುಖಂಡರಾದ ಐ.ಆರ್.ಅಸ್ರಣ್ಣನವರು, ಡಿ.ವೈ.ಎಫ್.ಐ.ನ ರಾಜ್ಯ ಕಾರ್ಯದರ್ಶಿಯಾದ ಮಹಂತೇಶ್‌ರವರು ಉಪಸ್ಥಿತರಿದ್ದರು.

ಸೋಮವಾರಪೇಟೆಯಲ್ಲಿ ಬಿಜೆಪಿಯ ಸ್ಥಳೀಯ ಶಾಸಕರ ಕಛೇರಿ ಮುಂಭಾಗದಲ್ಲಿಯೇ ನಡೆದ ಬೃಹತ್ ಸಭೆಯನ್ನುದ್ದೇಶಿಸಿ ಮಾಜಿ ಶಾಸಕರು ಪ್ರಾಂತ ರೈತ ಸಂಘದ ಉಪಾಧ್ಯಕ್ಷರಾದ ಜಿ.ವಿ ಶ್ರೀರಾಮರೆಡ್ಡಿ, ಕೆ. ಮಹಾಂತೇಶ್ ಜಾಥಾದ ಮುಖಂಡ ಪೀಟರ್ ಲೋಬೋ ಮಾತನಾಡಿದರು.

ಕುಶಾಲನಗರದಲ್ಲಿ ಜನವರಿ 29 ಜಾಥಾದ ಸುಮಾರೋಪ ಸಭೆಯಲ್ಲಿ ಶ್ರೀರಾಮರೆಡ್ಡಿ ಮತ್ತು ಸ್ಥಳೀಯ ಜಿಲ್ಲಾ ಪಂಚಾಯತ್ ಸದಸ್ಯರಾದ ವಿ.ಪಿ. ಶಶಿದರ್‌ರವರು ಪಾಲ್ಗೊಂಡಿದ್ದರು. ಬೆಳೆಗಾರರಲ್ಲಿ ಹೊಸ ಜಾಗೃತಿ ಮೂಡುವಲ್ಲಿ ಜಾಥಾ ಸಫಲವಾಗಿತ್ತು.

ಹಾನಗಲ್ಲ ತಾಲೂಕಿನ ಅಕ್ಕಿ ಆಲೂರು ಗ್ರಾಮವು ಕೋಮು ಗಲಭೆಯೊಂದಕ್ಕೆ ಸಿಲುಕಿ ಒಂದು ತಿಂಗಳಿಗೂ ಹೆಚ್ಚು ಕಾಲ ತತ್ತರಿಸಿತು. ಗ್ರಾಮದ ದಲಿತರ ಮೇಲೆ ಮುಸಲ್ಮಾನರು ನಡೆಸಿದ ದೌರ್ಜನ್ಯದಲ್ಲಿ ಯುವಕನೊಬ್ಬನ ಹತ್ಯೆಯಾಗಿದೆ ಎಂದು ಚಡ್ಡಿಗಳು ಚೀರಾಡಿದ್ದು ಪತ್ರಿಕೆಗಳಲ್ಲಿ ತಿಂಗಳುಗಟ್ಟಲೆ ವರದಿಯಾಗಿದೆ. ಸುಮಾರು 14 ಸಾವಿರ ಜನಸಂಖ್ಯೆ ಇರುವ ಈ ಗ್ರಾಮದಲ್ಲಿ ಕೇವಲ 4 ಸಾವಿರದಷ್ಟಿರುವ ಮುಸಲ್ಮಾನರು ದೌರ್ಜನ್ಯ ನಡೆಸಿದ್ದು ನಿಜವೆ? ದಲಿತರ ಬಗ್ಗೆ ಚಡ್ಡಿಗಳಲ್ಲಿ ಉಕ್ಕೇರಿದ ಪ್ರೀತಿಯ ಗುಟ್ಟೇನು?.

ಅಕ್ಕಿ ಆಲೂರು ಘಟನೆ

ಕೋಮು ದ್ವೇಷಕ್ಕೊಂದು ದಲಿತ ಮುಖವಾಡ

ನಿತ್ಯಾನಂದ ಸ್ವಾಮಿ

ಹಾವೇರಿ ಜಿಲ್ಲೆಯ ಹಾನಗಲ್ಲ ತಾಲೂಕಿನ ಅಕ್ಕಿ ಆಲೂರು ಗ್ರಾಮದಲ್ಲಿ ಕಳೆದ ಡಿಸೆಂಬರ್ 27 ರಂದು 144ನೆಯ ಸೆಕ್ಷನ್ ಅನ್ವಯ ವಿಧಿಸಲಾಗಿದ್ದ ನಿಷೇದಾಜ್ಞೆ ಫೆಬ್ರವರಿ 1ರ ವರೆಗೂ ಜಾರಿಯಲ್ಲಿತ್ತು. ಘಟನೆಗೆ ಸಂಬಂದಿಸಿದಂತೆ ಇದುವರೆಗೆ ಒಟ್ಟು 45 ಆರೋಪಿಗಳನ್ನು ಬಂಧಿಸಲಾಗಿದೆಯೆಂದೂ, ಇನ್ನುಳಿದ ಆರೋಪಿಗಳ ಬಂಧನಕ್ಕೆ ಚುರುಕಿನ ಕಾರ್ಯಾಚರಣೆ ನಡೆಸಲಾಗುತ್ತಿದೆ ಎಂದೂ, ಅಕ್ಕಿ ಆಲೂರು ಈಗ ಸಂಪೂರ್ಣ ನಿಯಂತ್ರಣದಲ್ಲಿದೆ ಎಂದೂ ಪೊಲೀಸ್ ಮೂಲಗಳು ಹೇಳಿಕೊಂಡಿವೆ. ಮೇಲ್ನೋಟಕ್ಕೆ ಇಲ್ಲಿ ಪರಿಸ್ಥಿತಿ ಸಹಜ ಸ್ಥಿತಿಗೆ ಮರಳುತ್ತಿರುವಂತೆ ಭಾಸವಾಗುತ್ತಿದ್ದರೂ ಇಲ್ಲಿ ಎಲ್ಲವೂ ಸರಿಹೋಗಲು ಬಹುದಿನಗಳ ಪ್ರಜ್ಞಾಪೂರ್ವಕ ಪ್ರಯತ್ನ ಬೇಕಾಗಬಹುದು.

ಆಗಾತಕ್ಕೆ ಒಳಗಾದ ಅಕ್ಕಿ ಆಲೂರು ಗ್ರಾಮ ಇನ್ನೂ ಚೇತರಿಸಿಕೊಂಡಿಲ್ಲ. ಅಂದು ಮುಚ್ಚಿದ ಕೆಲವು ಅಂಗಡಿಗಳು ಇನ್ನೂ ತೆರೆದಿಲ್ಲ. ತೆರೆದಿರುವ ಅಂಗಡಿಗಳಲ್ಲೂ ವ್ಯಾಪಾರದ ಸದ್ದುಗದ್ದಲವಿಲ್ಲ. ವಾರಕ್ಕೊಮ್ಮೆ ನಡೆಯುವ ಸಂತೆ ವಾರಗಟ್ಟಲೆ ರದ್ದಾಗಿ ಜನ ಸೊಪ್ಪು ತರಕಾರಿಗಳಿಗಾಗಿ ಪರದಾಡುವಂತಾಗಿತ್ತು. ಅಂದು ಏನು ನಡೆಯಿತು ಎನ್ನುವ ಬಗ್ಗೆ ಯಾರೂ ಏನನ್ನೂ ಹೇಳಲು ಇಚ್ಛಿಸುತ್ತಿರಲಿಲ್ಲ. ಬೀದಿಗಳಲ್ಲಿ ಮೌನವೇ ಮಡುಕಟ್ಟಿ ನಿಂತಂತಿತ್ತು. ಹುಡುಕುಡುಕಿ ಬೆಂಕಿಯಿಟ್ಟಾಗ ಸುಟ್ಟು ಕರಕಲಾದ ಗೂಡು ಅಂಗಡಿಗಳು ಮಾತ್ರ ಅಂದಿನ ಘಟನಾವಳಿಗಳಿಗೆ ಮೂಕ ಸಾಕ್ಷಿಯಾಗಿ ಈಗಲೂ ಹಾಗೆಯೇ ನಿಂತುಕೊಂಡಿವೆ.

ಪರಸ್ಪರ ಪೈಪೋಟಿಯಲ್ಲಿ ಮುಳುಗಿರುವ ಉತ್ತರ ಕರ್ನಾಟಕದ ಕೆಲವು ಕನ್ನಡ ದಿನಪತ್ರಿಕೆಗಳಿಗೆ ಅಕ್ಕಿ ಆಲೂರು ಘಟನೆ ಸಾಕಷ್ಟು ಆಹಾರವನ್ನು ಒದಗಿಸಿತು. ಆದರೆ ಪತ್ರಿಕೆಗಳು ಘಟನೆಯ ಆಳಕ್ಕೆ ಇಳಿದು ಸತ್ಯಾಂಶಗಳನ್ನು ಬೆಳಕಿಗೆ ತರುವ ಗೋಜಿಗೆ ಹೋಗಲಿಲ್ಲ. ಮೇಲ್ನೋಟಕ್ಕೆ ಕಂಡಂತೆ ಏಕಪಕ್ಷೀಯವಾಗಿ, ಒಂದು ಕೋಮಿನ ಪರವಾಗಿ ಸಿಕ್ಕಾಪಟ್ಟೆ ಬರೆಯಲಾಯಿತು. ಅಕ್ಕಿ ಆಲೂರಿನ ಮುಸಲ್ಮಾನರು ಅಲ್ಲಿಯ ದಲಿತರ ಮೇಲೆ ದೌರ್ಜನ್ಯ ನಡೆಸಿದ್ದಾರೆಂದೂ, ದಲಿತ ಮಹಿಳೆಯೊಬ್ಬಳ ಅಂತ್ಯ ಸಂಸ್ಕಾರಕ್ಕೆ ಅಡ್ಡಿಪಡಿಸಿದರೆಂದೂ, ದಲಿತರ, ಬೆಂಬಲಕ್ಕೆ ನಿಂತಿರುತ್ತಿದ್ದ ಬಾಬಣ್ಣ ಬೆಲ್ಲದ ಎಂಬಾತನನ್ನು ಹೊಡೆದು ಸಾಯಿಸಿದರೆಂದೂ ಇದೊಂದು ಪೂರ್ವಯೋಜಿತ ಕೊಲೆ ಎಂದೂ ವರ್ಣಿಸಲಾಯಿತು. ಪತ್ರಿಕೆಗಳಲ್ಲಿ ಪ್ರಕಟವಾದ ವರದಿಗಳನ್ನು, ಹೇಳಿಕೆಗಳನ್ನು ಓದಿದ ಓದುಗರು ಅಕ್ಕಿ ಆಲೂರಿನ ಮುಸಲ್ಮಾನರ ಬಗ್ಗೆ ದ್ವೇಷಕಾರುವಂತಾಯಿತು. ಮುಸಲ್ಮಾನರ ಮನೆಗಳು ಅಂಗಡಿಗಳು ಬೆಂಕಿಗೆ ಆಹುತಿಯಾದರೂ ಯಾರೊಬ್ಬರೂ ಅದನ್ನು ಖಂಡಿಸಲಿಲ್ಲ. ಪೊಲೀಸರು ಮುಸಲ್ಮಾನರ ಮನೆಗಳಿಗೆ ನುಗ್ಗಿ ಸಿಕ್ಕಸಿಕ್ಕವರನ್ನು ಎಳೆದೊಯ್ದು ಜೈಲಿಗೆ ಹಾಕಿದರೂ ಯಾರೊಬ್ಬರೂ ಅವರ ಆತಂಕವನ್ನು ಹಂಚಿಕೊಳ್ಳಲು ಮುಂದಾಗಲಿಲ್ಲ. ವಸ್ತುನಿಷ್ಠ ವರದಿಗಾರರ ಕೊರತೆ ಒಂದೆಡೆಯಾದರೆ ಕೋಮು ಗಲಭೆಯಂತಹ ವಸ್ತುವನ್ನು ಸಹ ಪತ್ರಿಕೆಯ ಪ್ರಸಾರಕ್ಕಾಗಿ ಬಳಸಿಕೊಳ್ಳುವ ಕ್ರೂರ ಲಾಭಕೋರತನ ಇನ್ನೊಂದೆಡೆ.

ದಿನಗಳು ಉರುಳಿದಂತೆ ಅಕ್ಕಿ ಆಲೂರಿನ ಗೊಂದಲಮಯ ಪರಿಸ್ಥಿತಿ ತಾನಾಗಿಯೇ ತಿಳಿಗೊಳ್ಳುತ್ತಿದೆ. ಗಲಭೆಯಲ್ಲಿ ಜೀವ ಕಳೆದುಕೊಂಡವನಿಗಾಗಿ ಮೊಸಳೆ ಕಣ್ಣೀರು ಸುರಿಸುವ ಪುಡಾರಿ ರಾಜಕಾರಣಿಗಳ ಪಾದ ಯಾತ್ರೆಗಳ ನಾಟಕ ಕೊನೆಗೊಳ್ಳುತ್ತಿದ್ದಂತೆ, ನೀಲಿ ವಾಹನಗಳ ಹಾರಾಟ, ಬೂಟುಗಾಲುಗಳ ಅರ್ಭಟ ಕಡಿಮೆಯಾಗುತ್ತಿದ್ದಂತೆ ಘಟನೆಯ ಸ್ಪಷ್ಟ ಚಿತ್ರ ಮೂಡಲಾರಂಭಿಸಿದೆ. ಅಲ್ಪಸಂಖ್ಯಾತ ಮುಸಲ್ಮಾನರ ಸಹನೆಯನ್ನು ಅವರ ದೌರ್ಬಲ್ಯವೆಂದು ಬಗೆದು ಹಾಕಿದ ಲೆಕ್ಕಾಚಾರ ತಲೆಕೆಳಗಾಯಿತು ಎಂಬ ಪಶ್ಚಾತ್ತಾಪವು ಹತಾಶ ಶಕ್ತಿಗಳನ್ನು ಸುಡಲಾರಂಭಿಸಿದೆ.

ಸಹನೆಗೆ ಶಿಕ್ಷೆ ದಂಡ

ಮುಸಲ್ಮಾನರೊಂದಿಗೆ ಕಾಲು ಕೆದರಿ ಜಗಳಕ್ಕೆ ಪ್ರೆಯತ್ನಪಟ್ಟ ಪ್ರಸಂಗಗಳು ಒಂದಲ್ಲ, ಎರಡಲ್ಲ 1981ರಲ್ಲಿ ಗಣೇಶ್ ಚತುರ್ಥಿ ಮತ್ತು ಮೊಹರಂ ಹಬ್ಬಗಳು ಒಟ್ಟೊಟ್ಟಿಗೆ ಬಂದವು. ಎಷ್ಟೋ ವರ್ಷಗಳಿಂದ ಮೊಹರಂ ದೇವರುಗಳನ್ನು ಇಟ್ಟು ಪೂಜಿಸುವ ಜಾಗದಲ್ಲಿಯೇ ಗಣೇಶನ ಮಂಟಪವನ್ನು ನಿರ್ಮಿಸಿ ಮೊಹರಂ ಹಬ್ಬಕ್ಕೆ ಅಡಚಣೆಯನ್ನು ಉಂಟು ಮಾಡಲಾಯಿತು. ಅಂದಿನಿಂದ ಮುಸಲ್ಮಾನರು ಮೊಹರಂ ಹಬ್ಬವನ್ನು ತಾವು ವಾಸವಿರುವ ಓಣಿಯಲ್ಲಿ ಮಾತ್ರ ಆಚರಿಸುತ್ತಿದ್ದಾರೆ. ಯಾವುದೇ ಮೆರವಣಿಗೆಗಳಲ್ಲಿ ವಾದ್ಯಗಳನ್ನು ಬಾರಿಸುತ್ತಾ ಬರುವವರು ಕುಂಬಾರ ಓಣಿಯಲ್ಲಿರುವ ಮಹಬೂಬಿಯಾ ಮಸೀದಿಯ ವ್ಯಾಪ್ತಿಯಲ್ಲಿ ಬಾರಿಸುವುದನ್ನು ಬಂದ್ ಮಾಡಿ ಮೌನವಾಗಿ ಸಾಗುತ್ತಿದ್ದರು. ಆದರೆ 1986ರಿಂದ ಮಸೀದಿಯಲ್ಲಿ ಸಮಾಜ ನಡೆಯುತ್ತಿರುವಾಗಲೇ ವಾದ್ಯಗಳನ್ನು ಬಾರಿಸುತ್ತಾ ಬಂದು ಸಮಾಜ ಮಾಡಲು ಅಡ್ಡಿಯುಂಟುಮಾಡುವುದು ಆರಂಭವಾಗಿದೆ. ಹೋಳಿ ಹಬ್ಬದ ಮೆರವಣಿಗೆಯನ್ನು ಮಸೀದಿಯ ಮುಂದೆ ಗಂಟೆಗಟ್ಟಲೆ ನಿಲ್ಲಿಸಿ, ದಾಂದಲೆ ಮಾಡುವುದು, ಬೈದಾಡುವುದು, ಬಣ್ಣ ತೂರುವುದು ಮಸೀದಿಯ ಎದುರುಗಡೆ ಇರುವ ಝುಂಡೆ ಕಟ್ಟೆಗೆ ಚಪ್ಪಲಿ ತೂರುವುದು ಇತ್ಯಾದಿ ಅಸಭ್ಯ ವರ್ತನೆ

ಪುಟ 8 ಕ್ಕೆ

ಸ್ಮಶಾನ ವಿವಾದ ಎಂಬ ಕಟ್ಟುಕತೆ


ಗ್ರಾಮದ ರಿ.ಸ.ನಂ. 189ರ 5 ಎಕರೆ 36 ಗುಂಟೆ ಕ್ಷೇತ್ರವನ್ನು ಕಳೆದ ನೂರಾರು ವರ್ಷಗಳಿಂದ ಗ್ರಾಮದ ಮುಸಲ್ಮಾನರು ಸ್ಮಶಾನಕ್ಕಾಗಿ ಬಳಕೆ ಮಾಡುತ್ತಾ ಬಂದಿರುತ್ತಾರೆ. ಗ್ರಾಮದ ಪಾಟೀಲ್ ಬಂಧುಗಳಿಂದ ದಾನವಾಗಿ ಪಡೆದಿದ್ದ ಈ ಭೂಮಿಯಲ್ಲಿ ಮುಸಲ್ಮಾನರು ಶವಗಳನ್ನು ಹೂಳುತ್ತಾ ಬಂದಿರುತ್ತಾರೆ. ಕೆಲವು ವರ್ಷಗಳ ಹಿಂದೆ ಪಾಟೀಲ್ ಮನೆತನದ ಗದಿಗೆಪ್ಪ ಗೌಡ್ರು ಎಂಬವರು ಈ ಸ್ಮಶಾನ ಭೂಮಿಯು ತನಗೆ ಸೇರಿದ್ದು ಎಂದು ನ್ಯಾಯಾಲಯದ ಮೊರೆ ಹೋಗಿದ್ದರು. ನ್ಯಾಯಾಲಯವು ಸ್ಥಳ ಪರಿಶೀಲನೆ ನಡೆಸಿ ಗದಿಗೆಪ್ಪ ಗೌಡರ ಕೋರಿಕೆಯನ್ನು ತಳ್ಳಿಹಾಕಿತ್ತು. ನ್ಯಾಯಾಲಯದಲ್ಲಿ ಸೋಲು ಅನುಭವಿಸಿದ ಗೌಡರು ಸುಮ್ಮನಾಗಲಿಲ್ಲ. ಗ್ರಾಮದ ದಲಿತರಿಗೆ (ಚಲವಾದಿ ಸಮಾಜದವರು) ಈ ಭೂಮಿಯನ್ನು ತಮ್ಮ ಹಿರಿಯರು ದಾನವಾಗಿ ನೀಡಿದ್ದರು ಎಂಬ ಕಟ್ಟುಕತೆಯನ್ನು ಹುಟ್ಟಿಸಿ ಮುಗ್ಧ ದಲಿತರನ್ನು ಪ್ರಚೋದಿಸತೊಡಗಿದರು. ಗೌಡರ ನಿಧನದ ನಂತರ ಅವರ ವಂಶಸ್ಥರು ಈ ಸ್ಮಶಾನ ಭೂಮಿಯ ಬಗ್ಗೆ ಆಸಕ್ತಿವಹಿಸಲಿಲ್ಲ.

ಅಕ್ಕಿ ಆಲೂರಿನಲ್ಲಿ ಆರ್.ಎಸ್.ಎಸ್. ಚಟುವಟಿಕೆಗಳು ಈ ಹಂತದಿಂದ ಹೆಚ್ಚಾದವು. ಇಲ್ಲಿ ಒಮ್ಮೆ ಅದರ ಪ್ರಾದೇಶಿಕ ಬೈಠಕ್ ಹಾಗೂ ಪಥಚಲನವೂ ನಡೆಯಿತು. ವಿದ್ಯಾರ್ಥಿಗಳ ನಡುವೆ ಎ.ಬಿ.ವಿ.ಪಿ. ಚಟುವಟಿಕೆಗಳೂ ಆರಂಭವಾದವು. ಇಲ್ಲಿಯ ಅಲ್ಪಸಂಖ್ಯಾತ ಮುಸ್ಲಿಂ ಸಮಾಜವನ್ನು ಗುರಿಯಾಗಿಟ್ಟುಕೊಂಡೇ ಇಲ್ಲೊಂದು ಸಂಘ ಪರಿವಾರ ಬೆಳೆಯುತ್ತಿದ್ದುದು ಹೆಚ್ಚಾಗಿ ಯಾರ ಗಮನಕ್ಕೂ ಬರಲಿಲ್ಲ. ಇವರು ಮುಸಲ್ಮಾನರ ವಿರುದ್ಧ ತುಂಬಾ ವ್ಯವಸ್ಥಿತವಾಗಿ ಮುಗ್ಧ ದಲಿತರನ್ನು ಎತ್ತಿಕಟ್ಟತೊಡಗಿದರು. ಇವರ ಚಿತಾವಣೆ ಮತ್ತು ಕುಮ್ಮಕ್ಕಿನಿಂದ ದಲಿತ ಚಲವಾದಿಯರು ಮುಸಲ್ಮಾನರ ಸ್ಮಶಾನವನ್ನು ಕಬಳಿಸಲು ಹೊಂಚುಹಾಕ ತೊಡಗಿದರು. ಪಕ್ಕದಲ್ಲೇ ಇರುವ ಹಿಂದುಗಳ ಸ್ಮಶಾನದ ಒಂದು ಭಾಗವನ್ನು ದಲಿತರಿಗೆ ಕೊಟ್ಟು ಸಮಸ್ಯೆಯನ್ನು ಎಂದೋ ಬಗೆಹರಿಸಬಹುದಾಗಿತ್ತು. ದಲಿತರ ಬಗ್ಗೆ ಆರ್.ಎಸ್.ಎಸ್. ಹಿಂದುಗಳಿಗೆ ನಿಜವಾದ ಕಾಳಜಿ ಇದ್ದಿದ್ದರೆ ಚಲವಾದಿಯರ ಶವಗಳನ್ನು ಹಿಂದು ಸ್ಮಶಾನದಲ್ಲಿಯೇ ಹೂಳುವ ಅವಕಾಶ ನೀಡಬಹುದಿತ್ತು. ಮುಸಲ್ಮಾನರ ವಿರುದ್ಧ ತಮ್ಮ ದ್ವೇಷ ಸಾಧನೆಗಾಗಿ ಇವರು ಧರಿಸಿದ ದಲಿತ ಮುಖವಾಡ ಇತ್ತೀಚೆಗಷ್ಟೇ ಕಳಚಿಕೊಂಡಿದೆ.

ಸ್ಮಶಾನವನ್ನು ಗಿಟ್ಟಿಸಿಕೊಳ್ಳುವ ಆತುರದಲ್ಲಿ ತಾವು ಮಾಡುತ್ತಿರುವುದು ಸರಿಯೇ ಅಥವ ಅಲ್ಲವೆ ಎಂಬುದನ್ನು ವಿಚಾರಮಾಡದೆ ಚಲವಾದಿಯರು ರಾತ್ರೋ ರಾತ್ರಿ ಒಂದು ಶವವನ್ನು ಮುಸಲ್ಮಾನರ ಸ್ಮಶಾನದಲ್ಲಿ ದಫನ್ ಮಾಡಿಯೇ ಬಿಟ್ಟರು. ಮುಸಲ್ಮಾನರು ತೋರಿದ ಸಹನೆಯಿಂದ ಅಂದೇ ನಡೆಯುವಂತಹ ಗಲಭೆ ನಡೆಯಲಿಲ್ಲ. ಸಮಸ್ಯೆಯನ್ನು ಇತ್ಯರ್ಥಗೊಳಿಸುವ ಸದುದ್ದೇಶದಿಂದ ಮುಸಲ್ಮಾನರು ತಮ್ಮ ಸ್ಮಶಾನದ 30 ಅಡಿ ಅಗಲ 180 ಉದ್ದದ ಭಾಗವನ್ನು ಚಲವಾದಿ ಸಮಾಜದವರಿಗೆ ಬಿಟ್ಟುಕೊಟ್ಟರು. ಚಲವಾದಿಯರು ತೃಪ್ತರಾದರು. ಆದರೆ ಚಡ್ಡಿ ಚತುರರು ಸುಮ್ಮನಾಗಲಿಲ್ಲ. ಒಂದು ಶವವನ್ನು ಹೂಳುವುದರಿಂದ 30 ಅಡಿ ಅಗಲದ ಜಾಗ ಸಿಕ್ಕರೆ ಇನ್ನೊಂದು ಶವವನ್ನು ಹೂಳಲು ಸಾಧ್ಯವಾದರೆ ಇನ್ನಷ್ಟು ಜಾಗವನ್ನು ದಕ್ಕಿಸಿಕೊಳ್ಳಬಹುದು ಎಂದು ಚಡ್ಡಿಗಳು ದಲಿತರ ಕಿವಿ ಊದತೊಡಗಿದರು.

ಅಂದಿನಿಂದ ಮುಸಲ್ಮಾನರೂ ಎಚ್ಚರಗೊಂಡರು. ತಮ್ಮ ಸ್ಮಶಾನ ಅತಿಕ್ರಮಣವಾಗುವುದನ್ನು ತಡೆಯಲು ಸನ್ನದ್ಧರಾದರು. ಸ್ಮಶಾನದ ಸುತ್ತ ಗೋಡೆಯೊಂದನ್ನು ಕಟ್ಟಲು ಅವಶ್ಯಕ ಹಣಕ್ಕಾಗಿ ವಕ್ಫ್ ಬೋರ್ಡಿಗೆ ಮನವಿಸಲ್ಲಿಸಿದರು. ಇಲ್ಲಿಯವರೆಗೆ ಹಣ ದೊರೆಯದಿದ್ದುದರಿಂದ ಸ್ಮಶಾನಕ್ಕೆ ಕನಿಷ್ಠ ರಕ್ಷಣೆ ಸಿಗದಂತಾಗಿದೆ. ಫಕೀರಪ್ಪ ಕೋಡಿಕೊಪ್ಪ ಎಂಬ ದಲಿತನ ಹೆಂಡತಿ ಸತ್ತಾಗ ಆಕೆಯ ಶವವನ್ನು ಮುಸಲ್ಮಾನರ ಸ್ಮಶಾನದಲ್ಲೇ ಹುಗಿಯುವ ಪ್ರಯತ್ನ ನಡೆಯಿತು. ಪೊಲೀಸರ ಮಧ್ಯಪ್ರವೇಶದಿಂದ ಅದು ಸಾಧ್ಯವಾಗಲಿಲ್ಲ. ಆದರೆ ಸ್ಮಶಾನದಲ್ಲಿ ಪ್ರಚೋದನಾಕಾರಿ ಕೃತ್ಯಗಳು ಮುಂದುವರೆದವು.

ಸ್ಮಶಾನದಲ್ಲಿರುವ ಆಲದ ಮರಕ್ಕೆ ಒಂದು ತ್ರಿಶೂಲವನ್ನು ಜಡಿದು ಇದು ನಮ್ಮ ಮರ, ಇದು ನಮ್ಮ ಜಾಗ ಎಂದು ಜಗಳಕ್ಕೆ ಬಂದದ್ದಾಯ್ತು. ಸ್ಮಶಾನದಲ್ಲಿರುವ ಝುಂಡೆ ಕಟ್ಟೆಯ ಶಿಖರವನ್ನು ಮುರಿದು ಹಾಕಲಾಯಿತು. ಬ್ರಾಹ್ಮಣ ಸಮಾಜದ ಕೃಷ್ಣಮೂರ್ತಿ ತಟ್ಟೆ ಎಂಬವರ ಶವವನ್ನು ಝುಂಡೆ ಕಟ್ಟೆಯ ಪಕ್ಕದಲ್ಲೇ ಇಟ್ಟು ಸುಡಲಾಯಿತು. ಪೊಲೀಸರು ಮೂಕ ಪ್ರೇಕ್ಷಕರಂತೆ ನಿಂತಿದ್ದರು. ಈಗೊಂದು ವರ್ಷದ ಹಿಂದೆ ಇನ್ನೊಂದು ದಲಿತರ ಶವವನ್ನು ಮುಸಲ್ಮಾನರ ಸ್ಮಶಾನದಲ್ಲಿ ದಫನ್ ಮಾಡುವುದೂ ಸಾಧ್ಯವಾಯಿತು. ಮತ್ತೆ ಅದಷ್ಟು ಜಾಗ ಮುಸಲ್ಮಾನರು ಕಳೆದುಕೊಳ್ಳುವಂತಾಯಿತು. ಹಿರಿಯ ಕಂದಾಯ ಹಾಗೂ ಪೊಲೀಸ್ ಅಧಿಕಾರಿಗಳ ಸಮಕ್ಷಮ ನಡೆದ ರಾಜಿ ಪಂಚಾಯತಿಯಲ್ಲಿ ಒಟ್ಟು 100 ಅಡಿ ಅಗಲ 180 ಅಡಿ ಉದ್ದದ ಜಾಗವನ್ನು ದಲಿತರ ಸ್ಮಶಾನಕ್ಕೆ ಬಿಟ್ಟುಕೊಡಲು ಮುಸಲ್ಮಾನರನ್ನು ಒಪ್ಪಿಸಲಾಯಿತು. ಇನ್ನು ಮುಂದೆ ಅತಿಕ್ರಮಣ ಆಗುವುದನ್ನು ತಡೆಯಲು ಮುಸಲ್ಮಾನರ ಸ್ಮಶಾನದ ಸುತ್ತ [illegible] ನಿರ್ಧರಿಸಲಾಯಿತು.


ವಿವಾದದ ಕೇಂದ್ರ ಸ್ಥಳ

ಕೈಗಾರಿಕೆಗಳ ಮೇಲೆ, ಕಾರ್ಮಿಕರ ಮೇಲೆ ಸಾರಿ

ಭಾರತದ ಜನಜೀವನಕ್ಕೆ ಸ್ವಾತಂತ್ರ್ಯ ಬಂದ ನಂತರದ 50 ವರ್ಷಗಳಲ್ಲಿ ಈ ವಿದೇಶಿ ವಸ್ತುಗಳು ನಮಗೆ ಬೇಕಿಲ್ಲ ಎಂದು ನಾಲ್ಕು ಸಾವಿರಕ್ಕೂ ಹೆಚ್ಚು ವಸ್ತುಗಳ ಮೇಲೆ ಸಂಪೂರ್ಣ ಆಮದು ನಿರ್ಬಂಧ ವಿಧಿಸಿದ್ದರು. ಉಳಿದ ವಸ್ತುಗಳನ್ನು ನಮ್ಮ ದೇಶಕ್ಕೆ ಆಮದು ಮಾಡಿಕೊಳ್ಳಬಹುದಾಗಿದ್ದರೂ ನಮ್ಮ ದೇಶದ ಕೈಗಾರಿಕೆಗಳು ಬೆಳೆಯಲು ಅವಕಾಶ ನೀಡಿ ಶೇ 100 ರಿಂದ ಶೇ 300 ರವರೆಗೆ ಆಮದು ಸುಂಕ ವಿಧಿಸಿದ್ದರು. ಅಂದರೆ ಆ ವಸ್ತುಗಳ ಬೆಲೆಯ ಎರಡು ಮೂರು ಪಟ್ಟು ಸುಂಕ. ಇದರಿಂದಾಗಿ ಭಾರತದಲ್ಲಿ ಅನೇಕ ಕೈಗಾರಿಕೆಗಳು ಬೆಳೆದು ಕೆಲಮಟ್ಟಿನ ಸ್ವಾವಲಂಬನೆ ಸಾಧಿಸಲು ಸಾಧ್ಯವಾಯಿತು. ಹೊಸ ಕೈಗಾರಿಕೆಗಳು ಸ್ಥಾಪನೆಯಾಗಿ ಉದ್ಯೋಗಗಳು ಸೃಷ್ಟಿಯಾದವು. ಉದ್ಯೋಗಗಳು ಸೃಷ್ಟಿಯಾದುದರಿಂದ ಈ ಅಗತ್ಯವನ್ನು ಪೂರೈಸಲು ಶಿಕ್ಷಣದ ಅನುಕೂಲಗಳು ಬೆಳೆದವು. ಮತ್ತು ಜನರಲ್ಲಿ ವಸ್ತುಗಳನ್ನು ಕೊಳ್ಳುವ ಶಕ್ತಿ ಹೆಚ್ಚಿತು. ಇದರಿಂದ ಮತ್ತಷ್ಟು ಕೈಗಾರಿಕೆಗಳು ಬೆಳೆಯಲು ಅವಕಾಶವೊದಗಿಸಿತು.

ಆದರೆ ಈ ಎರಡು ವರ್ಷಗಳಲ್ಲಿ 3000 ಕ್ಕೂ ಹೆಚ್ಚು ವಸ್ತುಗಳ ಮೇಲೆ ಸಂಪೂರ್ಣ ಆಮದು ನಿರ್ಬಂಧವನ್ನು ತೆಗೆದು ಹಾಕಲಾಯಿತು. ಉಳಿದ ಹತ್ತಾರು ಸಾವಿರ ವಸ್ತುಗಳ ಮೇಲೆ ವಿಧಿಸಿದ್ದ ಆಮದು ಸುಂಕವನ್ನು ಶೇ 35 ಕ್ಕೆ ಇಳಿಸಲಾಯಿತು. ಭಾರತದಲ್ಲಿ ಕೈಗಾರಿಕೆಗಳಲ್ಲಿ ತಯಾರಾಗುವ ವೆಚ್ಚಕ್ಕಿಂತ ಬಹಳ ಕಡಿಮೆ ವೆಚ್ಚದಲ್ಲಿ ವಿದೇಶಿ ವಸ್ತುಗಳ ಧಾಳಿ ಆರಂಭವಾಯಿತು. ಇದು ಬಿಜೆಪಿ ಕೂಟದ ಹಿಂದಿನ ಬಜೆಟ್‌ಗಳ ಪರಿಣಾಮ. 1991 ರಿಂದ ಆರಂಭವಾದ ಜಾಗತೀಕರಣ ನೀತಿಯ ಪರಿಣಾಮ. ಇದರಿಂದಾಗಿ ದೇಶದ ಕೈಗಾರಿಕೆಗಳು ಕುಸಿಯಲಾರಂಭಿಸಿವೆ. ರೋಗಗ್ರಸ್ತವಾಗಿವೆ, ಮುಚ್ಚಿವೆ. ಕಾರ್ಮಿಕರು ಕೆಲಸಕಳೆದುಕೊಂಡು ಬೀದಿ ಪಾಲಾಗುತ್ತಿದ್ದಾರೆ.

ಈ ಬಜೆಟ್‌ನಲ್ಲಿ ಸಂಪೂರ್ಣ ಆಮದು ನಿರ್ಬಂಧವನ್ನು ಪೂರ್ಣವಾಗಿ ತೆಗೆದು ಹಾಕಲು ಸರ್ಕಾರ ತೀರ್ಮಾನಿಸಿದೆ. ಹಿಂದಿನ ವರ್ಷ ನಮ್ಮ ದೇಶಕ್ಕೆ ಬಂದ ಕೈಗಾರಿಕಾ ವಸ್ತುಗಳ ಆಮದಿನ ಪ್ರವಾಹವನ್ನು ತಡೆಗಟ್ಟಲು ತೆರಿಗೆಗಳನ್ನು ಏರಿಸಬೇಕಾಗಿತ್ತು. ಪೇಪರ್, ಸಿಮೆಂಟ್, ಉಕ್ಕು ಮೊದಲಾದ ಹಲವು ವಸ್ತುಗಳ ಆಮದನ್ನು ತಡೆಯಲು ಪ್ರಯತ್ನಿಸದ ಸರ್ಕಾರ ಕೇವಲ ಹಳೆಯ ಕಾರುಗಳು ಹಾಗೂ ವಿದೇಶಿ ಮದ್ಯದ ಆಮದನ್ನು ಕಡಿಮೆ ಮಾಡಲು ಆಮದು ಸುಂಕ ಏರಿಸಿದೆ. ಇದರಿಂದಾಗಿ ಹಲವು ವಸ್ತುಗಳನ್ನು ತಯಾರಿಸುವ ಲಕ್ಷಾಂತರ ಕೈಗಾರಿಕೆಗಳು ಮುಚ್ಚುವ ಹಂತದಲ್ಲಿವೆ.

ಇವುಗಳ ಜೊತೆಗೆ ನಮ್ಮ ಅತ್ಯಂತ ದೊಡ್ಡ ಪ್ರಮಾಣದಲ್ಲಿ ಉದ್ಯೋಗವನ್ನು ನೀಡುವ ಕೈಗಾರಿಕೆಗಳು ಸಣ್ಣ ಕೈಗಾರಿಕೆಗಳು ಆದ್ದರಿಂದ ಸಣ್ಣ ಕೈಗಾರಿಕೆಗಳ ಹಾಗೂ ಸಣ್ಣ ಪುಟ್ಟ ಬಂಡವಾಳದಾರರ ರಕ್ಷಣೆಗಾಗಿ ಹಲವು ಕ್ರಮಗಳನ್ನು ಸರ್ಕಾರ ಅನುಸರಿಸುತ್ತಿತ್ತು. ಅದರಲ್ಲಿ ಈ ಕೈಗಾರಿಕೆಗಳಿಗೆ ಕೆಲವು ವಸ್ತುಗಳ ಉತ್ಪಾದನೆಯನ್ನು ಮೀಸಲಿಟ್ಟು ದೊಡ್ಡ ಬಂಡವಾಳಿಗರು ವಿದೇಶಿ ಬಂಡವಾಳಿಗರು ಆ ಕ್ಷೇತ್ರವನ್ನು ಪ್ರವೇಶಿಸದಂತೆ ರಕ್ಷಣೆ ನೀಡುವುದು ಒಂದು ಕ್ರಮ. ಜೊತೆಗೆ ಸಾಲ ನೀಡಿಕೆ, ಕಚ್ಚಾ ವಸ್ತುಗಳ ಸರಬರಾಜು, ತೆರಿಗೆ ಇವುಗಳಲ್ಲಿಯೂ ಹಲವು ರಿಯಾಯಿತಿ ಒದಗಿಸಿತ್ತು. ಇತ್ತೀಚಿನ ವರ್ಷಗಳಲ್ಲಿ ಈ ಸೌಲಭ್ಯಗಳನ್ನು ಒಂದೊಂದನ್ನಾಗಿ ಕಳಚುತ್ತಾ ಬಂದ ಸರ್ಕಾರ ಸಣ್ಣ ಕೈಗಾರಿಕೆ ಕ್ಷೇತ್ರವನ್ನು ದೊಡ್ಡ ತಿಮಿಂಗಳ ಬಾಯಿಗೆ ಒಪ್ಪಿಸಿದೆ.

ಈ ವರ್ಷದ ಬಜೆಟ್‌ನಲ್ಲಿಯು ಸಣ್ಣ

ಜಿ.ಎನ್.ನಾಗರಾಜ್

ಕೈಗಾರಿಕೆಗಳಿಗೆ ಮೀಸಲಿಟ್ಟ ಪಟ್ಟಿಯಿಂದ 14 ವಸ್ತುಗಳನ್ನು ತೆಗೆದು ಹಾಕಿದೆ.

ಇಂತಹ ಕ್ರಮಗಳಿಂದ ಇಂದು ಲಕ್ಷಾಂತರ ಕೈಗಾರಿಕೆಗಳು ಮುಚ್ಚುವ ಸ್ಥಿತಿಯಲ್ಲಿವೆ. ಮತ್ತೆ ಹತ್ತಾರು ಸಾವಿರ ಕೈಗಾರಿಕೆಗಳು ಮುಚ್ಚುತ್ತವೆ. ಈ ಕೈಗಾರಿಕೆಗಳನ್ನು ಮುಚ್ಚಲು ಅವುಗಳಲ್ಲಿರುವ ಕಾರ್ಮಿಕರ ರಕ್ಷಣೆಗೆಂದು ರಚಿಸಲಾಗಿರುವ ಹಲವಾರು ಕಾನೂನುಗಳು ಅಡ್ಡಿ ಬರುತ್ತವೆ. ಈ ವರ್ಷದ ಬಜೆಟ್ಟಿನಲ್ಲಿ ಸರ್ಕಾರ ಈ ಎಲ್ಲಾ ಕೈಗಾರಿಕೆಗಳನ್ನು ಪೂರ್ಣವಾಗಿ ಮುಚ್ಚಲು ಅವಕಾಶವಾಗುವಂತೆ ಮೂರು ಕಾನೂನುಗಳಲ್ಲಿ ತಿದ್ದುಪಡಿ ತರಲು ಉದ್ದೇಶಿಸಿದೆ. ಒಂದನೆಯದು ಒಂದು ಸಾವಿರಕ್ಕೂ ಕಡಿಮೆ ಕಾರ್ಮಿಕರಿರುವ ಕಾರ್ಖಾನೆಗಳಲ್ಲಿ ಕಾರ್ಮಿಕರನ್ನು ಕೆಲಸದಿಂದ ತೆಗೆದು ಹಾಕಲು(ರಿಟ್ರೆಂಚ್‌ಮೆಂಟ್), ಅವರಿಗೆ ಭಾಗಶಃ ಕೆಲಸ ನೀಡದಿರಲು (ಲೇಆಫ್) ಮತ್ತು ಕೈಗಾರಿಕೆಗಳನ್ನು ಪೂರ್ಣವಾಗಿ ಮುಚ್ಚಿ ಕಾರ್ಮಿಕರನ್ನು ಬೀದಿಪಾಲು ಮಾಡಲು ಸರ್ಕಾರದ ಯಾವುದೇ ಅನುಮತಿ ಬೇಕಿಲ್ಲ ಎಂದು ಸಾರಿದೆ. ಇದರಿಂದ ದೇಶದಲ್ಲಿರುವ ಶೇ 90 ರಷ್ಟು ಕಾರ್ಖಾನೆಗಳಲ್ಲಿ ಕಾರ್ಮಿಕರಿಗೆ ಯಾವುದೇ ಕೆಲಸದ ಭದ್ರತೆ ಸಿಗದಂತಾಗುತ್ತದೆ. ಅವರ ಕೆಲಸ ಯಾವಾಗ ಬೇಕಾದರೂ ಇದ್ದಕ್ಕಿದ್ದಂತೆ ಮಾಯವಾಗಬಹುದು. ○

ಬಂಡವಾಳಿಗರ ಸಂತೋಷದ ಸುಗ್ಗಿ: ಬಜೆಟ್ 2001 ಕೆಲವು ತುಣುಕುಗಳು

- ದೊಡ್ಡ ದೊಡ್ಡ ದೇಶಿ-ವಿದೇಶಿ ಕಂಪನಿಗಳಿಗೆ 5500 ಕೋಟಿ ರೂ ಸಹಾಯಧನ, ಸ್ಕೂಟರ್, ಕಾರು, ಬಣ್ಣದ ಟಿ.ವಿ., ತಂಪು ಪಾನೀಯಗಳು, ಚಿನ್ನ ಅಗ್ಗ, ಡೀಸೆಲ್, ಉಪ್ಪು, ಹಲ್ಲುಪುಡಿ, ಸೋಪು, ವಿದ್ಯುದ್ದೀಪಗಳು, ಕಡಿಮೆ ಬೆಲೆಯ ವಾಚುಗಳು, ಚಪ್ಪಲಿ, ಕಪ್ಪು-ಬಿಳಿ ಟಿ.ವಿ.ಗಳಂತಹ ಬಡವರ ಸಾಮಾನ್ಯರ ಬಳಕೆಯ ವಸ್ತುಗಳ ಮೇಲೆ ಎರಡು ಪಟ್ಟು ತೆರಿಗೆ. ಆ ಮೂಲಕ 4677 ಕೋಟಿ ರೂ. ಹೊರೆ.
- ದೇಶದ ಮೇಲೆ 16 ಲಕ್ಷ ಕೋಟಿ ರೂ. ಸಾಲದ ಹೊರೆ. ಅದರ ಮೇಲೆ ಕೇವಲ ಬಡ್ಡಿಯೇ 1,12,300 ಕೋಟಿ. ವಾರ್ಷಿಕ ವೆಚ್ಚದ ಶೇ 26 ರಷ್ಟು (ಕಾಲು ಭಾಗಕ್ಕಿಂತ ಹೆಚ್ಚು) ಭಾಗ ಕೇವಲ ಬಡ್ಡಿಗೆ. ಈ ಹಣದಲ್ಲಿ ಎಷ್ಟು ನೀರಾವರಿ ಯೋಜನೆಗಳು, ಎಷ್ಟು ಕೈಗಾರಿಕೆಗಳು, ಎಷ್ಟು ಅಭಿವೃದ್ಧಿ ಯೋಜನೆಗಳು ಸ್ಥಾಪಿಸಬಹುದಾಗಿತ್ತು, ಎಷ್ಟು ಜನಕ್ಕೆ ಉದ್ಯೋಗ, ಕೃಷಿ, ಕೈಗಾರಿಕಾ ಉತ್ಪಾದನೆ ಹೆಚ್ಚಾಗಬಹುದಿತ್ತು?
- ಒಟ್ಟು ಆದಾಯ 3,75,223 ಕೋಟಿ ರೂ. ಒಟ್ಟು ವೆಚ್ಚ 3,75,223 ಕೋಟೀ. ಅಭಿವೃದ್ಧಿಗಾಗಿ ವೆಚ್ಚ, ಕಟ್ಟಡ ಮೊದಲಾದ ಖಾಯಂ ನಿರ್ಮಾಣಗಳ ವೆಚ್ಚ ಕಡಿಮೆ. ಗ್ರಾಮೀಣ ಅಭಿವೃದ್ಧಿ, ಕೃಷಿ, ಕೈಗಾರಿಕೆ, ಗಣಿಗಾರಿಕೆಗಳಿಗೆ ಯೋಜನಾವೆಚ್ಚ ಹಿಂದವರ್ಷಕ್ಕಿಂತ ಕಡಿಮೆ.
- 2001-2001ನೇ ವರ್ಷದಲ್ಲಿ ತೆಗೆದು ಕೊಳ್ಳುವ

ನಿಜಕ್ಕೂ ಬಂಗಾಳದ ಮೇಲೆ 'ಮಮತೆ'ಯೇ

ಕೇಂದ್ರ ರಾಜ್ಯ ಸಚಿವೆ ಮಮತಾ ಬ್ಯಾನರ್ಜಿಯವರಿಗೆ ಪಶ್ಚಿಮ ಬಂಗಾಳದ ಮೇಲೆ ಎಲ್ಲಿಲ್ಲದ ಮಮತೆ. ಚುನಾವಣೆ ಸಮೀಪಿಸುತ್ತಿರುವಂತೆ ಈ ಮಮತೆ ಇನ್ನಷ್ಟು ಜಾಸ್ತಿ. ಅಂತೆಯೇ ರೈಲ್ವೆ ಬಜೆಟ್ಟಿನಲ್ಲಿ ಘೋಷಿಸಿದ 24 ಹೊಸ ಲೈನುಗಳಲ್ಲಿ ಏಳು ಬಂಗಾಳಕ್ಕೆ. ಆದರೆ ಈ ಹೊಸ ಲೈನುಗಳಲ್ಲಿ ಹೊಸತೇನಿಲ್ಲ. ಎಲ್ಲವೂ ಹಳೆಯದೇ. ಹೊಸ ಬಾಟಲಿನಲ್ಲಿ ಹಳೆಯ ಮದ್ಯ ಅಷ್ಟೆ. ರಾಜಿನಾಮೆ ನಾಟಕದ ರಾಣಿ ಇನ್ನೊಂದು ನಾಟಕ ಮಾಡಿದ್ದಾರೆ ಅಷ್ಟೆ.

ಉದಾಹರಣೆಗೆ, ಬೆಂಗಳೂರು - ವಾಸ್ಕೋ ರೈಲು ಕರ್ನಾಟಕಕ್ಕೆ ಹೊಸ ಕೊಡುಗೆ ಎಂದು ಚಿತ್ರಿಸಲಾಗಿದೆ. ಇದು ಹೊಸತೇನಲ್ಲ. ಗೇಜ್ ಪರಿವರ್ತನೆಗಾಗಿ ಈ ರೈಲನ್ನು ನಿಲ್ಲಿಸಲಾಗಿತ್ತು. ಈಗ ಪುನಃ ಜೋಡಿಸಲಾಗುವುದು ಅಷ್ಟೆ. ಅದು ಯಾವಾಗನಿಂದ ಎಂದು ಕಾಯಬೇಕಾಗಿದೆ.

ಮುಂಗಡಪತ್ರದಲ್ಲಿ ಪ್ರಯಾಣ ದರದಲ್ಲಿ ಹೆಚ್ಚಳ ಇಲ್ಲ ಎಂದು ಘೋಷಿಸಿದರೂ, ಸಾಗಾಣಿಕೆದರದಲ್ಲಿ ಹೆಚ್ಚಳ ಆಗಿದೆ. ಕಲ್ಲಿದ್ದಲು, ಕಬ್ಬಿಣ, ಉಕ್ಕು ಮತ್ತಿತರ ವಸ್ತುಗಳ ಮೇಲೆ ಹಾಕಿದ ಸಾಗಾಣಿಕಾ ದರ ಹೆಚ್ಚಳವು ಇತರೆಲ್ಲ ದರಗಳ ಮೇಲೆ ಪರಿಣಾಮ ಬೀರುತ್ತದೆ. ಒಮ್ಮೆ ಚುನಾವಣೆ ಮುಗಿಯಿತೆಂದರೆ, ಪ್ರಯಾಣ ದರವನ್ನು ಹೆಚ್ಚಿಸುವ ಇಂಗಿತವನ್ನು ರೈಲ್ವೆ ಮುಖ್ಯಸ್ಥರೊಬ್ಬರು ಈಗಾಗಲೇ ಸೂಚಿಸಿದ್ದಾರೆ.

ಈ ವರ್ಷದ ರೈಲ್ವೆ ಬಜೆಟ್ಟಿನಲ್ಲಿ ಯೋಜನಾ ವೆಚ್ಚಕ್ಕೆ ರೂ. 11090 ಕೋಟಿ ಇಡಲಾಗಿದೆ. ಆದರೆ ಇದು ಕಳೆದ ವರ್ಷಕ್ಕಿಂತ 735 ಕೋಟಿ ರೂ., ಕಡಿಮೆ ಹಣದುಬ್ಬರವನ್ನು ಪರಿಗಣಿಸಿದರೆ ಅದು ಇನ್ನಷ್ಟು ಕುಸಿತಗೊಳ್ಳುತ್ತದೆ. ಆದರೆ ಈ 11,090 ಕೋಟಿರೂ ಬರುವುದೆಲ್ಲಿಂದ? 3540 ಕೋಟಿರೂ ಮಾತ್ರ ರೈಲ್ವೆ ಆದಾಯದಿಂದ ಉಳಿದ ಹಣದಲ್ಲಿ 4000 ಕೋಟಿರೂ ಸಾಲ ಮಾಡಿದರೆ, 3550 ಕೋಟಿ ರೂ ಸಾಂಪ್ರದಾಯಿಕವಲ್ಲದ ಆದಾಯ (man-traditionel revenues) ಎಂದು ತೋರಿಸಲಾಗಿದೆ. ಅಂದರೆ ರೈಲ್ವೆ ಸ್ಟೇಷನುಗಳಲ್ಲಿ ಆಕರ್ಷಕವಾದ ಅಂಗಡಿಗಳನ್ನು ತೆರೆದು ಅವಸರದಿಂದ ಬರುವವರಿಗೆ ಜಾಸ್ತಿದರದಲ್ಲಿ ಮಾರಾಟ ಮಾಡುವ ವಸ್ತುಗಳು ಅಥವಾ ರೈಲ್ವೆ ಕ್ಯಾಂಟೀನುಗಳಲ್ಲಿ ಈಗಾಗಲೇ ಮಾರಾಟಮಾಡುವ ವಸ್ತುಗಳು ಅಥವಾ ರೈಲ್ವೆ ಕ್ಯಾಂಟೀನುಗಳಲ್ಲಿ ಈಗಾಗಲೇ ವಿತರಿಸಲಾಗುತ್ತರುವ 'ಕೊಳಕು' ತಿಂಡಿಗಳ ಬೆಲೆಯನ್ನು ವಿತರಿಸಿ ಹೆಚ್ಚಿಸುವುದು, ಪೆಪ್ಸಿ-ಕೋಲಾಗಳ ಅರೆ ನಗ್ನ (ಕೆಲವೊಮ್ಮೆ ಪೂರ) ಜಾಹಿರಾತುಗಳನ್ನು ರೈಲ್ವೆ ಫಲಕ / ಟಿ.ವಿ.ಗಳಲ್ಲಿ ತೋರಿಸುವುದು ಇತ್ಯಾದಿ.

ರೈಲ್ವೆ ಬಜೆಟ್

1998-99ರ ಹಣಕಾಸು ವರ್ಷದ ಕೊನೆಯಲ್ಲಿ 1200-64 ಕೋಟಿ ರೂ. ಮೀಸಲು ನಿಧಿ? (Capital ferel) ಹೊಂದಿದ್ದ ರೈಲ್ವೆ, ಮಮತಾ ಬ್ಯಾನರ್ಜಿಯವರ ನೇತೃತ್ವದಲ್ಲಿ ಮೀಸಲು ನಿಧಿಯನ್ನು 21.13ಕ್ಕೆ ಇಳಿಸಿದ್ದೂ ಯಾವುದೇ ಅಭಿವೃದ್ಧಿ, ಕಾರ್ಯಗಳಿಗೆ ಗಮನ ಕೊಡದಿರುವ ಸ್ಥಿತಿಗೆ ತಂದಿಟ್ಟಿದ್ದಾರೆ. ಅಲ್ಲದೆ ಸಾಮಾನ್ಯ ಮೀಸಲು ನಿಧಿಗೆ 1000 ಕೋಟಿರೂ ಡಿವಿಡೆಂಟ್ ತೆಗೆದಿರಿಸಬೇಕಾಗಿತ್ತು: ಅದಕ್ಕೆ ಯಾವುದೇ ಹಣ ಒದಗಿಸಿಲ್ಲ. ಮಾತ್ರವಲ್ಲದೆ, ಕಳೆದ ವರ್ಷದ ಡಿವಿಡೆಂಟ್ 1500 ಕೋಟಿರೂ ಒದಗಿಸಿಲ್ಲ. ಹೇಗಿದೆ ಲೆಕ್ಕಾಚಾರದ ನಾಟಕ?

ಕರ್ನಾಟಕಕ್ಕೆ ಅನ್ಯಾಯ : ಮುಂಗಡ ಪತ್ರದಲ್ಲಿ ಕರ್ನಾಟಕಕ್ಕೆ 3 ಹೊಸಲೈನುಗಳ ಘೋಷಣೆ ಆಗಿದೆ. ಮೇಲೆ ಹೇಳಿದಂತೆ ಬೆಂಗಳೂರು-ವಾಸ್ಕೋ ಲೈನು ಹೊಸತಲ್ಲ. ಹೈದರಾಬಾದ್ ಬೆಂಗಳೂರು ರೈಲನ್ನು 'ಒತ್ತಡ' ಇದ್ದಾಗ ಮಾತ್ರ ಜೋಡಿಸಲಾಗುವುದು. ಹೌರಾ (ಕಲ್ಕತ್ತ) ಯಶವಂತಪುರ ರೈಲನ್ನು ವಾರದಲ್ಲಿ ಎರಡುದಿನ ಜೋಡಿಸಲಾಗುವುದು. ಆದರೆ ಯಶವಂತಪುರದಲ್ಲಿ ಸುಸಜ್ಜಿತ ನಿಲ್ದಾಣವಿಲ್ಲ. ಅದರ ನಿರ್ಮಾಣಕ್ಕೆ ಯಾವುದೇ ಹಣ ಮೀಸಲಾಗಿಟ್ಟಿಲ್ಲ. ಹಾಗಾದರೆ ಅದು ಆರಂಭ ಆಗುವುದು ಯಾವಾಗ? ಯಕ್ಷ ಪ್ರಶ್ನೆಯೇ ಸರಿ.

ಇನ್ನೂ ಹಲವಾರು ಯೋಜನೆಗಳು ನೆನೆಗುದಿಗೆ ಬಂದಿವೆ. ಈ ಬಾರಿ ಕೇಂದ್ರದಲ್ಲಿ ಅಧಿಕಾರಕ್ಕೆ ಬರುವ ಮುನ್ನ, ಅಂದರೆ 1999ರಲ್ಲಿ 'ಬಹುಪರಾಕು' 'ಟಾಮ್ ಟಾಮ್' ನೊಂದಿಗೆ ಹುಬ್ಬಳ್ಳಿ-ಅಂಕೋಲಾ ರೈಲು ಮಾರ್ಗಕ್ಕೆ ಶಂಕುಸ್ಥಾಪನೆ ನೆರವೇರಿಸಲಾಯಿತು. ಆ ವಿಭಾಗ ಕೆಲವು ಬಿಜೆಪಿ ಶಾಸಕರು, ಸಂಸದರಿಗೆ ಇದು ಗೆಲ್ಲಲು ಸಹಾಯವಾಯಿತೇ ಹೊರತು ಜನರಿಗೆ ರೈಲು ಮಾರ್ಗ ದಕ್ಕಲಿಲ್ಲ. ಹಾಗೆಯೇ ಕೊಟ್ಟೂರು-ಹರಿಹರ ಮಾರ್ಗ, ಹಾಸನ ಮಂಗಳೂರು ಬ್ರಾಡ್‌ಗೇಜ್ ಪರಿವರ್ತನೆ, ಬೆಂಗಳೂರು - ಮೈಸೂರು ಡಬಲ್ ಲೈನ್ ಮಾಡುವುದು, ಮೆಹಬೂಬ್ ನಗರ- ಮುನಿರಾಬಾದ್, ಬೀದರ್-ಕಲ್ಬುರ್ಗಿ ರೈಲು ಮಾರ್ಗಗಳಿಗೆ ಮುಕ್ತಿ ದೊರೆಯಲಿಲ್ಲ.

ಚಾಮರಾಜನಗರ- ಮೆಟ್ಟು ಪಾಳ್ಯಾ ರೈಲಿಗಾಗಿ ನಾಲ್ಕು ದಶಕಗಳಿಂದ ಜನರು ಹೋರಾಟ ನಡೆಸುತ್ತಿದ್ದಾರೆ. ಕೇರಳದ ಬಡಜ.... ದಿಂದ ಮೈಸೂರಿಗೆ ರೈಲನ್ನು ಜೋಡಿಸಲು ಕೆಲವೇ ಕಿಲೋಮೀಟರ್‌ಗಳ ಮಾರ್ಗ ಅಗತ್ಯ. ಇದರಿಂದ ಕೇರಳ ಮತ್ತು ಕರ್ನಾಟಕದ ಜನತೆಗೆ ಅನುಕೂಲವಾಗಲಿದೆ. ಕೊಂಕಣ ರೈಲ್ವೆಯ ಸಂಪರ್ಕವೂ ದೊರೆಯಲಿದೆ. ಈ ಮಾರ್ಗದ ಜಾರಿಗಾಗಿ ಕೇರಳ ಮತ್ತು ಕರ್ನಾಟಕದ ಜನತೆ ಡಿವೈಎಫ್‌ಐ ಮತ್ತಿತರ ಸಂಘಟನೆಗಳ ನೇತೃತ್ವದಲ್ಲಿ ಐಕ್ಯ ಹೋರಾಟ ನಡೆಸಿದ್ದರು.

125 ಕೋಟಿ ರೂಪಾಯಿ ಅಂದಾಜುವೆಚ್ಚದ ಗದುಗ ಸೊಲ್ಲಾಪುರ ಮಾರ್ಗವನ್ನು ಬ್ರಾಡ್ ಗೇಜ್‌ಗೆ ಪರಿವರ್ತನೆ ಮಾಡಲು ಕೇವಲ 10 ಕೋಟಿರೂ ತೆಗೆದಿಡಲಾಗಿದೆ. ಹುಬ್ಬಳ್ಳಿ ರೈಲ್ವೆ ವರ್ಕ್‌ಶಾಪ್ ನವೀಕರಣಕ್ಕೆ 16.17 ಕೋಟಿರೂಪಾಯಿ ಬದಲಾಗಿ 60 ಲಕ್ಷ ರೂಪಾಯಿ ನೀಡಲಾಗಿದೆ.

ಈ ಅನ್ಯಾಯವನ್ನು ಹೋಗಲಾಡಿಸಬೇಕಾದರೆ ನಿರಂತರ ಪ್ರಚಾರ ಮತ್ತು ಹೋರಾಟ ಅಗತ್ಯ. ಬಂಗಾಳದ ಮುಖ್ಯಮಂತ್ರಿ ಗದ್ದುಗೆಯ ಮೇಲೆ ಹದ್ದುಗಣ್ಣನ್ನಿಟ್ಟು ಹಗಲು ಗನಸು ಕಾಣುತ್ತಿರುವ ಮಮತಾ ಬ್ಯಾನರ್ಜಿ ಮತ್ತು ಬಿಜೆಪಿ ಬಳಗದವರಿಗೆ ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ಕಣ್ಣುತೆರೆದು ನೋಡಿ ಎಂದು ಎಚ್ಚರಿಸಬೇಕಾಗಿದೆ.

- ಬಾಲಕೃಷ್ಣಶೆಟ್ಟಿ



ಯುದ್ಧ- ಬಿಜೆಪಿಯ ಬಜೆಟ್ 2001



ಸಾಲ, 1,18,853 ಕೋಟಿ. 1994-95 ರಲ್ಲಿ ತೆಗೆದುಕೊಂಡ ಸಾಲ ಕೇವಲ 38,108ಕೋಟಿ. ಕೇವಲ 6 ವರ್ಷದಲ್ಲಿ ಸಾಲ ಪಡೆಯುವ ಪ್ರಮಾಣ ಮೂರು ಪಟ್ಟು ಏರಿಕೆ.

● ಆದಾಯ ತೆರಿಗೆಯಲ್ಲಿ ನೀಡಿದ ವಿನಾಯ್ತಿಯಿಂದ ಬಂಡವಾಳ ಶಾಹಿಗಳಿಗಾಗುವ ಅಪಾರ ಲಾಭ.

ಇಂಡಿಯನ್ ಟೋಬಾಕ್ಕೊ ಕಂಪನಿ	47.9 ಕೋಟಿ
ನಿರ್ಮಾ	3.1 ಕೋಟಿ
ಹಿಂದೂಸ್ಥಾನ್ ಲಿವರ್	34.3 ಕೋಟಿ
ಎಸ್ಕಾರ್ಟ್ಸ್	3.0 ಕೋಟಿ
ಬಜಾಜ್ ಆಟೋ	20.6 ಕೋಟಿ
ಹಿರೋ ಹೊಂಡಾ	9.0 ಕೋಟಿ
ವಿಡಿಯೋಕಾನ್ ಕಾ ಸಂಡಲೋ (ವಿಡಲೋ)	24.2 ಕೋಟಿ
ಟಾಟಾ ಟೀ	3.9 ಕೋಟಿ
ಟಾಟಾ ಪವರ್	8.9 ಕೋಟಿ
ಟಾಟಾ ಸ್ಟೀಲ್	5.3 ಕೋಟಿ
ಟಾಟಾ ಹೈಡ್ರೋ	3.7 ಕೋಟಿ
ಮೈಕೊ	6.3 ಕೋಟಿ
ರಿಲೆಯನ್ಸ್ ಕಂಪನಿ (ವಿಮಲ್ ಸೀರೆ ಇತ್ಯಾದಿ ತಯಾರಕರು)	5.9 ಕೋಟಿ
ವಿಪ್ರೊ	4.9 ಕೋಟಿ
ಲಾರ್ಸೆನ್ ಮತ್ತು ಟೊಬ್ರೋ (ಎಲ್ ಅಂಡ ಟಿ)	4.5 ಕೋಟಿ
ಇನ್‌ಫೋಸಿಸ್	3.9 ಕೋಟಿ
ಕಾಲ್ಗೇಟ್	3.88 ಕೋಟಿ
ಟಿ.ವಿ.ಎಸ್. ಸುಜುಕಿ	3.20 ಕೋಟಿ

ಇತ್ಯಾದಿ

● ಇದೇ ಕಂಪನಿಗಳಿಗೆ ಲಾಭಾಂಶದ ಮೇಲಿನ ತೆರಿಗೆಯನ್ನು ಶೇ 20 ರಿಂದ ಶೇ 10 ಕ್ಕಿಳಿಸಿ ಮತ್ತೆ 1,[illegible]48 ಕೋಟಿ ರೂ ದಾನ. ಬೇಳೆ, ಎಣ್ಣೆ ಮೇಲಿನ ಆಮದು ಸುಂಕ, ಸೆಕೆಂಡ್ ಹ್ಯಾಂಡ್ ಕಾರುಗಳ ಮೇಲೆ ಶೇ 180 ರಷ್ಟು ಆಮದು ಸುಂಕ ಆದರೆ ಅಡಿಗೆ ಎಣ್ಣೆಗಳ ಮೇಲೆ ಆಮದು ಸುಂಕ ಕೇವಲ35 ರಿಂದ 85 ರಷ್ಟು.

ಶುದ್ಧೀಕಕರಿಸಿದ ಪಾಮಾಯಿಲ್ ತೆರಿಗೆ ಶೇ	85
ನೇರ ಪಾಮಾಯಿಲ್	ಶೇ 55
(ರೋಗಗ್ರಸ್ತ ವನಸ್ಪತಿ ಘಟಕಗಳಿಗ)	
ನೇರ ಪಾಮಾಯಿಲ್	75
ಸೂರ್ಯಕಾಂತಿ ಎಣ್ಣೆ	75
ಸೋಯಾಬೀನ್ ಎಣ್ಣೆ	45
ಎಣ್ಣೆ ಬೀಜಗಳು	35
ಬೆಳೆಕಾಳುಗಳ ಮೇಲೆ ಆಮದು ಸುಂಕ ಕೇವಲ	ಶೇ 5

ಶೇರು ಬೆಲೆ ಏರಿಕೆ - ಕುಸಿತ ಮಾಯವಾದ ಹಿಗ್ಗು

● ಬಜೆಟ್ ಮಂಡನೆಯಾಗುತ್ತಿದ್ದಂತೆ ಕೈಗಾರಿಕೋದ್ಯಮಿಗಳು ಹಿರಿ ಹಿರಿ ಹಿಗುತ್ತಿದ್ದಂತೆ ಬಾಂಬೆಯ ಶೇರು ಬಜಾರು ಏರ ತೊಡಗಿತು. ಒಂದೇ ದಿನದಲ್ಲಿ 10,366 ಕೋಟಿ ರೂ. ಬೆಲೆಯ ಶೇರುಗಳು ಮಾರಾಟವಾದವು. ಶೇರು ಸೂಚ್ಯಂಕ 177.36 ಪಾಯಿಂಟ್ ಏರಿತು. ಬಜೆಟ್‌ನಲ್ಲಿ ದೊಡ್ಡ ಬಂಡವಾಳಶಾಹಿಗಳ ಪ್ರೀತಿ ಗಳಿಸಲು ಮಾಡಿದ ಸೂಚನೆಗಳು ಸಾರ್ಥಕವಾಯಿತೆಂದು ಬಿಜೆಪಿ ಕೂಟದ ಸರ್ಕಾರ ಧನ್ಯರಾದೆವೆಂದು ಕೊಂಡರು. ಆದರೆ ಎರಡನೇ ದಿನದಲ್ಲಿ ಮತ್ತೆ ಅಷ್ಟೇ ಕುಸಿದು ಬಜೆಟ್ ಪೂರ್ವದ ಸ್ಥಿತಿಯನ್ನೇ ತಲುಪಿದೆ. ಬಿಜೆಪಿ ಕೂಡ ಸರ್ಕಾರದ ಆರ್ಥಿಕ ದೊರೆಗಳು ಕಂಗಾಲಾಗಿದ್ದಾರೆ.

ವಿದೇಶಿ ಹಣದ ಹರಿದಾಟಕ್ಕೆ ಮತ್ತಷ್ಟು ತೆರೆದ ಬಾಗಿಲು

ಇನ್ನಷ್ಟು ಭಾರತೀಯ ಕೈಗಾರಿಕೆಗಳು ವಿದೇಶಿ ಮಡಿಲಿಗೆ

ಇಂದು ಜಗತ್ತಿನಲ್ಲಿ ಪ್ರತಿದಿನ ಲಕ್ಷಾಂತರ ಕೋಟಿ ರೂ.ಗಳಷ್ಟು ಹಣ ಬಂಡವಾಳ ಲಾಭವನ್ನರಸಿ ಜಗತ್ತನ್ನೆಲ್ಲಾ ಸುತ್ತುತ್ತಿದೆ. ಭಾರತದ ಶೇರು ಮಾರುಕಟ್ಟೆಗೆ ಅದನ್ನು ಸೆಳೆಯಲು ಪ್ರತಿವರ್ಷ ಬಾಗಿಲನ್ನು ಇನ್ನಷ್ಟು ಮತ್ತಷ್ಟು ವಿಶಾಲವಾಗಿ ತೆರೆಯಲಾಗುತ್ತಿದೆ. ಈ ವರ್ಷ ಭಾರತದ ಕೈಗಾರಿಕೆಗಳ ಮೇಲಿನ ಹತೋಟಿ ಭಾರತದ್ದಾಗಿರಬೇಕು ಎಂಬ ತತ್ವವನ್ನು ಗಾಳಿಗೆ ತೂರಿ ಭಾರತೀಯ ಕಂಪನಿಗಳಲ್ಲಿ ಶೇ 49 ರವರೆಗೆ ಹಣ ಹೂಡಲು ಅವಕಾಶ ಮಾಡಿಕೊಡಲಾಗಿದೆ. ಇದರಿಂದಾಗಿ ಭಾರತದಲ್ಲಿ ಹೊಸ ಕೈಗಾರಿಕೆಗಳನ್ನು ಸ್ಥಾಪಿಸಲು ಬರುತ್ತಿದ್ದ ಹಣವೂ ಅತ್ತ ತಿರುಗಿ ಈಗಾಗಲೇ ಬಹಳ ವರ್ಷಗಳಿಂದ ಭಾರತದಲ್ಲಿರುವ ಕಂಪನಿಗಳನ್ನು ವಿದೇಶಿ ಹತೋಟಿಗೆ ನೀಡಿದಂತಾಗುತ್ತದೆ. ಹೊಸ ಕೈಗಾರಿಕೆಗಳ ಸ್ಥಾಪನೆಗೆ ಹಾಗೂ ಉದ್ಯೋಗ ಸೃಷ್ಟಿಗೆ ಇದರಿಂದ ಒಂದುಚೂರು ಪ್ರಯೋಜನ ಸಿಗದಂತಾಗುತ್ತದೆ.

ಸಣ್ಣ ಉಳಿತಾಯದ ಮೇಲೆ ಧಾಳಿ

ಬಡಜನ-ರೈತರು, ಕೂಲಿಕಾರರು, ಕಾರ್ಮಿಕರು ತಮ್ಮ ಕಷ್ಟಕಾಲಕ್ಕೆಂದು ಅಂಚೆ ಕಛೇರಿಗಳಲ್ಲಿ ಉಳಿತಾಯ ಸರ್ಟಿಫಿಕೇಟುಗಳಲ್ಲಿ ಇಡುತ್ತಿದ್ದ ಹಣದ ಮೇಲಿನ ಬಡ್ಡಿಯನ್ನು ಕಡಿತ ಮಾಡಿದೆ. ಇಂದುಬೆಲೆ ಏರಿಕೆ ಹೆಚ್ಚಾಗುತ್ತಿರುವ ದಿನಗಳಲ್ಲಿ ಬೆಲೆ ಏರಿಕೆಯ ಪ್ರಮಾಣವನ್ನು ಸರಿತೂಗಿಸಿ ಮತ್ತಷ್ಟು ಬಡ್ಡಿ ಸಿಗುವಂತೆ ಬಡ್ಡಿ ದರ ಇರದಿದ್ದರೆ ಬಡವರು ತಮ್ಮ ಉಳಿತಾಯದ ಮೂಲಕ ನಷ್ಟಕ್ಕೊಳಗಾಗುತ್ತಾರೆ. ಇಂದು ನೂರು ರೂನಿಂದ ಎಷ್ಟು ವಸ್ತುಗಳನ್ನು ಕೊಳ್ಳಬಹುದೋ ಒಂದುವರ್ಷದ ನಂತರ ಅದಕ್ಕಿಂತ ಕಡಿಮೆ ವಸ್ತುಗಳನ್ನು ಸಿಗುವಂತಹ ಪರಿಸ್ಥಿತಿಯಾದರೆ ಅವರ ಶ್ರಮದ ಬೆಲೆಯಲ್ಲಿ ಖೋತಾ ಉಂಟಾಗುತ್ತದೆ.

ಇದರಿಂದಾಗಿ ಅವರು ಚಿನ್ನ ಮೊದಲಾದ ಚರ ಆಸ್ತಿಯ ಕಡೆಗೆ ತಿರುಗಿ ದೇಶದ ಅಭಿವೃದ್ಧಿಯಲ್ಲಿ ಹಣ ತೊಡಗಿಸಿದಂತಾಗುತ್ತದೆ.

ಎರಡನೆಯದು - ಹೀಗೆ ಕೈಗಾರಿಕೆಯಲ್ಲಿ ಖಾಯಂ ಇದ್ದ ಕಾರ್ಮಿಕರನ್ನು ತೆಗೆದುಹಾಕಲು ಅವಕಾಶ ನೀಡಿ ಖಾಯಂ ಕೆಲಸಗಳು/ ಹುದ್ದೆಗಳಲ್ಲಿ ಕೂಡ ಗುತ್ತಿಗೆ ಆಧಾರದ ಕಾರ್ಮಿಕರನ್ನು ತೆಗೆದುಕೊಳ್ಳಲು ಅವಕಾಶ ನೀಡುವುದು, ಕಾರ್ಖಾನೆಯ ಹೊರಗಡೆ ಕೆಲಸ ಮಾಡಿಕೊಳ್ಳಲು ಬಿಡಿ ಭಾಗಗಳನ್ನು ಪಡೆಯಲು ಅವಕಾಶ ಮಾಡಿಕೊಡುವುದು.

ಮೂರನೆಯದು - ರೋಗಗ್ರಸ್ತ ಕೈಗಾರಿಕೆಗಳನ್ನು ಮತ್ತೆ ನಡೆಯುವಂತೆ ಪ್ರಯತ್ನ ಮಾಡಬೇಕೆಂದುಸೂಚಿಸುವ ರೋಗಗ್ರಸ್ತ ಕೈಗಾರಿಕೆಗಳ ಕಾನೂನನ್ನು ತೆಗೆದು ಹಾಕುವುದು. ಈ ಮೂಲಕವಾಗಿ ಬಂಡವಾಳಶಾಹಿಗಳು ಯಾವುದೇ ಕೈಗಾರಿಕೆಗಳನ್ನು ರೋಗಗ್ರಸ್ತಮಾಡಿ ಸಾವಿರಾರು ಕೋಟಿ ಲೂಟಿ ಮಾಡುವ ಅವಕಾಶ ನೀಡುವುದು.

ಇವೆಲ್ಲವೂದೇಶದ ದೊಡ್ಡ ದೊಡ್ಡ ಕೈಗಾರಿಕೆಗಳ ಮಾಲೀಕರು ಹಾಗೂ ವಿದೇಶಿ ಬಂಡವಾಳದಾರರಿಗೆ ದೊಡ್ಡ ಹಬ್ಬವನ್ನುಂಟು ಮಾಡಿದೆ. ಕಾರ್ಮಿಕ ಕಾನೂನುಗಳನ್ನು ಕಿತ್ತು ಹಾಕಬೇಕೆಂದು ವಿದೇಶಿ ಹಣ ಬಂಡವಾಳ ಹತ್ತಾರು ವರ್ಷಗಳಿಂದಲೂ ಮಾಡುತ್ತಿರುವ ಒತ್ತಾಯಕ್ಕೆ ಬಲಿ ಬಿದ್ದು ಸರ್ಕಾರ ತಾನು ಬಂಡವಾಳಶಾಹಿಗಳ - ಅದರಲ್ಲಿಯೂ ದೊಡ್ಡ ದೊಡ್ಡ ಬಂಡವಾಳಶಾಹಿಗಳ ಸರ್ಕಾರ ಎಂದು ಸಾಬಿತು ಪಡಿಸಿಕೊಂಡಿದೆ.

ಸರ್ಕಾರಿ ನೌಕರರನ್ನು ಶೇ 2 ರಷ್ಟು ತೆಗೆದು ಹಾಕುವುದು ಎಂದರೆ 66,000 ಕೇಂದ್ರ ಸರ್ಕಾರಿ ನೌಕರರನ್ನು ಮನೆಗೆ ಕಳುಹಿಸುವುದು ಕೂಡ ಬಜೆಟ್‌ನಲ್ಲಿ ಸೂಚಿಸಿರುವ ಕ್ರಮ.

ಜೊತೆಗೆ ಸರ್ಕಾರಿ ಸ್ವಾಮ್ಯದ ಕೈಗಾರಿಕೆಗಳನ್ನು ಮಾರಿ 12,000 ಕೋಟಿ ರೂ. ಗಳಿಸುವ ಉದ್ದೇಶ ಸಾರ್ವಜನಿಕ ಕೈಗಾರಿಕೆಗಳನ್ನು ಅಥವಾ ಅದರ ಶೇರುಗಳನ್ನು ಕಡಿಮೆ ಬೆಲೆಯಲ್ಲಿ ಖಾಸಗಿಯವರಿಗೆ ಮಾರಿ ದೇಶದ ಜನರ ಹಣ ಮತ್ತು ಕಾರ್ಮಿಕರ ಬೆವರಿನಿಂದ ಗಳಿಸಿದ ಸಂಪತ್ತನ್ನು ಲೂಟಿ ಮಾಡಲು ನೀಡಿದ ಅವಕಾಶ.

ಹೀಗೆ ಸರ್ಕಾರ ದೇಶದ ಸಾರ್ವಜನಿಕ ಕೈಗಾರಿಕೆಗಳ ಮೇಲೆ, ಸಣ್ಣ ಕೈಗಾರಿಕೆಗಳ ಮೇಲೆ ಹಾಗೂ ಕಾರ್ಮಿಕರ ಮೇಲೆ ಸಾರಿದ ಅಘೋಷಿತ ಯುದ್ಧವೇ. 2001 ರ ಬಜೆಟ್ ಈ ಯುದ್ಧ ಬಂಡವಾಳಿಗರ ಮತ್ತು ಕಾರ್ಮಿಕರ ನಡುವಿನ ವರ್ಗ ಸಂಘರ್ಷ. ಹಿಂದಿನ ಸರ್ಕಾರಗಳು ಈ ಕ್ರಮಗಳನ್ನು ಕೈಗೊಂಡು ವಿದೇಶಿ ಹಾಗೂ ದೇಶಿ ಬಂಡವಾಳದಾರರನ್ನು ತೃಪ್ತಿ ಪಡಿಸಲು ಕಾತುರರಾಗಿದ್ದರೂ ಕಾರ್ಮಿಕರ ಹೋರಾಟ ಈ ಕ್ರಮಗಳನ್ನು ಕೈಗೊಳ್ಳದಂತೆ ಮಾಡಿತ್ತು. ಈ ವರ್ಗ ಸಂಘರ್ಷದಲ್ಲಿ ಬಂಡವಾಳಶಾಹಿಗಳು ಮತ್ತೊಂದು ಹೊಸ ಹಾಗೂ ತೀವ್ರ ಧಾಳಿ ಆರಂಭಿಸಿದ್ದಾರೆ. ಕೋಟ್ಯಾಂತರ ಕಾರ್ಮಿಕರ ಹಕ್ಕುಗಳು ಮತ್ತು ಜೀವನದ ಮೇಲಿನ ಉಗ್ರ ಧಾಳಿ ಇದು. ಈ ಧಾಳಿಯಿಂದ ಸಂರಕ್ಷಿಸಿಕೊಳ್ಳಲು ಕಾರ್ಮಿಕ ವರ್ಗ ಮೈಕೊಡವಿ ಎದ್ದೇಳಬೇಕು.

- ಕೃಷಿರಂಗದ ಮೇಲೆ......

(ಮುಂದಿನವಾರ)

ಜನ ಏನನ್ನುತ್ತಾರೆ ಕೇಂದ್ರ ಬಜೆಟ್ ಬಗ್ಗೆ?

ಮದುವೆಗಳು ಸ್ವರ್ಗದಲ್ಲಿ ನಡೆಯುತ್ತವೆ ಎಂಬುದು ಒಂದು ಪ್ರಚಲಿತ ನಂಬಿಕೆ. ಬಜೆಟ್‌ಗಳು ಎಲ್ಲಿ ತಯಾರಾಗುತ್ತವೆ ಎಂಬುದು ಈಗ ಪ್ರಶ್ನೆ. ಭಾರತ ದೇಶದ ಬಜೆಟ್ ಕರ್ನಾಟಕ ರಾಜ್ಯದ ಬಜೆಟ್‌ಗಳನ್ನು ನೋಡಿದರೆ ಅವು ಎಲ್ಲಿ ತಯಾರಾಗುತ್ತಿವೆ ಎಂಬ ಗಂಭೀರ ಅನುಮಾನ ಬಾರದಿರದು. ರಾಜ್ಯದ ರಾಷ್ಟ್ರದ ಹಣಕಾಸು ಮಂತ್ರಿಗಳ ಮುಖ್ಯಮಂತ್ರಿ, ಪ್ರಧಾನ ಮಂತ್ರಿಗಳ ಸ್ವರ್ಗವಾಗಿರುವ ವಾಷಿಂಗ್‌ಟನ್ ನ್ಯೂಯಾರ್ಕ್‌ಗಳಂತಹ ನಗರಗಳಲ್ಲೇ ಅವು ತಯಾರಾಗುತ್ತಿರಬೇಕು. (ಜಿನಿವಾ, ವಿಶ್ವ ವ್ಯಾಪಾರ ಸಂಘಟನೆಯ ಕೇಂದ್ರ, ವಾಷಿಂಗ್ ಟನ್ ವಿಶ್ವ ಬ್ಯಾಂಕ್ ಹಾಗೂ ಅಂತರ ರಾಷ್ಟ್ರೀಯ ಹಣಕಾಸು ಸಂಸ್ಥೆ ಐಎಂಎಫ್‌ನ ಕೇಂದ್ರ ಕಛೇರಿ ಇರುವ ನಗರಗಳು) ಏಕೆಂದರೆ ಭಾರತದ ಜನ ರೈತರು, ಕಾರ್ಮಿಕರು ಬಡವರು ಆಯ್ಕೆ ಮಾಡಿದ ಈ ಸರ್ಕಾರಗಳು ಇಂಥ ಬಜೆಟ್‌ಗಳನ್ನು ಮಂಡಿಸುತ್ತಿವೆ ಎಂದರೆ ನಮ್ಮ ಸರ್ಕಾರಗಳ ಜುಟ್ಟು ಹಿಡಿದು ಈ ಶಕ್ತಿಗಳು ಎಷ್ಟು ಕಿವಿ ಹಿಂಡಿರ ಬಹುದು. ನಮ್ಮ ಮಂತ್ರಿ ಮಹೋದಯರ ಕೈಗಳನ್ನು ಎಷ್ಟು ತಿರುಚಿರಬಹುದು ಎಂಬುದನ್ನು ನಾವು ಊಹಿಸಬಹುದು.

ಜನಸಾಮಾನ್ಯರಿಗೆ ಪಡಿತರ ಸಕ್ಕರೆ ಬೆಲೆ ಏರಿಕೆ, ಅಂಚೆದರ ಏರಿಕೆ, ಕೃಷಿ ಉತ್ಪನ್ನಗಳ ಬೆಲೆ ಕುಸಿತದಿಂದ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ರೈತರ ರಕ್ಷಣೆಗೆ ಬೇಕಾದ ಗಂಭೀರ ಕ್ರಮಗಳೇ ಇಲ್ಲ. ಬದಲಿಗೆ ಕಾರು ಕೊಳ್ಳುವವರಿಗೆ ತೆರಿಗೆ ಕಡಿತ, ತಂಪು ಪಾನೀಯಗಳ ಬೆಲೆ ಇಳಿಕೆ, ಒಂದು ಸಾವಿರಕ್ಕಿಂತ ಕಡಿಮೆ ಕಾರ್ಮಿಕರಿರುವ ಕಾರ್ಖಾನೆಯನ್ನು ಯಾವಾಗ ಬೇಕಾದರೂ ಮುಚ್ಚಬಹುದಂತೆ ಕೈಗಾರಿಕೋದ್ಯಮಿಗಳು. ಕಾರ್ಮಿಕ ಕಾನೂನುಗಳ ಸಡಿಲೀಕರಣ.... ಹೀಗಿದೆ ನಮ್ಮ ಸರ್ಕಾರದ ಬಜೆಟ್ ಇಂಥ ಬಜೆಟ್‌ನ ಬಗ್ಗೆ ನಮ್ಮ ಜನ ಏನನ್ನುತ್ತಾರೆ ಎಂದು ತಿಳಿಯಲು ತೀರ್ಮಾನಿಸಿದವು. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಬೆಂಗಳೂರು ನಗರ ಕೇಂದ್ರದ ಶಾಖೆಗಳು. ಮಾರ್ಚ್ 1 ರಂದು ಸಂಜೆ 4.00ಕ್ಕೆ ನಗರದ ಮೈಸೂರು ಬ್ಯಾಂಕ್ ವೃತ್ತದಲ್ಲಿ 4 ಡಬ್ಬಗಳು ಕುಳಿತಿದ್ದವು. ಪಕ್ಷದ ಕಾರ್ಯಕರ್ತರು ಕರಪತ್ರ ಹಾಗೂ ಮತ ಪತ್ರವೂ ಆದ ಪತ್ರವನ್ನು ದಾರಿಹೋಕರಿಗೆ ಹಂಚಿದರು. ಹಲವರು ಕುತೂಹಲದಿಂದ ಬಜೆಟ್ 'ವಿರೋಧಿಸುತ್ತೇವೆ' 'ಸ್ವಾಗತಿಸುತ್ತೇವೆ' ಇಂತಹ ಕಾಲಂಗೆ 'X' ಈ ತಮ್ಮ ಅಭಿಪ್ರಾಯವನ್ನು ಸೂಚಿಸಿ, ಸ್ವಲ್ಪ ಸಿಟ್ಟನ್ನು ಸೇರಿಸಿ ಡಬ್ಬಿಗೆ ಸೇರಿಸಿದರು. ಇನ್ನು ಕೆಲವರು ತಮ್ಮ 'ಅಭಿಪ್ರಾಯ' ತಿಳಿಸಲು ತಯಾರಿಲ್ಲ. ಅಷ್ಟು ಸಿಟ್ಟು ಬಜೆಟ್ ಬಗ್ಗೆ. ಅಭಿಪ್ರಾಯ ಸಂಗ್ರಹಿಸುವುದರಿಂದ ಏನಾಗುತ್ತದೆ, ಸರ್ಕಾರದ ವಿರುದ್ಧ ಪ್ರತಿಭಟಿಸಿ ಎಂದು ಸಲಹೆ ನೀಡಿದರು. ಅದೂ ಸಹ ನಡೆಯಿತು.



ಬೆಂಗಳೂರಿನಲ್ಲಿ ಜನಾಭಿಪ್ರಾಯ ಸಂಗ್ರಹ

ಈ ಜನಾಭಿಪ್ರಾಯ ಸಂಗ್ರಹ ಒಂದು ವಾರಗಳ ಅವಧಿಯದ್ದು. ಕಾ। ಕೆ. ಪ್ರಕಾಶ್ ಸಿಪಿಐ(ಎಂ) ನ ರಾಜ್ಯ ಸಮಿತಿ ಸದಸ್ಯರು ಕಾರ್ಯಕ್ರಮ ಉದ್ಘಾಟಿಸಿ ಬಜೆಟ್‌ನ ಜನ ವಿರೋಧಿ ಹೂರಣವನ್ನು ಜನರ ಮುಂದೆ ಬಿಡಿಸಿಟ್ಟರು. ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಪಿ. ಜಗನ್ನಾಥ್, ಮಹಿಳಾ ಸಂಘಟನೆಯ ಮುಖಂಡರಾದ ಶಾರದಾರವರು ಮಾತನಾಡಿದರು. ಯುವ ಮುಖಂಡ ಲಕ್ಷ್ಮಣ ಕುಮಾರ್ ಕಾರ್ಯಕ್ರಮ ನಿರ್ವಹಿಸಿದರು. ಅನಂತರ ಜನ ವಿರೋಧಿ ಬಜೆಟ್‌ನ ಭೂತಕ್ಕೆ ಬೆಂಕಿ ಇಟ್ಟು ಸುಟ್ಟು ಧಿಕ್ಕಾರ ಹಾಕಲಾಯಿತು.

ವಿಜಾಪುರ: ಕೇಂದ್ರದ ಬಜೆಟನ್ನು ವಿರೋಧಿಸಿ ಸಿಪಿಐ(ಎಂ) ಹಾಗೂ ವಿವಿಧ ರೈತ-ಯುವಜನ, ರೈತ-ಕಾರ್ಮಿಕ ಸಂಘಟನೆಗಳ ನೇತೃತ್ವದಲ್ಲಿ ಫೆ. 2 ರಂದು ನಗರದ ಗಾಂಧಿ ಪ್ರತಿಮೆ ಬಳಿ ಮತಪ್ರದರ್ಶನ ಹಾಗೂ ಬಹಿರಂಗ ಸಭೆ ಜರುಗಿತು. ಸಭೆಯಲ್ಲಿ ಹಿರಿಯ ಮುಖಂಡರಾದ ಎನ್.ಕೆ.ಉಪಾಧ್ಯಾಯ,ಭೀಮಸಿ ಕಲಾದಗಿ ಮುಂತಾದವಾರು ಮಾತನಾಡಿದರು.

ಗುಲ್ಬರ್ಗ: ನಗರದಲ್ಲಿ ಕರ್ನಾಟಕ ಪ್ರಾಂತ ರೈತ ಸಂಘ ಮತ್ತು ಜನವಾದಿ ಮಹಿಳಾ ಸಂಘಟನೆಗಳು ಮತ್ತಿತರ ಸಂಘಟನೆಗಳ ಆಶ್ರಯದಲ್ಲಿ ಬೃಹತ್ ಪ್ರತಿಭಟನೆಯನ್ನು ಹಮ್ಮಿಕೊಳ್ಳಲಾಗಿತ್ತು. ಕಾಂ. ಮಾರುತಿ ಮಾನ್ಪಡೆ ಮತ್ತು ಕಾಂ. ಕೆ.ನೀಲಾ ಮೊದಲಾದವರು ಮಾತನಾಡಿದರು.

ಉತ್ತರ ಕನ್ನಡ: ಕಾರವಾರದಲ್ಲಿ ಎನ್‌ಪಿಎಂಪಿ ನೇತೃತ್ವದಲ್ಲಿ ನೂರಕ್ಕೂ ಹೆಚ್ಚು ಕಾರ್ಮಿಕರು, ಮಹಿಳೆಯರು, ವಿದ್ಯಾರ್ಥಿಗಳು ಕೇಂದ್ರ ಸರ್ಕಾರದ ನೀತಿಯ ವಿರುದ್ಧ ಪ್ರತಿಭಟಿಸಿದರೆ ಭಟ್ಕಳದಲ್ಲಿ ಸಿಐಟಿಯು ಆಶ್ರಯದಲ್ಲಿ ನೂರಾರು ಕಾರ್ಮಿಕರು ಪ್ರತಿಭಟನೆ ಸಲ್ಲಿಸಿದರು.

ಇನ್ನಷ್ಟು ವರದಿಗಳು
ಮುಂದಿನ ಸಂಚಿಕೆಯಲ್ಲಿ

ಅಕ್ಕಿ ಆಲೂರು ಘಟನೆ.......

ನಿರಾತಂಕವಾಗಿ ನಡೆಯುತ್ತದೆ. ಪೊಲೀಸರು ಲಾಟಿ ಪ್ರಹಾರ ಮಾಡಿ ಜನಜಂಗುಳಿಯನ್ನು ನಿಯಂತ್ರಿಸಲು ಪ್ರಯಾಸಪಡಬೇಕಾಗುತ್ತದೆ. ಹೋಳಿ ಹಬ್ಬ ಬಂತೆಂದರೆ ಅಕ್ಕಿ ಆಲೂರಿನ ಮುಸಲ್ಮಾನರು ಆತಂಕಕ್ಕೆ ಒಳಗಾಗುತ್ತಾರೆ. ಯಾವಾಗ ಏನು ಆಗುವುದೋ ಎಂಬ ಭಯ ಅವರನ್ನು ಆವರಿಸುತ್ತದೆ. ಕಾನೂನು ವ್ಯವಸ್ಥೆ ಪರಿಪಾಲಕರು ಇಲ್ಲಿ ಇನ್ನೊಂದು ಸ್ಫೋಟಕ ಪರಿಸ್ಥಿತಿ ಉಂಟಾಗದಂತೆ ದಿಟ್ಟ ಕ್ರಮ ಕೈಗೊಳ್ಳುವುದು ಅಗತ್ಯವಾಗಿದೆ.

ಕಳೆದ ಹತ್ತು ಹದಿನೈದು ವರ್ಷಗಳಲ್ಲಿ ಅಕ್ಕಿ ಆಲೂರಿನ ಮುಸಲ್ಮಾನರ ವಿರುದ್ಧ ನಡೆದ ದಾಳಿ ದಬ್ಬಾಳಿಕೆಗಳನ್ನು ಲೆಕ್ಕಹಾಕಿದಾಗ ಆ ವಿಭಾಗದ ಜನತೆ ಪ್ರದರ್ಶಿಸಿದ ತಾಳ್ಮೆ ಎದ್ದು ಕಾಣುತ್ತದೆ. 1990ರಲ್ಲಿ ಒಂದು ದಿನ ಬೆಳಿಗ್ಗೆ ಗ್ರಾಮದ ಪ್ರಸಿದ್ಧ ವೀರಭದ್ರ ದೇವಸ್ಥಾನದ ಮೇಲೆ ಹಸಿರು ಬಾವುಟವೊಂದು ಹಾರಾಡುತ್ತಿರುವುದು ಕಂಡು ಬಂತು. ಕ್ಷಣಾರ್ಧದಲ್ಲಿ ಊರೊಳಗೆ ಪರಿಸ್ಥಿತಿ ಪ್ರಕ್ಷುಬ್ಧವಾಯಿತು. ಯಾವ ಸಾಕ್ಷಿ ಆಧಾರವನ್ನು ಹುಡುಕುವ ಗೋಜಿಗೆ ಹೋಗದೆ ಆರೋಪವನ್ನು ಮುಸಲ್ಮಾನರ ತಲೆಯ ಮೇಲೆ ಹೊರಿಸಲಾಯಿತು. ಆದರೆ ಕೆಲವೊಬ್ಬ ಅನುಭವಸ್ಥ ಹಿರಿಯರ ಮಧ್ಯಸ್ಥಿಕೆಯಿಂದ ಆಗಬಹುದಾದ ಅನಾಹುತ ತಪ್ಪಿಹೋಯಿತು.

1998ರಲ್ಲಿ ಜಗತ್ತಿನಲ್ಲಿ ಎಲ್ಲಿಯೂ ನಡೆಯದಿರುವ ಹೇಯ ಕೃತ್ಯಗಳು ಅಕ್ಕಿ ಆಲೂರಿನಲ್ಲಿ ನಡೆದವು. ಮಾರ್ಚ್ 7 ರಂದು ರಾತ್ರಿ ಗ್ರಾಮದ ಜಾಮಿಯಾ ಮಸೀದಿಯೊಳಗೆ ನುಗ್ಗಿ ಅಲ್ಲಿದ್ದ ಎರಡು ಕುರಾನ್ ಗ್ರಂಥಗಳನ್ನು, ಮೊಹರಂ ಹಬ್ಬದಲ್ಲಿ ಮೆರೆಯಿಸುವ 23 ಪಂಜಗಳನ್ನು ಮತ್ತು ನೆಲಕ್ಕೆ ಹಾಸುವ ಜಮಖಾನೆಗಳನ್ನು ಕದ್ದೊಯ್ಯಲಾಯಿತು. ಕೆಲವು ದಿನಗಳ ನಂತರ 13 ಪಂಜಗಳು ಕಲ್ಲಾಪುರ ಕೆರೆಯಲ್ಲಿ ಪತ್ತೆಯಾದವು. ಇನ್ನೆರಡು ದಿನಗಳ ನಂತರ ಮುಸಲ್ಮಾನರ ಸ್ಮಶಾನದಲ್ಲಿನ ಕೆಲವು ಗೋರಿಗಳನ್ನು ಅಗೆದು ಹಾಕಿದ್ದು ಕಂಡುಬಂತು. ಒಂದು ಗೋರಿಯಲ್ಲಿ ಕುರಾನ್ ಗ್ರಂಥದ ಜೊತೆಯಲ್ಲಿ ಒಂದು ಸತ್ತ ಕೋಳಿಯನ್ನು ಹಾಕಲಾಗಿತ್ತು. ಇನ್ನೊಂದರಲ್ಲಿ ಸತ್ತ ಕಾಗೆಗಳನ್ನು ಅಮೀರ್ ಶ್ಯಾವಲಿ ಮಕಾನದ ಗಲೇಪು ವಸ್ತ್ರದಲ್ಲಿ ಸುತ್ತಿ ಹುಗಿಯಲಾಗಿತ್ತು. ಮತ್ತೊಂದರಲ್ಲಿ ಒಂದು ಸತ್ತ ನಾಯಿ ಹಾಗೂ ಒಂದು ಪಂಜವನ್ನು ಹೂಳಲಾಗಿತ್ತು. ಇನ್ನೊಂದು ಗೋರಿಯಲ್ಲಿ ಸತ್ತ ಹಂದಿಯನ್ನು ಹಾಕಿ ಮಣ್ಣು ಮುಚ್ಚಲಾಗಿತ್ತು. ದ್ವೇಷಮಯ ವಾತಾವರಣ ಇಡೀ ಗ್ರಾಮವನ್ನು ಆವರಿಸಿತು. ಪೊಲೀಸರು ಬಂದು ಪಂಚನಾಮೆ ಮಾಡಿದರು. ದುಷ್ಕರ್ಮಿಗಳನ್ನು ಪತ್ತೆಹಚ್ಚುವ ಪ್ರಾಮಾಣಿಕ ಪ್ರಯತ್ನ ನಡೆಯಲಿಲ್ಲ.

ಸ್ಮಶಾನದಲ್ಲಿ ನಡೆಸಲಾದ ಕಿಡಿಗೇಡಿತನ ಅಲ್ಲಿಗೆ ನಿಲ್ಲಲಿಲ್ಲ. ಸುಮಾರು ಒಂದು ತಿಂಗಳ ನಂತರ ಬಕ್ರೀದ್ ಹಬ್ಬದ ಬೆಳಿಗ್ಗೆ ಅಕ್ಕಿಆಲೂರು ಬಸ್ ನಿಲ್ದಾಣದಲ್ಲಿರುವ ಸಾರ್ವಜನಿಕ ಪಾಯಖಾನೆಯಲ್ಲಿ 3 ಪಂಜಗಳು ಹಾಗೂ ಒಂದು ಕುರಾನ್ ಗ್ರಂಥವನ್ನು ಬಿಸಾಡಿದ್ದು ಪತ್ತೆಯಾಯಿತು. ಮುಸಲ್ಮಾನರ ಮನೆಗಳಲ್ಲಿದ್ದ ಹಬ್ಬದ ವಾತಾವರಣ ಮಾಯವಾಯಿತು. ಮತ್ತೊಮ್ಮೆ ಗ್ರಾಮದಲ್ಲಿ ಉದ್ರಿಕ್ತ ಪರಿಸ್ಥಿತಿ ಉಂಟಾಯಿತು. ಪೊಲೀಸ್ ಠಾಣೆಯ ಎದುರು ಜಮಾಯಿಸಿದ ಜನರನ್ನು ನಿಯಂತ್ರಿಸಲು ಪೊಲೀಸರು ಭಾರೀ ಶ್ರಮಪಡಬೇಕಾಯಿತು.

ಮುಸಲ್ಮಾನರು ಅಂದು ಅನುಭವಿಸಿದ ಮೂಕ ವೇದನೆ ಕಳವಳಕಾರಿಯಾಗಿತ್ತು. ತಮಗಾದ ಅನ್ಯಾಯ ಆಘಾತವನ್ನು ಅವರು ಯಾರೊಂದಿಗೂ ಹಂಚಿಕೊಳ್ಳುವಂತಿರಲಿಲ್ಲ. ದುಷ್ಕರ್ಮಿಗಳನ್ನು ಪತ್ತೆಹಚ್ಚಿ ಶಿಕ್ಷಿಸುವ ಭರವಸೆ ನೀಡಲಾಯಿತು. ಮುಸಲ್ಮಾನರು ಅಂದಿನ ತಮ್ಮ ಸಮಾಜದ ಮುಖಂಡರ ಮಾತಿಗೆ ಬೆಲೆಕೊಟ್ಟು ತಮಗಾದ ನೋವನ್ನು ನುಂಗಿ ಶಾಂತಿಯನ್ನು ಕಾಪಾಡಿದರು. ಅಂದು ಅವರು ಪ್ರಚೋದಿತರಾಗಿ ಸಹನೆಯನ್ನು ಕಳೆದುಕೊಂಡಿದ್ದರೆ ಊಹಿಸಲಾಗದ ಅನಾಹುತವಾಗುತ್ತಿತ್ತು.

ದಿಟ್ಟ ಕ್ರಮದ ಕೊರತೆ :

ಅಕ್ಕಿ ಆಲೂರಿನಲ್ಲಿ ನಡೆದ ಈ ಘಟನಾವಳಿಗಳನ್ನು ಅಂದು ಆಳುವ ಪಕ್ಷವಾಗಿದ್ದ ಜನತಾ ದಳದವರಾಗಲಿ ವಿರೋಧ ಪಕ್ಷವಾದ ಕಾಂಗ್ರೆಸ್ ನವರಾಗಲಿ ಖಂಡಿಸಲಿಲ್ಲ. ಬಿಜೆಪಿ ಯವರಿಂದಂತು ಯಾರೂ ಸಮಾಜಕ್ಕೆ ಒಳ್ಳೆಯದಾಗುವುದನ್ನು ನಿರೀಕ್ಷಿಸುವ ಪ್ರಶ್ನೆಯೇ ಇರಲಿಲ್ಲ. ಸಿಪಿಐ(ಎಂ) ಮಾತ್ರ, ಜಿಲ್ಲೆಯಲ್ಲಿ ಒಂದು, ಸಣ್ಣ ಪಕ್ಷವಾಗಿದ್ದರೂ ಜಿಲ್ಲೆಯಲ್ಲಿರುವ ನೂರಾರು ಕಾರ್ಯಕರ್ತರನ್ನು ಸೇರಿಸಿ ಅಕ್ಕಿ ಆಲೂರು ಘಟನೆಗಳ ವಿರುದ್ಧ ಹಾವೇರಿಯಲ್ಲಿ ಪ್ರತಿಭಟನಾ ಮೆರವಣಿಗೆ ನಡೆಸಿ ಜಿಲ್ಲಾಧಿಕಾರಿಗಳ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಿತ್ತು. ಹಾವೇರಿ ನಗರದ ಕೆಲವು ಜಾತ್ಯಾತೀತ ಮನೋಭಾವದ ವಕೀಲರು ಸಿಪಿಐ(ಎಂ) ಪ್ರತಿಭಟನೆಯನ್ನು ಬಹಿರಂಗವಾಗಿ ಬೆಂಬಲಿಸಿದ್ದರು.

ಕೋಮು ದ್ವೇಷದ ವಿಷವೃಕ್ಷವನ್ನು ಮೊಳಕೆಯಲ್ಲಿಯೇ ಮುರಿದು ಹಾಕಿದ್ದರೆ [illegible]

ಸಾವಿಗಾಗಿ ಕಾದುಕೂತ ಭೂಗತ ಸಂಚು

ಕಳೆದ ಡಿಸೆಂಬರ್ 27 ರಂದು ಸಂಭವಿಸಿದ್ದ ಘಟನೆಯ ಹಿಂದಿನ ಈ ಎಲ್ಲಾ ಬೆಳವಣಿಗೆಗಳನ್ನು ಗಣನೆಗೆ ತೆಗೆದುಕೊಂಡಾಗ ಮಾತ್ರ ಯಾರದು ಎಷ್ಟು ಸರಿ, ಎಷ್ಟು ತಪ್ಪು ಎಂಬುದು ಸ್ಪಷ್ಟವಾಗುತ್ತದೆ. ಡಿಸೆಂಬರ್ ಗಲಭೆ ಪೂರ್ವಯೋಜಿತ ಮಾತ್ರವಲ್ಲ ಪೂರ್ಣಯೋಜಿತವೂ ಆಗಿದೆ. ದಲಿತರ ಸ್ಮಶಾನದ ಪ್ರಶ್ನೆಯನ್ನು ಮುಂದಿಟ್ಟಕೊಂಡು ಅಮಾಯಕ ಚಲವಾದಿಯರನ್ನು ಬಲಿಕೊಡುವ ನೀಲಿನಕ್ಷೆ ಸಿದ್ಧವಾಗಿತ್ತು. ಸ್ಮಶಾನಕ್ಕೆ ಹೋಗಲು ಇನ್ನೂ ಇಪ್ಪತ್ತು ಅಡಿ ಜಾಗವನ್ನು ಮುಸಲ್ಮಾನರು ಬಿಟ್ಟುಕೊಡಬೇಕು ಎಂದು ಒತ್ತಾಯಿಸಿ ಅಕ್ಕಿಆಲೂರು ನಾಡಕಛೇರಿಯ ಎಂದರು ಸತ್ಯಾಗ್ರಹವೊಂದು ಆರಂಭವಾಯಿತು. ಅದಕ್ಕೋಸ್ಕರ ಕೆಲವು ಜನ ಮೇಲ್ಜಾತಿ ಚಡ್ಡಿಗಳನ್ನು ಒಳಗೊಂಡ ಸಮಿತಿಯೊಂದನ್ನು ಹುಟ್ಟುಹಾಕಿ ಅದಕ್ಕೆ ದಲಿತ ಸಂಘರ್ಷ ಸಮಿತಿ ಎಂದು ಹೆಸರಿಡಲಾಯಿತು. ಎಚ್. ನಿಂಗಪ್ಪ ಎಂಬ ದಲಿತನನ್ನು ಹಿಡಿದು ಆತನಿಗೆ ಸಂಚಾಲಕ ಪಟ್ಟಕಟ್ಟಲಾಯಿತು. ದಲಿತರಿಗಾಗಿ 30 ಅಡಿ ಆಗಲದ 180 ಅಡಿ ಉದ್ದರ ಜಾಗವನ್ನು ಬಿಟ್ಟುಕೊಟ್ಟಾಗಲೇ ಸ್ಮಶಾನಕ್ಕೆ ಹೋಗಲು 20 ಅಡಿ ಅಗಲದ ದಾರಿಯನ್ನು ಗುರುತಿಸಲಾಗಿತ್ತು. ದಾರಿಗಾಗಿ ಹತ್ತು ಅಡಿ ಜಾಗವನ್ನು ಮುಸಲ್ಮಾನರು ತಮ್ಮ ಸ್ಮಶಾನದ ಜಾಗದಿಂದ ಬಿಟ್ಟುಕೊಡುವುದೆಂದೂ ಇನ್ನೊಂದು ಹತ್ತು ಅಡಿ ಜಾಗವನ್ನು ಪಕ್ಷದ ಜನತಾ ಶಿಕ್ಷಣ ಸಂಸ್ತೆಯವರಿಂದ ಪಡೆಯಬೇಕೆಂದು ನಿರ್ಣಯವಾಗಿತ್ತು. ನಿರ್ಣಯಕ್ಕೆ ಅನುಗುಣವಾಗಿ ಮುಸಲ್ಮಾನರು 10 ಅಡಿ ಅಗಲದ ಜಾಗವನ್ನು ದಾರಿಗಾಗಿ ಅಂದೇ ಬಿಟ್ಟುಕೊಟ್ಟಿದ್ದಾರೆ. ಇನ್ನೊಂದು ಹತ್ತು ಅಡಿ ಜಾಗವನ್ನು ಜನತಾ ಶಿಕ್ಷಣ ಸಂಸ್ಥೆಯಿಂದ ಪಡೆಯಲು ದಲಿತರಾಗಲಿ, ದಲಿತರ ಬಗ್ಗೆ ಇಷ್ಟೊಂದು ಕಾಳಜಿ ತೋರಲಾರಂಭಿಸಿರುವ ಆರ್.ಎಸ್.ಎಸ್. ನವರಾಗಲಿ ಪ್ರಯತ್ನ ಮಾಡಲಿಲ್ಲ. ಅವರಿಗೆ ಸ್ಮಶಾನದ ದಾರಿಗಿಂತ ಹೆಚ್ಚಾಗಿ ಮುಸಲ್ಮಾನರೊಂದಿಗೆ ಘರ್ಷಣೆಗೆ ಇಳಿಯುವುದೇ ಮುಖ್ಯವಾಗಿತ್ತು. ಅಧಿಕಾರಿಗಳು ದಾಖಲೆಗಳ ಆಧಾರದಲ್ಲಿ ವಿವಾದವನ್ನು ಇತ್ಯರ್ಥಗೊಳಿಸುವುದಾಗಿ ನೀಡಿದ ಆಶ್ವಾಸನೆಯ ಹಿನ್ನಲೆಯಲ್ಲಿ ಸತ್ಯಾಗ್ರಹವನ್ನು ಹಿಂತೆಗೆದುಕೊಳ್ಳಲಾಯಿತಾದರೂ ಸಂಚು ಭೂಗತವಾಗಿಯೇ [illegible] ದಲಿತರೊಬ್ಬರ ಸಾವಿಗಾಗಿ ಕಾದುಕುಳಿತಿತ್ತು [illegible] ನಿರ್ಧರಿಸಲಾಗಿತ್ತು.



ದುಷ್ಕರ್ಮಿಗಳಿಂದ ಧ್ವಂಸಕ್ಕೊಳಗಾದ ಒಂದು ಮನೆ

ತಪ್ಪಿಸಬಹುದಾಗಿತ್ತು. ಗಲಭೆಗಳನ್ನು ಪ್ರಚೋದಿಸುತ್ತಿರುವ ಸೂತ್ರದಾರಿ ಯಾರು ಎಂಬುದನ್ನು ಪತ್ತೆಹಚ್ಚುವ ಕೆಲಸ ಅಸಾಧ್ಯವೇನಾಗಿರಲಿಲ್ಲ. ದುಷ್ಕರ್ಮಿಗಳ ವಿರುದ್ಧ ದಿಟ್ಟ ಕ್ರಮ ಜರಗಿಸಲು ಕಾನೂನು ಪಾಲಕರು ಹಿಂದೇಟು ಹಾಕಿದ್ದೇ ಮುಂದಿನ ಬೆಳವಣಿಗೆಗಳಿಗೆ ಕಾರಣವಾಯಿತು. ಹಿಂದಿನ ಘಟನೆಗಳಾಗಿ ಸುಮಾರು ಎರಡು ತಿಂಗಳ ನಂತರ ಅಹಲೇ ಹದೀಸ್ ಪಂಥದ ಮುಸಲ್ಮಾನರು ಕಟ್ಟುತ್ತಿದ್ದ ಈದ್ಗಾವನ್ನು ನೂರಾರು ಜನ ಗುದ್ದಲಿ ಸನಿಕೆಗಳೊಂದಿಗೆ ಲಾರಿಯಲ್ಲಿ ಹೋಗಿ ರಾತ್ರೋರಾತ್ರಿ ಕೆಡವಿಹಾಕಿದರು. ಅಂದಿನ ಗಲಭೆಯಲ್ಲಿ ಎರಡೂ ಕಡೆಯ ನೂರಾರು ಜನರು ಗಾಯಗೊಂಡಿದ್ದರು.

ಅಂದು ನಡೆದಿದ್ದೇನು? ಚಲವಾದಿ ಸಮಾಜಕ್ಕೆ ಸೇರಿದ ಗಂಗವ್ವ ಮಲ್ಲಪ್ಪ ಹೆಬ್ಬಾಳ ಎಂಬ ಮಹಿಳೆ ಡಿಸೆಂಬರ್ 26ರ ಬೆಳಿಗ್ಗೆ ಮೃತಪಟ್ಟಳು. ಮೃತಳು ಮುಪ್ಪು ಹಾಗೂ ಅನಾರೋಗ್ಯದಿಂದ ಬಳಲುತ್ತಿದ್ದವಳಾಗಿದ್ದರೂ ಆಕೆಯ ಸಾವು ಸಹಜಸಾವು ಆಗಿರಲಿಲ್ಲವೆಂದು ಅವಳನ್ನು ಉಸಿರುಕಟ್ಟಿಸಿ ಸಾಯಿಸಲಾಗಿತ್ತು ಎಂಬ ಮಾತು ಈಗ ಕೇಳಿಬರತೊಡಗಿದೆ. ಮೃತಳ ಅಂತ್ಯ ಸಂಸ್ಕಾರ ಉದ್ದೇಶಪೂರ್ವಕವಾಗಿ ವಿಳಂಬಮಾಡಲಾಯಿತು. ಸ್ಮಶಾನದಲ್ಲಿ ಗಲಭೆ ಮಾಡಿ ಡಿಸೆಂಬರ್ 28ರ ರಂಜಾನ್ ಹಬ್ಬಕ್ಕೆ ಅಡ್ಡಿಯನ್ನುಂಟುಮಾಡುವುದು ಅವರ ಉದ್ದೇಶವಾಗಿತ್ತು. 27ರ ಸಂಜೆ 4-30ಕ್ಕೆ ಶವವನ್ನು ಅಂತ್ಯಸಂಸ್ಕಾರಕ್ಕೆಂದು ಎತ್ತಲಾಯಿತು. ಬಾಬಣ್ಣ ಬೆಲ್ಲದ ಬೆಂಕಿಯನ್ನು ಹಿಡಿದುಕೊಂಡು ಮೆರವಣಿಗೆಯ ಮುಂಚೂಣಿಯಲ್ಲಿದ್ದರು. ಶವಯಾತ್ರೆಯು ಮುಸಲ್ಮಾನರ ಸ್ಮಶಾನವನ್ನು ಸಮೀಪಿಸುತ್ತಿದ್ದಂತೆ ದಾರಿಯಲ್ಲಿರುವ ಗಿಡಕಂಟೆಗಳ ನೆಪಮಾಡಿಕೊಂಡು ಶವಹೊತ್ತವರು ಮುಸಲ್ಮಾನರ ಸ್ಮಶಾನದೊಳಗೆ ಹೆಜ್ಜೆಹಾಕತೊಡಗಿದರು. ಮರುದಿನದ ಹಬ್ಬದ ನಿಮಿತ್ತ ಮುಸಲ್ಮಾನ ಯುವಕರು ಸ್ಮಸಾನದಲ್ಲಿದ್ದ ಝುಂಡಾ ಕಟ್ಟೆಯ ಅಲಂಕಾರದಲ್ಲಿ ತೊಡಗಿದ್ದರು. ಶವವನ್ನು ಮುಸಲ್ಮಾನರ ಸ್ಮಶಾನದಲ್ಲಿಯೇ ಇಳಿಸಿ ಸವಕ್ಕೆ ಪೂಜೆ ಸಲ್ಲಿಸಲು ಆರಂಭಿಸಲಾಯಿತು. ಇಲ್ಲಿ ಯಾಕೆ ಶವವನ್ನು ಇಳಿಸಿದ್ದೀರಿ ಎಂದು ಅಲ್ಲಿದ್ದ ಮುಸಲ್ಮಾನರು ಆಕ್ಷೇಪಿಸಿದಾಗ ಮಾತಿನ ಚಕಮಕಿ ಆರಂಭವಾಯ್ತು. ವಾಗ್ವಾದದಲ್ಲಿ ಬಾಬಣ್ಣ ಬೆಲ್ಲದ ಯಾರನ್ನೂ ಬಿಟ್ಟುಕೊಡುವ ಮಟ್ಟದಲ್ಲಿ ಇರಲಿಲ್ಲ. ಸಣ್ಣ ಸಂಖ್ಯೆಯಲ್ಲಿದ್ದ ಪೊಲೀಸರಿಂದ ಪರಿಸ್ಥಿತಿಯನ್ನು ನಿಯಂತ್ರಿಸಲು ಸಾಧ್ಯವಾಗಲಿಲ್ಲ. ಕತ್ತಲಾಗುತ್ತಿದ್ದಂತೆ ಆರಂಭವಾದ ಕಲ್ಲುತೂರಾಟದಿಂದಾಗಿ ಕ್ಷಣಾರ್ಧದಲ್ಲಿ ಅಲ್ಲೊಂದು ರಣರಂಗವೇ ನಿರ್ಮಾಣವಾಯಿತು. ಶವವನ್ನು ಅಲ್ಲಿಯೇ ಬಿಟ್ಟು ಜನರು ದಿಕ್ಕಾಪಾಲಾಗಿ ಓಡಿಹೋದರು. ಹೆಚ್ಚುವರಿ ಪೊಲೀಸ್ ಪಡೆಗಳು ಆಗಮಿಸುವ ಹೊತ್ತಿಗೆ ಬಾಬಣ್ಣ ಬೆಲ್ಲದ ಅವರ ಶವ ಪಕ್ಕದ ಶಾಲೆಯ ಮೈದಾನದಲ್ಲಿ [illegible]



ಕೊಲೆಯಾದ ಬಸವರಾಜ ಬೆಲ್ಲದ

ಅನಾಥವಾಗಿ ಬಿದ್ದಿತ್ತು. ಮುಸಲ್ಮಾನರ ಸ್ಮಶಾನದಲ್ಲಿ ಬಿದ್ದಿದ್ದ ಮಹಿಳೆಯ ಶವವನ್ನು ಪೊಲೀಸರೇ ಎತ್ತಿಕೊಂಡು ಬಂದು ಅದನ್ನು ದಹನ ಮಾಡಿದರು. ಬಾಬಣ್ಣರ ಶವವನ್ನು ಹಾವೇರಿ ಆಸ್ಪತ್ರೆಗೆ ಸಾಗಿಸಲಾಯಿತು. ಗ್ರಾಮದಲ್ಲಿ ಮರುದಿನ ರಂಜಾನ್ ಹಬ್ಬದ ಪ್ರಾರ್ಥನೆ ನಡೆಯಲಿಲ್ಲ.

ಬಾಬಣ್ಣ ಬೆಲ್ಲದ ಅವರ ಸಾವಿನಿಂದ ತಲ್ಲಣಿಸಿದ ಅಕ್ಕಿ ಆಲೂರಿನಲ್ಲಿ ಮುಂದೆ ನಾಲ್ಕೈದು ದಿನಗಳವರೆಗೆ ಮರುಕಳಿಸಿದ ಹಿಂಸಾಚಾರದಿಂದಾಗಿ ಜನರು ಮನೆಗಳನ್ನು ಬಿಟ್ಟು ಹೊರಬರಲಿಲ್ಲ. ಹಾಡು ಹಗಲಿನಲ್ಲಿ ಬಡ ಮುಸಲ್ಮಾನರ ಮನೆಗಳಿಗೆ, ಗೂಡಂಗಡಿಗಳಿಗೆ ಬೆಂಕಿಹಚ್ಚಲಾಯಿತು. ಕೃಷಿಕ ಅತಾವುಲ್ಲಾ ಎಂಬವರ ಭತ್ತದ ಬಣವೆ ಸಹ ಬೆಂಕಿಗೆ ಆಹುತಿಯಾಯಿತು. ಪೊಲಿಸರು ಸಹ ಅಲ್ಪಸಂಖ್ಯಾತ ಮುಸಲ್ಮಾನರ ಮನೆಗಳಿಗೆ ನುಗ್ಗಿ ಸಿಕ್ಕ ಸಿಕ್ಕವರನ್ನು ಬಂದಿಸುತ್ತಿದ್ದರು. ದಿನಾಲೂ ಕೂಲಿಮಾಡಿ ಜೀವನ ಸಾಗಿಸುತ್ತಿದ್ದವರು ಬಂಧನಕ್ಕೆ ಹೆದರಿ ಊರುಬಿಟ್ಟು ಓಡಿಹೋಗಿದ್ದರು. ಮನೆಗಳಲ್ಲಿದ್ದ ಹೆಂಡರು ಮಕ್ಕಳು ಕಣ್ಣೀರು ಹಾಕುತ್ತಾ ದಿನಕಳೆಯಬೇಕಾಯಿತು. ಇದುವರೆಗೆ ಸುಮಾರು 50 ಜನ ಮುಸಲ್ಮಾನರನ್ನು ಬಂದಿಸಲಾಗಿದ್ದು ಅವರಲ್ಲಿ ಹೆಚ್ಚಿನವರು ಅಮಾಯಕರು ನಿರಪರಾಧಿಗಳು ಆಗಿದ್ದಾರೆ. ಪೊಲೀಸರ ಬಿಗಿ ಬಂದೋಬಸ್ತಿನಲ್ಲಿ ಬಾಬಣ್ಣ ಬೆಲ್ಲದ ಅವರ ಶವದ ಅಂತ್ಯಕ್ರಿಯೆ ಡಿಸೆಂಬರ್ 28ರ ಸಂಜೆ ನಡೆಯಿತು. ಗ್ರಾಮದಲ್ಲಿ ಪರಿಸ್ಥತಿ ಉದ್ರಿಕ್ತವಾಗಿತ್ತು. ಅಂತ್ಯಕ್ರಿಯೆಯನ್ನು ಹಿಂದಿನ ಸಂಜೆ ಘಟನೆ ನಡೆದ ಸ್ಥಳದಲ್ಲೇ ನಡೆಸುವುದಾಗಿ ಕೆಲವರು ಹಟ ಹಿಡಿದಾಗ ಪರಿಸ್ಥಿತಿ ಮತ್ತಷ್ಟು ಪ್ರಕ್ಷುಬ್ಧವಾಯಿತು. ಆದರೆ ಸ್ಥಳದಲ್ಲಿ ಹಾಜರಿದ್ದ ಜಿಲ್ಲಾಧಿಕಾರಿಗಳು ಅದಕ್ಕೆ ಅವಕಾಶ ನೀಡಲಿಲ್ಲ. 35 ವರ್ಷದ ಬಾಬಣ್ಣ ಬೆಲ್ಲದ ಅವರ ಹತ್ಯೆಯಿಂದಾಗಿ ಆತನ ಅವಲಂಬಿತ ಕುಟುಂಬಕ್ಕೆ ಘೋರ ಅನ್ಯಾಯವಾಗಿದೆ ಎಂಬುದು ನಿಜ. ಸ್ಮಶಾನದ ದಾರಿಯ ವಿಷಯದಲ್ಲಿ ನಡೆದ ಉಪವಾಸ ಸತ್ಯಾಗ್ರಹ ಸಂಘಟಿಸಿದವರಲ್ಲಿ ಇವರೇ ಪ್ರಮುಖರಾಗಿದ್ದರು. ಮಹಿಳೆಯ ಶವವನ್ನು ಅಂದು ಮುಸಲ್ಮಾನರ ಸ್ಮಶಾನದಲ್ಲಿ ದಹನ ಮಾಡುವ ದುಸ್ಸಾಹಸಕ್ಕೆ ನೇತೃತ್ವ ಕೊಟ್ಟವರು ಇವರೇ ಆಗಿದ್ದರಿಂದ ಜನಜಂಗುಳಿಯ ಆಕ್ರೋಶ ಅವರೊಬ್ಬರ ಮೇಲೆ ಕೇಂದ್ರೀಕೃತವಾಗಿರಬಹುದು. ವಿವರವಾದ ತನಿಖೆಯಷ್ಟೇ ಈ ಘಟನೆಯ ಹಿನ್ನೆಲೆಯ ಮೇಲೆ ಬೆಳಕು ಚೆಲ್ಲಬಹುದು. ದಲಿತ ಮುಖವಾಡ [illegible]

ಮುಂದಿನ [illegible]

ದೇಶ ಪ್ರೇಮಿ ಹೋರಾಟಗಳು ಮಾತ್ರವೇ ಪರ್ಯಾಯ ರೂಪಿಸಬಲ್ಲವು

ಸೀತಾರಾಂ ಯೆಚೂರಿ

ಪ್ರಸ್ತುತ ಬಿಜೆಪಿ ನೇತೃತ್ವದ ಎನ್.ಡಿ.ಎ ಸರ್ಕಾರ ಜಾರಿ ಮಾಡುತ್ತಿರುವ ಆರ್ಥಿಕ ನೀತಿಗಳು ಸಂಪೂರ್ಣ ಅಮೇರಿಕಾದ ಮತ್ತು ಬಹುರಾಷ್ಟ್ರೀಯ ಕಂಪನಿಗಳ ಧಣಿಗಳನ್ನು ತೃಪ್ತಿಪಡಿಸುವಲ್ಲಿ ಯಶಸ್ವಿಯಾಗುತ್ತಿವೆ. ಇದರಿಂದಾಗಿ ನಮ್ಮ ದೇಶದ ಕೃಷಿ -ಕೈಗಾರಿಕಾ ರಂಗಗಳಲ್ಲಿ ಉಂಟಾಗುತ್ತಿರುವ ಬಿಕ್ಕಟ್ಟುಗಳು - ದೇಶದ ಜನತೆಯನ್ನು ಪರ್ಯಾಯ ನೀತಿಗಳಿಗಾಗಿ ಹೋರಾಟ ರೂಪಿಸಲು ಕಾರಣವಾಗುತ್ತಿವೆ. ಆದ್ದರಿಂದ ದೇಶವಿರೋಧಿ ನೀತಿಗಳ ವಿರುದ್ಧ ದೇಶದ್ಯಾಂತ ವಿವಿಧ ರಂಗಗಳ ಜನತೆ ನೆಡೆಸುವ ದೇಶಪ್ರೇಮಿ ಹೋರಾಟಗಳು ಒಂದೇ ವೇದಿಕೆಯಲ್ಲಿ ಒಗ್ಗೂಡಿದಾಗ ಮಾತ್ರವೇ ಒಂದು ಪರ್ಯಾಯ ರಾಜಕೀಯ ರೂಪಗೊಳ್ಳಲು ಸಾಧ್ಯ. ಎಂದು ಸಿಪಿಐ(ಎಂ) ಪಕ್ಷದ ಪಾಲಿಟ್ ಬ್ಯೂರೋ ಸದಸ್ಯ ಸೀತಾರಾಂ ಯೆಚೂರಿ ಅಭಿಪ್ರಾಯ ಪಟ್ಟರು.

ಮೈಸೂರಿನ ಮಹಾರಾಜ ಶತಮಾನೋತ್ಸವ ಭವನದಲ್ಲಿ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್‌ಎಫ್‌ಐ) ಹಾಗೂ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್(ಡಿವೈಎಫ್‌ಐ) ರಾಜ್ಯ ಸಮಿತಿಗಳು ಜಂಟಿಯಾಗಿ ಸಂಘಟಿಸಿದ್ದ "ಭಾರತದ ಪ್ರಸ್ತುತ ಪರಿಸ್ಥಿತಿ ಮತ್ತು ಪರ್ಯಾಯ" ಕುರಿತ ವಿಚಾರ ಸಂಕಿರಣದಲ್ಲಿ ಅವರು ಮಾತನಾಡುತ್ತಿದ್ದರು.

ಇದುವರೆಗೂ ದೇಶವನ್ನಾಳಿದ ಸರ್ಕಾರಗಳು - ಲೆಕ್ಕ ಪರಿಶೋಧನೆ ಇಲಾಖೆಯ ಪ್ರಕಾರ 16 ಲಕ್ಷ ಕೋಟಿ ಹೊರದೇಶಗಳಿಂದ ಸಾಲ ಮಾಡಿದೆ. ಈ ಸಾಲಕ್ಕೆ 1 ಲಕ್ಷ ಕೋಟಿ ಬಡ್ಡಿಯನ್ನು ಕಟ್ಟಲಾಗುತ್ತಿದೆ. ಈ ಬಡ್ಡಿಯನ್ನು ಕಡಿಮೆ ಮಾಡಿದರೆ ಖೋತಾ ಬಜೆಟ್ ಮಂಡನೆ ಮಾಡುವ ಪರಿಸ್ಥಿತಿ ಉಂಟಾಗುವುದಿಲ್ಲ. ಆದರೆ ಕೇಂದ್ರ ಸರ್ಕಾರ ಗುಜರಾತಿನಲ್ಲಿ ಸಂಭವಿಸಿರುವ ಭೂಕಂಪವನ್ನು ನೆಪಮಾಡಿಕೊಂಡು ಬಡಜನರ ಮೇಲೆ ಅಧಿಕ ತೆರಿಗೆ ಹಾಕಲು ಉದ್ದೇಶಿಸಿರುವುದು ಜನವಿರೋಧಿಯಾಗಿದೆ. ಈ ಭೂಕಂಪನದಿಂದ ಆದ ನಷ್ಟವೇ ಸರ್ಕಾರದ ಪ್ರಕಾರ 20 ಸಾವಿರ ಕೋಟಿ ರೂಪಾಯಿಗಳು ಈ ಹಣವನ್ನು ಸರಿದೂಗಿಸಲು ಜನಸಾಮಾನ್ಯರ ಮೇಲೆ ತೆರಿಗೆ ಹಾಕುವ ಬದಲಿಗೆ ಬೃಹತ್ ಉದ್ದಿಮೆದಾರರು ಬ್ಯಾಂಕಿಗೆ ಪಾವತಿಸಬೇಕಾಗಿರುವ 79 ಸಾವಿರ ಕೋಟಿ ಮತು ಬಾಕಿ ಇರುವ 62 ಸಾವಿರ ಕೋಟಿಯನ್ನು ಕಠಿಣ ಕ್ರಮದ ಮೂಲಕ ಸಂಗ್ರಹಿಸಬೇಕು. ಹೀಗೆ ಸಂಗ್ರಹಿಸಿದರೆ ತೆರಿಗೆಯನ್ನು ಹೇರುವ ಪ್ರಮೆಯವೇ ಬರುವುದಿಲ್ಲ ಎಂದರು.

ಆದರೆ ಸರ್ಕಾರ ಕಠಿಣ ಕ್ರಮಗಳನ್ನು ಕೈಗೊಳ್ಳಲು ಮುಂದಾಗದೆ ದೇಶದಲ್ಲಿ ಬಂಡವಾಳದ ಕೊರತೆ ಇದೆ ಎಂದು ಹೇಳುತ್ತ ಬಹುರಾಷ್ಟ್ರೀಯ ಕಂಪನಿಗಳು ದೇಶದಲ್ಲಿ ಉತ್ಪಾದನೆ ಮಾಡಲು ಅವಕಾಶ ನೀಡಲಾಗುತ್ತಿದೆ. ದೇಶದ ಪ್ರಮುಖ ರಂಗಗಳಲ್ಲಿ ಈ ಬಹುರಾಷ್ಟ್ರೀಯ ಕಂಪನಿಗಳು ನುಸುಳುತ್ತಿವೆ. ಪರಿಣಾಮವಾಗಿ ದೇಶದ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ತೀವ್ರ ಹಿನ್ನಡೆ ಉಂಟಾಗುತ್ತಿದೆ. ಸರ್ಕಾರವೇ ಅಭಿವೃದ್ಧಿ ಕೆಲಸಗಳಿಗೆ ಹೆಚ್ಚಿನ ಹಣವನ್ನು ಹೂಡಿದರೆ ಜನರ ಆರ್ಥಿಕ ಪರಿಸ್ಥಿತಿ ಸುಧಾರಿಸುತ್ತದೆ ಆಗ ಸಹಜವಾಗಿಯೇ ಕೊಳ್ಳುವ ಸಾಮರ್ಥ್ಯವು ಹೆಚ್ಚಾಗಿ ಕೈಗಾರಿಕೆಗಳ ನಾಶವನ್ನು ತಡೆಗಟ್ಟಬಹುದು.

ಸರ್ಕಾರದ ಪ್ರಸ್ತುತ ನೀತಿಗಳ ಪರಿಣಾಮವಾಗಿ ಬಡಜನರಲ್ಲಿ ಕೊಳ್ಳುವ ಶಕ್ತಿ ಕಡಿಮೆಯಾಗಿರುವುದರಿಂದ ರಾಷ್ಟ್ರೀಯ ಜವಳಿ ನಿಗಮದ 180 ಕೈಗಾರಿಕೆಗಳಲ್ಲಿ 80 ಕೈಗಾರಿಕೆಗಳು ಮುಚ್ಚಿವೆ. ಇವು ಉತ್ಪಾದಿಸುವ ಬಟ್ಟೆ ಬಡವನಿಗೆ ಬೇಕು. ಆದರೆ ಅವರಲ್ಲಿ ಕೊಳ್ಳುವ ಶಕ್ತಿ ಇಲ್ಲ. ಶ್ರೀಮಂತರಿಗೆ ಈ ಬಟ್ಟೆಗಳು ಒಗ್ಗುವುದಿಲ್ಲ ಈ ಸತ್ಯವನ್ನು ಸರ್ಕಾರಗಳು ಅರಿತು ಅಭಿವೃದ್ಧಿ ಕ್ಷೇತ್ರಕ್ಕೆ ಹೆಚ್ಚಿನ ಬಂಡವಾಳ ಹೂಡಬೇಕಿದೆ ಎಂದರು.

ಪ್ರಸ್ತುತ ಕೃಷಿ ರಂಗ ಎದುರಿಸುತ್ತಿರುವ ಬಿಕ್ಕಟ್ಟು ಕುರಿತು ವಿಶ್ಲೇಷಿಸಿದ ಯೆಚೂರಿ, ಬಿಜೆಪಿ ನೇತೃತ್ವದ ಎನ್.ಡಿ.ಎ. ಸರ್ಕಾರ ರೈತರ ಹಿತ ಕಾಯುವಲ್ಲಿ ಸಂಪೂರ್ಣ ವಿಫಲವಾಗಿದೆ. ಇತ್ತೀಚಿಗೆ ಜಪಾನ್ ದೇಶವು ಅಮೇರಿಕ ಸೇರಿದಂತೆ ಇತರೆ ಯೂರೋಪ್ ರಾಷ್ಟ್ರಗಳ ಒತ್ತಡವನ್ನು ಧಿಕ್ಕರಿಸಿ ತನ್ನ ದೇಶಕ್ಕೆ ವಿದೇಶಗಳಿಂದ ಬರುವ ಅಕ್ಕಿಯನ್ನು ನಿಲ್ಲಿಸಿ ಶೇ. 2000ದಷ್ಟು ಸುಂಕ ವಿಧಿಸಿ ನಿರ್ಬಂಧ ಹೇರಿದೆ. ಆ ಮೂಲಕ ತನ್ನ ದೇಶದ ರೈತರ ಹಿತ ಕಾಪಾಡಿತು. ಆದರೆ ಭಾರತ ಸರ್ಕಾರ ತದ್ವಿರುದ್ಧವಾಗಿ ಅಮೇರಿಕನ್ ಪ್ರಭುಗಳಿಗೆ ಮತ್ತು ಅವರ ಹಿಡಿತದಲ್ಲಿರುವ ವಿಶ್ವವ್ಯಾಪಾರ ಸಂಘಟನೆ (WTO) ಗಳಿಗೆ ರೆತರ ಹಿತವನು ಬಲಿ ನೀಡಿದೆ.



'ಭಾರತದ ಪರಿಸ್ಥಿತಿ ಮತ್ತು ಪರ್ಯಾಯ' ಮೈಸೂರಿನ ವಿಚಾರಸಂಕಿರಣದಲ್ಲಿ ಯೆಚೂರಿ ಮಾತನಾಡುತ್ತಿರುವುದು

ರಾಜಕೀಯ ಲಾಭಕ್ಕಾಗಿ, ಚುನಾವಣೆಯ ಸಂದರ್ಭದಲ್ಲಿ ಹಿಂದುತ್ವವನ್ನು ಸೃಷ್ಟಿಸುವ ಸಂಘ ಪರಿವಾರದವರು. ಆ ಮೂಲಕ ದೇಶದ ಆರ್ಥಿಕ ಪರಿಸ್ಥಿತಿ ಮತ್ತು ಹದಗೆಡುತ್ತಿರುವ ಒಟ್ಟಾರೆ ಪರಿಸ್ಥಿತಿ ಪರಿಹಾರಕ್ಕಾಗಿ ಚಕಾರ ಎತ್ತುವುದಿಲ್ಲ ಇತ್ತೀಚಿಗೆ ಮುಕ್ತಾಯಗೊಂಡ 'ಪೂರ್ಣಕುಂಭಮೇಳದಲ್ಲಿ' ಸಾಧು ಸಂತರು 2002 ಇಸ್ವಿ ವೇಳೆಗೆ ರಾಮಮಂದಿರ ನಿರ್ಮಾಣ, ಘೋಷಣೆಯು ಆ ಸಂದರ್ಭದಲ್ಲಿ ನೆಡೆಯುವ ಉತ್ತರ ಪ್ರದೇಶ ರಾಜ್ಯದ ಚುನಾವಣೆ ಮೇಲೆ ಗಮನವಿಟ್ಟು ಅನುಸರಿಸಿರುವ ಕೋಮುವಾದಿ ತಂತ್ರವಾಗಿದೆ. ಎಂದರು.

ವಿಚಾರ ಸಂಕಿರಣದಲ್ಲಿ ಕರ್ನಾಟಕ ರಾಜ್ಯ ರೈತ ಸಂಘದ ಅಧ್ಯಕ್ಷರಾದ ಕೆ.ಎಸ್.ಪುಟ್ಟಣ್ಣಯ್ಯ ಪಾಲ್ಗೊಂಡು ಮಾತನಾಡುತ್ತ ಸಾಲ ತೀರಿಸಲಾಗದ ರೈತರ ಜಮೀನನ್ನು ಸಂಬಂಧಪಟ್ಟ ಹಣಕಾಸು ಸಂಸ್ಥೆ ಹಕ್ಕುದಾರರನ್ನು ಕೇಳದೆಯೆ, ಸಾಲದ ಮೌಲ್ಯಕ್ಕೆ ತಕ್ಕಂತೆ ಜಮೀನನ್ನು ತನ್ನ ಸ್ವಂತ ಮಾಡಿಕೊಳ್ಳುವ ಬ್ರಿಟಿಷರ ಕಾಲದ ಕಾನೂನನ್ನು ಸರ್ಕಾರಗಳು ಬಹುರಾಷ್ಟ್ರೀಯ ಕಂಪನಿಗಳ ತಾಳಕ್ಕೆ ತಕ್ಕಂತೆ ಕುಣಿದು ಜಾರಿಗೊಳಿಸಲೊರಟಿವೆ. ಸಾಲ, ಬೆಳೆನಾಶ, ಬೆಂಬಲ ಬೆಲೆ ಇಲ್ಲದೆ ಸಾಯುತ್ತಿರುವ ರೈತನನ್ನು 'ಆತ್ಮಹತ್ಯೆ' ಎಂದು ಪ್ರಚಾರ ನಡೆಸುತ್ತಿರುವ ಕ್ರಮವನ್ನು ತೀವ್ರವಾಗಿ ವಿರೋಧಿಸಿದ ಅವರು ಇದೊಂದು ಸರ್ಕಾರಗಳೇ ಪೂರ್ವಯೋಜಿತ ಆಯೋಜಿಸಿರುವ 'ಕೊಲೆಗಳೆ' ಹೊರತು ಮತ್ತೇನಲ್ಲ. ಇಂತಹ ಕೊಲೆಗಳಿಗೆ ಸಿಆರ್‌ಪಿಸಿ ಯಲ್ಲಿ ಶಿಕ್ಷೆಗೆ ಅವಕಾಶವಿಲ್ಲವೆಂದಾದರೆ ಮಾನವೀಯತೆಯ ನ್ಯಾಯದಲ್ಲಿ ಅಂತಹ ಅಪರಾಧಿಗಳಿಗೆ ನೇಣುಹಾಕಬೇಕೆಂದರು.

ಎಲ್ಲಾ ಕೆಟ್ಟವರು ಒಂದಾಗುತ್ತಿರುವ ಸಂದರ್ಭದಲ್ಲಿ, ಅದರ ವಿರುದ್ಧ ಎಲ್ಲಾ ದೇಶಪ್ರೇಮಿ ಜನರು ಒಗ್ಗೂಡಿ, ದೇಶ ರಕ್ಷಣೆಗಾಗಿ ಎರಡನೆ ಸ್ವಾತಂತ್ರ್ಯ ಸಂಗ್ರಾಮವನ್ನು ಸಿದ್ದಗೊಳ್ಳಬೇಕಾಗಿದೆ ಎಂದರು.

ಜನತಾದಳ (ಎಸ್)ನ ರಾಜ್ಯ ಮಹಾ ಪ್ರಧಾನಕಾರ್ಯದರ್ಶಿ ಮತ್ತು ಮಾಜಿ ಸಂಸತ್ ಸದಸ್ಯ ಸಿ. ನಾರಾಯಣಸ್ವಾಮಿ, ಸಿಪಿಐ(ಎಂ) ರಾಜ್ಯ ಕರ್ಯದರ್ಶಿ ಎಸ್. ಸೂರ್ಯನಾರಾಯಣರಾವ್ ಮಾತನಾಡಿದರು. ಮಾಜಿ ಶಾಸಕರಾದ ಜಿ.ವಿ. ಶ್ರೀರಾಮರೆಡ್ಡಿ ಉಪಸ್ಥಿತರಿದ್ದ ಈ ವಿಚಾರ ಸಂಕಿರಣದ ಅಧ್ಯಕ್ಷತೆಯನ್ನು ಡಿವೈಎಫ್‌ಐ ರಾಜ್ಯ ಅಧ್ಯಕ್ಷರಾದ ಶಾಂತಾರಾಂ ಎಸ್. ನಾಯಕ್ ವಹಿಸಿದ್ದರು. ಪ್ರಸ್ತಾವನೆಯನ್ನು ಎಸ್.ಎಫ್.ಐ ರಾಜ್ಯಾದ್ಯಕ್ಷ ಕೆ.ಎನ್. ಉಮೇಶ್ ಮಾಡಿದರೆ "ವಿದ್ಯಾರ್ಥಿ ಯುವಜನರ ರಾಜ್ಯ ಮಟ್ಟದ ಅಧ್ಯಯನ ಶಿಬಿರದ ಸ್ವಾಗತ ಸಮಿತಿ" ಅಧ್ಯಕ್ಷರಾದ ಸಾಹಿತಿ ಲಿಂಗದೇವರು ಹಳೆ ಮನೆ. ಎಲ್ಲರನ್ನು ಸ್ವಾಗತಿಸಿದರು. ಡಿವೈಎಫ್‌ಐ ಮೈಸೂರು ಜಿಲ್ಲಾ ಕಾರ್ಯದರ್ಶಿ ಎಸ್. ದೇವರಾಜ್ ವಂದಿಸಿದರು.

"ಸ್ವದೇಶಿ ಎಂಬುದು ಬಹುಮುಖಿ ಕಲ್ಪನೆ"

ಜಾಗತೀಕರಣದ ಹೆಸರಲ್ಲಿ ಬಂಡವಾಳಶಾಹಿಗಳಿಂದ ಬರೀ ಆರ್ಥಿಕ ಅಕ್ರಂಧನ ಉಂಟಾಗುತ್ತದೆ ಎಂದು ಭಾವಿಸಲಾಗಿತ್ತು. ಆದರೆ ಅದು ಬರ-ಬರುತ್ತಾ ತನ್ನ ಕಬಂಧ ಬಾಹುಗಳಿಂದ ಎಲ್ಲಾ ಕ್ಷೇತ್ರವನ್ನು ನುಂಗಿ ಹಾಕಿ ದೇಶವನ್ನು ಅಧೋಗತಿಗೆ ದೂಡುತ್ತಿದೆ. ಮತ್ತೊಂದೆಡೆ 'ಸ್ವದೇಶಿ' ಪರಿಕಲ್ಪನೆಯನ್ನು ಹೇರಲಾಗುತ್ತಿದೆ. ಆದರೆ ಸ್ವದೇಶಿ ಎಂಬುದು ಏಕಮುಖಿಯಲ್ಲ, ಅದು ಬಹುಮುಖಿ ಕಲ್ಪನೆ ಬಂಡವಾಳ ಶಾಹಿಯ ಬಹುಮುಖಿ ಸಂಸ್ಕೃತಿ ಈ ದೇಶಕ್ಕೆ ಒಗ್ಗುವಂತದ್ದಲ್ಲ. ಸ್ವದೇಶಿ ಹೆಸರಲ್ಲಿ ಅಧಿಕಾರವನ್ನು ಹಿಡಿದು ಉದಾರೀಕರಣ ಜಾಗತೀಕರಣ ಹಾಗೂ ಖಾಸಗೀಕರಣ ನೀತಿಯನ್ನು ಜಾರಿಗೊಳಿಸುತ್ತಿರುವುದು ದೇಶದ ಮೇಲೆ ಅಗಾಧ ದುಷ್ಪರಿಣಾಮ ಬೀರುತ್ತಿದೆ. ಇದಕ್ಕೆ ಪರ್ಯಾಯವನ್ನು ಕಂಡುಕೊಳ್ಳುವುದು ಇಂದಿನ ಅನಿವಾರ್ಯವಾಗಿದೆ. ಈ ಬಗ್ಗೆ ಜನಾಂಗ ಚಿಂತಿಸಬೇಕು.

ಪ್ರೊ। ಲಿಂಗದೇವರು ಹಳೆಮನೆ 'ಪ್ರಸ್ತುತ ಪರಿಸ್ಥಿತಿ ಮತ್ತು ಪರ್ಯಾಯ ಕುರಿತು ವಿಚಾರ ಸಂಕಿರಣದಲ್ಲಿ ವೇಲ್ಕಡಂತೆ ಸ್ವಾಗತ ನೀಡಿದ್ದು ನಿಜಕ್ಕೂ ಅರ್ಥಪೂರ್ಣವಾಗಿತ್ತು.

ವರದಿ: **ಕೆ.ಮಹಾಂತೇಶ್**

ಅಕ್ಕಿ ಆಲೂರು ಘಟನೆ......

ಧರಿಸಿಕೊಂಡು ಅಕ್ಕಿ ಆಲೂರಿನಲ್ಲಿ ಕೋಮುದ್ವೇಷ ಸಾಧಿಸಲು ಹೊಂಚು ಹಾಕಿಕೊಂಡಿದ್ದ ಶಕ್ತಿಗಳ ಕಾರಸ್ಥಾನಕ್ಕೆ ಬಾಬಣ್ಣ ಬಲಿಯಾಗಿದ್ದಾರೆ ಎನ್ನುವುದರಲ್ಲಿ ಸಂಶಯವಿಲ್ಲ.

ಕಳಚಿ ಬಿದ್ದ ಮುಖವಾಡ :

ಅನಂತರದ ಬೆಳವಣಿಗೆಗಳು ಸಹ ಕೋಮುವಾದಿ ಶಕ್ತಿಗಳ ಪಾತ್ರವನ್ನು ಇನ್ನಷ್ಟು ಸ್ಪಷ್ಟಪಡಿಸಿವೆ. ಅಕ್ಕಿ ಆಲೂರಿನಲ್ಲಿ ಮುಸಲ್ಮಾನರಿಂದ ದಲಿತರ ಮೇಲೆ ದೌರ್ಜನ್ಯ ನಡೆದಿದೆ ಎಂದು ಪ್ರಚಾರಗಿಟ್ಟಿಸಲಾದರೂ, ಕೆಲವೊಂದು ಪತ್ರಿಕೆಗಳಲ್ಲಿ ಬಾಬಣ್ಣ ಬೆಲ್ಲದ ದಲಿತ ಸಮಾಜಕ್ಕೆ ಸೇರಿದವನೆಂದು ನಂಬಿಸುವ ಪ್ರಯತ್ನ ನಡೆಸಿದರೂ ಸಂಘ ಪರಿವಾರದವರಿಗೆ ದಲಿತರ ಬಗ್ಗೆ ಇಷ್ಟೊಂದು ಪ್ರೀತಿ ಅದೆಲ್ಲಿಂದ ಉಕ್ಕಿ ಬಂತು ಎಂದು ಜನ ಪ್ರಶ್ನಿಸಲಾರಂಭಿಸಿದ್ದಾರೆ. ಘಟನೆಯ ಸುದ್ದಿ ಕೇಳಿ ಅಕ್ಕಿ ಆಲೂರಿಗೆ ಯಾವ ದಲಿತ ಮುಖಂಡರಾಗಲಿ, ದಲಿತ ಸಂಘಟನೆಯವರಾಗಲಿ ಬೇಟಿಕೊಡಲಿಲ್ಲ. ಬಾಬಣ್ಣನ ಅಂತ್ಯಸಂಸ್ಕಾರಕ್ಕೆಂದು ಇಪ್ಪತ್ತು ಇಪ್ಪತ್ತೈದು ವಾಹನಗಳಲ್ಲಿ ಧಾವಿಸಿಬಂದವರು ಹುಬ್ಬಳ್ಳಿಯ ಭಜರಂಗ ದಳದವರು ಹಾವೇರಿ ಜಿಲ್ಲೆಗೆ ಮುಸಲ್ಮಾನರೊಬ್ಬರು ಪೊಲೀಸ್ ವರಿಷ್ಠಾಧಿಕಾರಿಯಾಗಿ ಬಂದ ನಂತರ ಜಿಲ್ಲೆಯಲ್ಲಿ ಕೋಮು ಗಲಭೆಗಳು ಹೆಚ್ಚಿವೆಯಾದ್ದರಿಂದ ಎಸ್ಪಿ ಎಂ.ಎಫ್ ಪಾಶಾರನ್ನು ಸೇವೆಯಿಂದ ಅಮಾನತ್ತುಗೊಳಿಸಬೇಕೆಂದು ಅಕ್ಕಿ ಆಲೂರಿಗೆ ಬೇಟಿಕೊಟ್ಟಾಗ ಬೇಜವಾಬ್ದಾರಿಯುತ ಹೇಳಿಕೆ ಕೊಟ್ಟವರು ವಿಧಾನಸಭೆಯಲ್ಲಿನ ಬಿಜೆಪಿ ನಾಯಕ ಜಗದೀಶ್ ಶೆಟ್ಟರ್, ಬೆಲ್ಲದ ಅವರ ಕುಟುಂಬದವರಿಗೆ ಸಾಂತ್ವಾನ ಹೇಳಿ ಅನಂತರ ಪತ್ರಿಕಾಗೋಷ್ಠಿಯಲ್ಲಿ ಬೆಲ್ಲದವರ ಕುಟುಂಬದ ಒಬ್ಬರಿಗೆ ತಮ್ಮ ಸಂಸ್ಥೆಯಲ್ಲಿ ಕೆಲಸ ನೀಡುವುದಾಗಿ ಭರವಸೆ ನೀಡಿದವರು ಬಿಜೆಪಿ ಸಂಸದ ವಿಜಯ ಸಂಕೇಶ್ವರ ಅಕ್ಕಿಆಲೂರು ಘಟನೆಯಲ್ಲಿ ಪ್ರಮುಖ ಆರೋಪಿಗಳನ್ನು ಬಂಧಿಸಲು ಹಿಂದೇಟು ಹಾಕುತ್ತಿರುವ ಜಿಲ್ಲಾ ಎಸ್ಪಿ ಪಾಶಾರನ್ನು ಬಂಧಿಸಬೇಕೆಂದು ಒತ್ತಾಯಿಸಿ ಹಾವೇರಿಯಲ್ಲಿ ಮೆರವಣಿಗೆ ನಡೆಸಿದವರು ಬಿಜೆಪಿ ಹಾಗೂ ಹಿಂದೂ ಜಾಗರಣ ವೇದಿಕೆಯವರು ಇದೇ ಸಂದರ್ಭದಲ್ಲಿ ರಾಣೆಬೆನ್ನೂರಿನಲ್ಲಿ ಏಕಾಏಕಿಯಾಗಿ ಭಜರಂಗದಳದ ಜಿಲ್ಲಾ ಸಮಾವೇಶವನ್ನು ಏರ್ಪಡಿಸಿ, ಸಮಾವೇಶದಲ್ಲಿ ಅಕ್ಕಿ ಆಲೂರು ಘಟನೆಯನ್ನು ಪ್ರಸ್ತಾಪಿಸಿ, ಮುಸಲ್ಮಾನರ ವಿರುದ್ಧ ಪ್ರಚೋದನಾಕಾರಿ ಭಾಷಣವನ್ನು ಮಾಡಿ, ರಾಣೇಬೆನ್ನೂರಿನಲ್ಲಿಯೂ ಹಿಂಸಾಚಾರ ಮರುಕಳಿಸಲು ಕಾರಣರಾದವರು ಭಜರಂಗದಳದ ರಾಜ್ಯ ಸಂಚಾಲಕ ಪ್ರಮೋದ್ ಮುತಾಲಿಕ್! ಬಿಜೆಪಿ ಯೂ ಸೇರಿದಂತೆ ಸಂಘಪರಿವಾರದ ಎಲ್ಲಾ ಸಂಘಟನೆಗಳು ಅಕ್ಕಿ ಆಲೂರು ಘಟನೆಯ ಬಗ್ಗೆ ಇಷ್ಟೊಂದು ಆಸಕ್ತಿ ತೋರಿರುವುದು ಸಹಜವಾಗಿ ಅನೇಕ ಸಂದೇಹಗಳಿಗೆ ಕಾರಣವಾಗಿದೆ. ದಲಿತರ ಮೇಲೆ ಮೇಲ್ಜಾತಿ ಹಿಂದುಗಳಿಂದ ರಾಜ್ಯದ ಹಲವೆಡೆ ದಾಳಿ ದೌರ್ಜನ್ಯಗಳು ನಡೆದಾಗ ಸಂಘಪರಿವಾರದವರು ದಾಳಿಗೊಳಗಾದ ದಲಿತರ ಪರವಾಗಿ ಧಾವಿಸಿದ ಒಂದೂ ಉದಾಹರಣೆ ಇಲ್ಲ. ದಲಿತರಿಗೆ ಮಲ ತಿನ್ನಿಸಿದ್ದಾರೆ, ದಲಿತರನ್ನು ಕೊಚ್ಚಿಹಾಕಿದ್ದಾರೆ, ಅವರ ಗುಡಿಸಲುಗಳಿಗೆ ಬೆಂಕಿ ಹಚ್ಚಿದ್ದಾರೆ, ಅವರ ಮಹಿಳೆಯರ ಮೇಲೆ ಅತ್ಯಾಚಾರ ಮಾಡಿದ್ದಾರೆ, ಇಂತಹ ಯಾವ ಒಂದು ಪ್ರಕರಣವನ್ನು ಸಂಘ ಪರಿವಾರದವರು ಖಂಡಿಸಿ, ತಪ್ಪಿತಸ್ಥರ ವಿರುದ್ಧ ಕ್ರಮ ಜರಗಿಸುವಂತೆ ಈ ರೀತಿಯಲ್ಲಿ ಬೆನ್ನು ಹತ್ತಿದ ಉದಾಹರಣೆ ಇಲ್ಲ. ಅಕ್ಕಿ ಆಲೂರಿನಲ್ಲಿ ದಲಿತರ ಪರವಾಗಿ ಇವರು ಕೂಗಾಡುತ್ತಿರುವುದು ಕೇವಲ ಒಂದು ನಾಟಕ ಅದರ ಅಂತರಾಳದಲ್ಲಿ ಇರುವುದು ಅಲ್ಪಸಂಖ್ಯಾತ ಮುಸಲ್ಮಾನರ ವಿರುದ್ಧದ ದ್ವೇಷ. ಇವರೇ ಹುಟ್ಟುಹಾಕಿದ ಕೋಮು ದಳ್ಳುರಿಗೆ ಇವರ ಕಾರ್ಯಕರ್ತನೊಬ್ಬ ಬಲಿಯಾಗಿದ್ದಾನೆ. ಇದರಿಂದ ಇವರು ಪಾಠ ಕಲಿತರೆ ಒಳ್ಳೆಯದು. ಗಲಭೆಯಲ್ಲಿ ಯಾರು ಬಾಬಣ್ಣನನ್ನು ಹೊಡೆದು ಕೊಂದರು ಎನ್ನುವುದು ತನಿಕೆಯಿಂದ ಗೊತ್ತಾಗಬಹುದು. ನಿಜವಾದ ತಪ್ಪಿತಸ್ಥನಿಗೆ ಶಿಕ್ಷೆಯಾಗಬೇಕು. ಅದೇ ರೀತಿಯಲ್ಲಿ ಮುಸಲ್ಮಾನರ ಮನೆಗಳಿಗೆ ಅಂಗಡಿಗಳಿಗೆ ಬೆಂಕಿ ಹಚ್ಚಿದವರನ್ನೂ ಬಂಧಿಸಿ ಕಾನೂನು ಕ್ರಮ ಜರಗಿಸಬೇಕು. ಬಂಧಿತ ಅಮಾಯಕರ ಶೀಘ್ರಬಿಡುಗಡೆ ಆಗಬೇಕು. ಆಸ್ತಿಪಾಸ್ತಿ ಹಾನಿಯಾದವರಿಗೆ ಯೋಗ್ಯ ಪರಿಹಾರ ದೊರಕಬೇಕು. ಅಕ್ಕಿಆಲೂರಿನಲ್ಲಿ ಕೋಮು ದ್ವೇಷ ಬೆಳೆಸುತ್ತಿರುವ ಶಕ್ತಿಗಳ ಮೇಲೆ ಕಣ್ಣಿಟ್ಟು ಅವರ ಚಟುವಟಿಕೆಗಳನ್ನು ದೃಢವಾಗಿ ಹತ್ತಿಕ್ಕಬೇಕು. ಜನತೆ ಅಂತವರನ್ನು ಬಹಿಷ್ಕರಿಸಬೇಕು.

ಮಾನವ ಹಕ್ಕುಗಳ ರಕ್ಷಣೆಗೆ ವಿಶ್ವದ ನ್ಯಾಯವಾದಿಗಳು

ಅದೊಂದು ಮರೆಯಲಾಗದ ಘಟನೆ....

ಅಂತರಾಷ್ಟ್ರೀಯ ಪ್ರಜಾಸತ್ತಾತ್ಮಕ ವಕೀಲರ ಸಂಘದ (IADL) 15ನೇ ಮಹಾಧಿವೇಶನ ಮತ್ತು ಅಮೇರಿಕಾದ ನ್ಯಾಯಮಂಡಿತರ 12ನೇ ಸಮ್ಮೇಳನವು ಒಂದು ವೇದಿಕೆಯಲ್ಲಿಯೇ ನಡೆದಿದ್ದು ಅದು ಅಮೇರಿಕದಿಂದ ಕೇಲವೇ ಮೈಲಿ ದೂರದಲ್ಲಿರುವ ನೆರೆಯ ಕ್ಯೂಬಾದ ಹವಾನದಲ್ಲಿ!

"ಅಂತರರಾಷ್ಟ್ರೀಯ ನ್ಯಾಯ ಸಮ್ಮತ್ರವಾದ ನ್ಯಾಯಿಕ ಕ್ರಮ" ಸ್ಥಾಪನೆಯ ಉದ್ದೇಶವನ್ನು ಹೊಂದಿ ಈ ಮಹಾಧಿವೇಶನವನ್ನು ಸಂಘಟಿಸಲಾಗಿತ್ತು. ಜಗತ್ತಿನೆಲ್ಲೆಡೆ ಅಮೇರಿಕಾದ ಹಿಡಿತ ಬಿಗಿಗೊಳ್ಳುತ್ತಿರುವ ಸಮಯದಲ್ಲಿ ಜಗತ್ತಿನ ಎಲ್ಲಾ ಜನಾಂಗದ ಪ್ರತಿನಿಧಿಗಳು ಈ ಅಧಿವೇಶನದಲ್ಲಿ ಭಾಗ ವಹಿಸಿದ್ದ ಅರ್ಥಪೂರ್ಣ ವಾಗಿತ್ತು. 1945ರಲ್ಲಿ ಎರಡನೆ ಮಹಾಯುದ್ಧದ ತರುವಾಯ ಸ್ಥಾಪನೆಗೊಂಡ ವಿಶ್ವಸಂಸ್ಥೆ ಮತ್ತು ಅದು ಅಂಗೀಕರಿಸಿದ ಮಹತ್ವದ ಘೋಷಣೆಗಳು ಮುಖ್ಯವಾಗಿ ಮಾನವ ಹಕ್ಕುಗಳಿಗೆ ಸಂಬಂದಿಸಿದಂತೆ ವಿಷಯುಗಳು ಜಾಗತೀಕ ಮಟ್ಟದಲ್ಲಿ ನ್ಯಾಯ ಪಂಡಿತರು ಒಟ್ಟಿಗೆ ಸೇರುವ ಪರಿಸ್ಥಿತಿ ನಿರ್ಮಿಸಿತ್ತು.

1946ರಲ್ಲಿ ಪ್ಯಾರಿಸ್‌ನಲ್ಲಿ ವಿವಿಧ ದೇಶಗಳ ವಕೀಲರುಗಳು ಸಭೆ ಸೇರಿ, ಈ ಜಗತ್ತನ್ನು ಜನಾಂಗೀಯ ಬೇರು, ವಸಹತುಶಾಹಿವಾದ ಮತ್ತು ಆರ್ಥಿಕ, ರಾಜಕೀಯ ಅನ್ಯಾಯ ಮತ್ತು ಮಾನವ ಹಕ್ಕುಗಳ ಮೇಲೆ ನೆಡೆಯುತ್ತಿರುವ ಧಾಳಿಗಳಿಂದ ಸರ್ವನಾಶವಾಗುವುದನ್ನು ತಪ್ಪಿಸಿ ರಕ್ಷಿಸುವ ಐತಿಹಾಸಿಕ ನಿರ್ಣಯವನ್ನು ಕೈಗೊಂಡರು. ಇದೇ ಸಂದರ್ಭದಲ್ಲಿಯೇ ಅಂತರಾಷ್ಟ್ರೀಯ ಪ್ರಜಾಸತ್ತಾತ್ಮಕ ವಕೀಲರ ಸಂಘ (IADL) ರಚನೆಗೊಂಡು ಮಾನವ ಹಕ್ಕುಗಳು ಕುರಿತು ಸರ್ವಕಾಲಿಕ ಘೋಷಣೆಯನ್ನು ಬರೆದವರಲ್ಲೊಬ್ಬರಾದ ರೆನ್‌ಕಾಸಿನ್ ಪ್ರಥಮ ಅಧ್ಯಕ್ಷರಾಗಿ ಆಯ್ಕೆಯಾದರು. ನಂತರದಲ್ಲಿ ಪ್ರಖ್ಯಾತ ಮಾನವ ಹಕ್ಕುಗಳ ಹೋರಾಟಗಾರ ಡಿ.ಎನ್.ಪ್ರಿಟ್ಟಿ ಕ್ಯೂ.ಸಿ. ಆ ಸ್ಥಾನವನ್ನು ಅಲಂಕರಿಸಿದರು.

1959ರ ಕ್ರಾಂತಿಯ ಮೂಲಕ ತನ್ನ ಕ್ರಾಂತಿಕಾರಿ ಯುಗಾರಂಭಮಾಡಿದ ಕ್ಯೂಬ ಸಾಮ್ರಾಜ್ಯಶಾಹಿ ಕೈಗೊಂಬೆ, ಬಾಟಿಸ್ಟರ ದಬ್ಬಾಳಿಕೆಯನ್ನು ಎದುರಿಸಿ ಜಾಗತಿಕ ಇತಿಹಾಸದಲ್ಲೇ ಒಂದು ಹೊಸ ಅಧ್ಯಾಯವನ್ನು ಪ್ರಾರಂಭಿಸಿತು. ಕ್ರಾಂತಿಯ ಯಶಸ್ಸನ್ನು ಕಾಯ್ದುಕೊಳ್ಳಲು ಕ್ಯಾಬಾದ 11 ಮಿಲಿಯನ್ ಜನರು ಈಗಲೂ (ಜನಸಂಖ್ಯೆಯಲ್ಲಿ ದೆಹಲಿಗಿಂತಲೂ ಕಡಿಮೆ ಇರುವ) ತಮ್ಮ ದೀರೋದಾತ್ತ ಹೋರಾಟವನ್ನು ಮುಂದುವರೆಸಿದ್ದಾರೆ. ಕ್ರಾಂತಿಯ ಸಾಧನೆ ಮತ್ತು ಸಮಾಜದ ಉನ್ನತಿಯು ಧೀರ ಹೋರಾಟಗಳಿಂದ ಮಾತ್ರ ಸಾಧ್ಯವೆಂದು ನಂಬಿದವರು ಕ್ಯೂಬನ್ನರು. ಇಂತಹ ಕ್ಯೂಬಾದ ಜನತೆ ಈ ಮಹಾಧಿವೇಶನವನ್ನು ಸಂಘಟಿಸಿದ್ದು ಅತ್ಯಂತ ಸಮಯೋಚಿತ ಹಾಗೂ ಅರ್ಥಪೂರ್ಣ.

ಅಂತರಾಷ್ಟ್ರೀಯ ಪ್ರಜಾಸತ್ತಾತ್ಮಕ ವಕೀಲರ ಸಂಘದ (IADL) 15ನೇ ಮಹಾಧಿವೇಶನ ಮತ್ತು ಅಮೇರಿಕಾದ ನ್ಯಾಯಪಂಡಿತರ 12ನೇ ಸಮ್ಮೇಳನವು ಒಂದು ವೇದಿಕೆಯಲ್ಲಿಯೇ ನಡೆದಿದ್ದು ಅದು ಅಮೇರಿಕದಿಂದ ಕೆಲವೇ ಮೈಲಿ ದೂರದಲ್ಲಿರುವ ನೆರೆಯ ಕ್ಯೂಬಾದ ಹವಾನದಲ್ಲಿ! ವಿಶ್ವದ ವಿವಿಧ ದೇಶಗಳಿಂದ ಬಂದ ನ್ಯಾಯವಾದಿಗಳು ಜನತೆಯ ಮೇಲೆ ಎರಗುತ್ತಿರುವ ಆಕ್ರಮಣ, ಶೋಷಣೆಗಳಿಗೆ ಎದುರಾಗಿ ಮಾನವ ಹಕ್ಕುಗಳ ರಕ್ಷಣೆಗೆ ಬದ್ಧತೆಯ ಹೋರಾಟವನ್ನು ಮುಂದುವರಿಸಲು ನಿರ್ಧರಿಸಿದರು.

ಅಂತರಾಷ್ಟ್ರೀಯ ಪ್ರಜಾಸತ್ತಾತ್ಮಕ ವಕೀಲರ ಸಂಘ (IADL)ವು ತನ್ನ ಐವತ್ತು ವರ್ಷಗಳ ಸಾಧನೆಯಲ್ಲಿ ಮಹತ್ವ ಪೂರ್ಣ ಹೆಜ್ಜೆಗಳನ್ನಿಟ್ಟಿದೆ. ಅಂತರಾಷ್ಟ್ರೀಯ ಮತ್ತು ರಾಷ್ಟ್ರೀಯ ಕಾನೂನು, ಆರ್ಥಿಕ ಮತ್ತು ರಾಜಕೀಯ ನ್ಯಾಯದ ರಕ್ಷಣೆಗಾಗಿ ಅಂತರ ರಾಷ್ಟ್ರೀಯ ಮಾನವೀಯತೆಯನ್ನು ಎತ್ತಿಹಿಡಿಯಲು ಮತ್ತು ಕಾನೂನಿನ ಸೇರ್ಪಡೆಗಾಗಿ, ಸ್ವಾವಲಂಬಿ ಹಕ್ಕಿಗಾಗಿ ಪ್ರಚಾರ ನಡೆಸುತ್ತಾ ಬಂದಿದೆ.

ಮಾನವೀಯತೆಗೆ ವಿರುದ್ಧವಾದ ಹಿಂಸೆ, ಭಾವನರಹಿತವಾದ ಘೋಷಣೆ, ವಿದೇಶಿಯರನ್ನು ವಿಮೋಚನಾ ಹೋರಾಟಗಳಿಂದ ದೂರವಿಡುವುದು, ಒಂದು ರಾಷ್ಟ್ರದ ವಿರುದ್ಧ ಮತ್ತೊಂದು ದೇಶವು ತನ್ನ ಶಕ್ತಿಯನ್ನು ಬಳಸದಂತೆ, ಮಹಿಳೆಯರು ಮತ್ತು ಮಕ್ಕಳಿಗೆ ಕಾನೂನು ಬದ್ಧ ಹಕ್ಕುಗಳ ಸೇರ್ಪಡೆ, ಧಾರ್ಮಿಕ, ಆರ್ಥಿಕ, ಮತ್ತು ಸಾಂಸ್ಕೃತಿಕ ತಾರತಮ್ಯದ ವಿರುದ್ಧ ಕ್ರಾಂತಿಕಾರಕ ಅಭಿಪ್ರಾಯ ಮೂಡಿಸುವುದು ನೆಡೆದಿದೆ.

ಜಗತ್ತಿನಾದ್ಯಂತ ಹಲವಾರು ದೇಶಗಳ ಹೋರಾಟಗಾರರು ಸಂಘಟನೆಗಳು ಮಾನವ ಹಕ್ಕುಗಳ ರಕ್ಷಣೆಗೆ ಸಂಬಂಧಿಸಿದಂತೆ ನೀಡಿರುವ ಕಾಣಿಕೆಗಳು ಅತ್ಯಮೂಲ್ಯ. ಎಂಬುದನ್ನು ಗಮನಿಸಬೇಕು.



ಅಂತರ್ರಾಷ್ಟ್ರೀಯ ವಕೀಲರ ಅಧಿವೇಶನದಲ್ಲಿ ಭಾಗವಹಿಸಿದ್ದ ಕರ್ನಾಟಕದ ರಾಜ್ಯದ ಪ್ರಸಿದ್ಧ ವಕೀಲರಾದ ಶಂಕರಪ್ಪ(ಬಲಕೊನೆಯಲ್ಲಿರುವವರು)ನವರ ಅನುಭವಗಳನ್ನು ಮುಂದಿನ ಸಂಚಿಕೆಯಲ್ಲಿ ನೋಡಿ.

ಅಕ್ಟೋಬರ್ 16 ರಿಂದ 20ರವರೆಗೆ ನಡೆದ 15ನೇ ಅಧಿವೇಶನದಲ್ಲಿ ವಿಶ್ವವು ಇಂದು ಎದುರಿಸುತ್ತಿರುವ ವಿಷಯಗಳು ಕುರಿತಂತೆ 4 ಉಪ ಗುಂಪುಗಳನ್ನಾಗಿ ವಿಂಗಡಿಸಿ ಚರ್ಚೆ ನಡೆಸಿತು.

ಅಧಿವೇಶನವು ಚರ್ಚಿಸಿದ ಪ್ರಮುಖ ವಿಷಯಗಳು.

1. ಶಾಂತಿಯ ಹಕ್ಕು ಮತ್ತು 60. ರಾ. ಸುರಕ್ಷತೆ, ಅಂತರಾಷ್ಟ್ರೀಯ ಸಂಸ್ಥೆಗಳ ಪ್ರಜಾಪ್ರಭುತ್ವೀಕರಣ, ಇದರಲ್ಲಿ ಪ್ರಮುಖವಾಗಿ ವಿಶ್ವಸಂಸ್ಥೆಯು ಅಂಗೀಕರಿಸಿರುವ ಭದ್ರತಾ ಮಂಡಳಿ, ಸೌಮ್ಯ ಸಭೆ ವ್ಯಕ್ತಿ ಮತ್ತು ಇತಿಮಿತಿಗಳು, ವಿಶ್ವಸಂಸ್ಥೆಯ ಮಾನವೀಯ ಮಧ್ಯ ಪ್ರವೇಶ, ಸ್ವ ರಕ್ಷಣೆಯ ಹಕ್ಕು, ವಸಹತುಶಾಹಿಯ ಪ್ರದೇಶಗಳು ಮತ್ತು ವಿದೇಶಿ ಮಿಲಿಟರಿ ಸೇವೆಗಳು ಕುರಿತು.

2. ರಾಷ್ಟ್ರ ಮತ್ತು ಕಾನೂನು, ಜಾಗತೀಕರಣದ ಅರ್ಥವ್ಯವಸ್ಥೆಯಲ್ಲಿ, ರಾಷ್ಟ್ರಗಳ ಆರ್ಥಿಕತೆಯನ್ನು ಪರಿಗಣಿಸುವುದು. ಅವುಗಳ ಪಾತ್ರ ಸಮಗ್ರ ವಿಮರ್ಶೆ. ಮಾನವ ಹಕ್ಕುಗಳು ಕುರಿತು ವಿದೇಶಿ ಹಿಡಿತ, ಅಂತರಾಷ್ಟ್ರೀಯ ಹಣಕಾಸು ನಿಧಿ ಮತ್ತು ವಿಶ್ವಸಂಸ್ಥೆ ಆರ್ಥಿಕತೆ, ಹಣಕಾಸು, ಮಿಲಿಟರಿ, ನ್ಯಾಯಾಂಗ ಮತ್ತು ಸೈದ್ಧಾಂತಿಕ ಕಂಬಗಳಾಗಿ ನವ ವಸಾಹತುಶಾಹಿಯ ವರ್ಗಾವಣೀಕರಣ ಇತ್ಯಾದಿ.

3. ಪ್ರಜಾಪ್ರಭುತ್ವ ಮತ್ತು ಮಾನವ ಹಕ್ಕುಗಳು ಚಿಂತನೆ ಮತ್ತು ಆಚರಣೆ ಜನತೆಯ ಶಕ್ತಿಯ ನ್ಯಾಯಪರತೆ ಮತ್ತು ರಾಷ್ಟ್ರದ ಕಾನೂನನ್ನು ಪರಿಗಣಿಸುವುದು.

4. ಆಡಳಿತ ನ್ಯಾಯದ ದಾರಿ, ಸ್ವತಂತ್ರ್ಯ ನ್ಯಾಯಾಂಗ ಕಾನೂನಿನ ತಿಳುವಳಿಕೆ ಮೂಲಕ ಅದರ ವ್ಯವಹಾರಿಕವಾಗಿ ಜಾರಿಗೊಳಿಸುವುದು. ಲ್ಯಾಟಿನ್ ಅಮೇರಿಕದ ಸುಧಾರಣೆ ಅಂ.ರಾ. ದತ್ತು, ವಿಶ್ವವಿದ್ಯಾನಿಲಯ, ಸಮಾಜ, ರಾಜ್ಯ, ಸಂಬಂಧ ಇತ್ಯಾದಿ.

4 ಕಮಿಷನ್‌ಗಳು ಪ್ರತ್ಯಕ್ಷವಾಗಿ ಎರಡು ದಿನಗಳ ಕಾಲ ಚರ್ಚಿಸಿದವು. ಮತ್ತು ಸುಮಾರು 163 ಪ್ರಬಂಧಗಳು ಅಂಗಿಕರಿಸಲ್ಪಟ್ಟವು. ಈಎಲ್ಲಾ ವಿಷಯಗಳನ್ನು ಅಧಿವೇಶನವು ಹಲವಾರು ಪ್ರಮುಖ ನಿರ್ಣಯುಗಳಾಗಿ ಅಂಗೀಕರಿಸಿತು.

ಜಗತ್ತಿನ ವಿವಿಧ ದೇಶಗಳಿಂದ 800 ಪ್ರತಿನಿಧಿಗಳು ಈ ಅಧಿವೇಶನದಲ್ಲಿ ಪಾಲ್ಗೊಂಡಿದ್ದರು ಅವರಲ್ಲಿ ಅಮೇರಿಕದಿಂದ ಮಾತ್ರವೇ 300 ಪ್ರತಿನಿಧಿಗಳು ಭಾಗವಹಿಸಿದ್ದು ವಿಶೇಷ.


ಭಾರತದಿಂದ ಅಂತರಾಷ್ಟ್ರೀಯ ಪ್ರಜಾಸತ್ತಾತ್ಮಕ ವಕೀಲರ ಸಂಘದ ಪ್ರಧಾನ ಕಾರ್ಯದರ್ಶಿ ಕಾ। ಹರ್‌ದೇವ್‌ಸಿಂಗ್, ಕಾ। ಜಿತೇಂದ್ರಶರ್ಮ ಅಖಿಲ ಭಾರತ ವಕೀಲರ ಸಂಘದ ಕಾರ್ಯದರ್ಶಿ ಕೆ.ಕೆ. ವೇಣುಗೋಪಾಲ ಸೇರಿದಂತೆ ಒಟ್ಟು 9 ಜನರು ಪಾಲ್ಗೊಂಡಿದ್ದರು.

ಕರ್ನಾಟಕದಿಂದ AILI ಕಾರ್ಯಧ್ಯಕ್ಷರಾದ ಕಾ। ವಿ. ಶಂಕರಪ್ಪನವರು ಭಾಗವಹಿಸಿದ್ದರು.

ಅಕ್ಟೋಬರ್ 16ರ ಮಧ್ಯಾನ್ಹ ಅಧಿವೇಶನವು ಉದ್ಘಾಟನೆಯಾಯಿತು. ಅದಿವೇಶನವನ್ನುದ್ದೇಶಿಸಿ ಕ್ಯೂಬನ್ ರಾಷ್ಟ್ರೀಯ ವಕೀಲರ ಸಂಘದ ಅಧ್ಯಕ್ಷರಾದ ಅರುಂದ್ ಮೆದಿನಚುನಿಯ. ಮತ್ತು ಅಮೇರಿಕದ ವಕೀಲರ ಸಂಘದ ಅಧ್ಯಕ್ಷರಾದ ಅಲ್ಪರೋ ರೋಮಿನೆಜ್ ಗೋನಾಲೆಜ್ ಮಾತನಾಡಿದರು. ಪ್ರಸ್ತುತ ವಿಶ್ವ ಪ್ರಜಾಸತ್ತಾತ್ಮಕ ವಕೀಲರ ಸಂಘ (IADL) ಅಧ್ಯಕ್ಷರಾಗಿದ್ದು ಅಲ್ಜೀರಿಯಾದ ಅನುರ್ ಬೆಂಟಾಮಿ ಯುವ ಅನಾರೋಗ್ಯದ ಕಾರಣ ಅಧಿವೇಶನಕ್ಕೆ ಹಾಜರಾಗಿರಲಿಲ್ಲ.

AILI ಗೆ ಸದಸ್ಯತ್ವ: ಈ ಅಧಿವೇಶನವು ಅವಿರೋಧ ನಿರ್ಣಯದ ಮೂಲಕ 'ಅಖಿಲ ಭಾರತ ವಕೀಲರ ಸಂಘ AILI ವು ವಿಶ್ವ ಪ್ರಜಾಸತ್ತಾತ್ಮಕ ವಕೀಲರ ಸಂಘ (IADL) ಸದಸ್ಯತ್ವವನ್ನು ಹೊಂದಿದೆ ಎಂದು ಘೋಷಿಸಿತು.

- ಕೆ. ಮಹಾಂತೇಶ್



ಚಿತ್ರ: ಶಂಕರಪ್ಪ

ಫಿಡೆಲ್ ಕ್ಯಾಸ್ಟ್ರೋ ಆಶ್ಚರ್ಯದ ಆಗಮನ-ಸ್ಫೂರ್ತಿದಾಯಕ ಭಾಷಣ

ಅಧಿವೇಶನ ಕೊನೆಗೊಳ್ಳುವ ಕೊನೆಯ ಮಧ್ಯಾನ್ಹ ಎಲ್ಲರಿಗೂ ಅಚ್ಚರಿ! ಇದ್ದಕ್ಕಿದ್ದಂತೆ ಕ್ಯೂಬಾದ ಅಧ್ಯಕ್ಷ ಡಾ। ಫಿಡಲ್ ಕ್ಯಾಸ್ಟ್ರೋ ಆಗಮನ. ಎಂದೂ ನೆನಪಿಂದ ಅಳಿಸಲಾಗದ ಸುಮಾರು ಎರಡುವರೆ ಘಂಟೆಗಳ ಸ್ಪೂರ್ತಿದಾಯಕ ಬಾಷಣ.

ಸಾಮ್ರಾಜ್ಯಶಾಹಿಗಳು ಇಂದು ಜಗತ್ತನ್ನು ಒಂದು ಹುಚ್ಚರ ಆಸ್ಪತ್ರೆಯನ್ನಾಗಿ ಪರಿವರ್ತಿಸ ಲೊರಟಿದ್ದಾರೆ. ಎಂದು ಮಾತು ಆರಂಭಿಸಿದ ಫೆಡೆಲ್... ಲ್ಯಾಟಿನ್ ಅಮೆರಿಕ ಮತ್ತು ಆಫ್ರಿಕಾಗಳಲ್ಲಿ ಸಾಮ್ರಾಜ್ಯಶಾಹಿ ನಡೆಸುತ್ತಿರುವ ದಷ್ಕೃತ್ಯಗಳನ್ನು ಅಂಕಿ ಸಂಖ್ಯೆ ಸಮೇತ ತೆರೆದಿಟ್ಟರು.

ಸ್ವಾತಂತ್ರ್ಯ, ಸಹೋದರತೆ ಮತ್ತು ಸಮಾನತೆ ಘೋಷಣೆ ನೀಡಿದ್ದು ಫ್ರೆಂಚ್ ಕ್ರಾಂತಿ ಹಾಗೇ ಆಫ್ರಿಕಾದಲ್ಲಿ ಗುಲಾಮ ಪದ್ದತಿ ನಾಶಪಡಿಸಬೇಕೆಂದು 1876ರಲ್ಲಿ ಘೋಷಣೆ ನೀಡಿದ ಫಿಲಡೆಲ್ಫಿಯಾ ಆದರೆ ಜಗತ್ತಿನಲ್ಲಿ ಅವುಗಳನ್ನು ಜಾರಿಗೊಳಿಸುವ ಬದಲು ಅದರ ವಿಚಾರವನ್ನು ಮಾತ್ರ ಪ್ರಚಾರಿಸಲಾಯಿತು.

ಇಂದು ಜಗತ್ತಿನಲ್ಲಿ ಹಲವಾರು ಘಟನೆಗಳು ಜರುಗುತ್ತಿವೆ. ಅವರು ಹಡಗುಗಳನ್ನು ಮತ್ತು ಕ್ಷಿಪಣಿಗಳನ್ನು ಎಲ್ಲೆಂದರಲ್ಲಿ ಹಾಕುತ್ತಿದ್ದಾರೆ. ಇದೇ ಜನ ವಿಯೆಟ್ನಾಂನಲ್ಲಿ ಒಂದು ಮಿಲಿಯ ಜನರನ್ನು ಕೊಂದರು ತುರ್ತು ಸ್ಥಿತಿಯನ್ನು ಹೇರುತ್ತಾರೆ. ಗ್ರಾನೆಡಾವನ್ನು ಆಕ್ರಮಿಸಿ ನಾಶಪಡಿಸಿದಾಗ ನಾವು ಅಲ್ಲಿ ವಿಮಾನ ನಿಲ್ದಾಣವನ್ನು ನಿರ್ಮಿಸಿದೆವು ಎಂದರು ಡಾ। ಫಿಡೆಲ್.

ಇತ್ತೀಚಿನ ಅಮೇರಿಕಾದ ಅಧ್ಯಕ್ಷೀಯ ಚುನಾವಣೆಯನ್ನು ವಿಶ್ಲೇಷಿಸಿದ ಕಾ। ಕ್ಯಾಸ್ಟ್ರೋ ಅಲ್ಲಿ ಇರುವ ಪ್ರಜಾಪ್ರಭುತ್ವವಾದರೂ ಎಂತಹುದು ಪ್ರಚಾರಕ್ಕಾಗಿ 3 ಬಿಲಿಯಾಂತರ ಹಣವನ್ನು ಅನಾವಶ್ಯಕವಾಗಿ ಖರ್ಚುಮಾಡಿರುವುದನ್ನು ತೀವ್ರವಾಗಿ ಟೀಕಿಸಿದ ಅವರು ಅದೇ ಹಣದಲ್ಲಿ ಹಸಿವಿನಿಂದ ನರಳುತ್ತಿರುವ ಮಿಲಿಯಾಂತರ ಜನರನ್ನು ಪಾರು ಮಾಡಬಹುದಿತ್ತಲ್ಲವೇ ಎಂದು ಪ್ರಶ್ನಿಸಿದರು.

ಕ್ಯೂಬಾದ ಕ್ರಾಂತಿ ತರುವಾಗ ನಾವು ಸಮಾಜವಾದಿ ಸಂವಿಧಾನವನ್ನು ಅಳವಡಿಸಿಕೊಂಡ ಪರಿಣಾಮವಾಗಿ ಹಸಿವು, ಮೌಢ್ಯತೆ, ನಿರುದ್ಯೋಗ ಮತ್ತು ಬವಣೆಗಳೇ ಇಲ್ಲದ ಸಮಾಜವನ್ನು ನಿರ್ಮಿಸಲು ಸಾಧ್ಯವಾಗಿದೆ. ಎಂದ ಅವರು ಕ್ಯೂಬಾ. ಶಿಕ್ಷಣ ಮತ್ತು ಆರೋಗ್ಯಕ್ಕೆ ವಿಶೇಷ ಗಮನ ನೀಡಿ ಅವುಗಳನ್ನು ಮತ್ತಷ್ಟು ಪ್ರಗತಿದಾಯಕ ಸ್ಥಾನಕ್ಕೇರಿಸುವ ಯೋಜನೆಯನ್ನು ಮುಂದಿನ ಹತ್ತು ವರ್ಷಗಳಲ್ಲಿ ರೂಪಿಸಲಿದೆ. ಹಾಗೆಯೇ ಸ್ವಾರ್ಥರಹಿತವಾದ ಸಂಸ್ಕೃತಿಯನ್ನು ರೂಪಿಸಲು ಸೌಹಾರ್ದತೆಯನ್ನು ಸಾರಲು ಮತ್ತು ಕ್ಯೂಬಾ ವಿರುದ್ಧ ಅಮೇರಿಕಾದ ನೀತಿಗಳನ್ನು ವಿರೋಧಿಸಲು 8 ಲಕ್ಷ ದೇಶಪ್ರೇಮಿ ಕ್ಯೂಬನ್ನರು ನಡೆಸಿದ ಅಕ್ಟೋಬರ್ 19ರ ಬೃಹತ್ ರ್ಯಾಲಿಯಲ್ಲಿ ಭಾಗವಹಿಸಿದ್ದಕ್ಕಾಗಿ ಅಭಿನಂದಿಸಿದರು.

ಬೆಟ್ಟಕ್ಕೆ ಚಳಿ

ರಾಜಶೇಖರ ಹತಗುಂದಿ

ಪ್ರೊ. ಪಾಟೀಲರು ತಲೆ ಮೇಲೆ ಕೈ ಹೊತ್ತು ಚಿಂತಾಕ್ರಾಂತರಾಗಿ ಕುಳಿತಿದ್ದರು. ನಾಲ್ಕೈದು ದಿನಗಳಿಂದ ಅವರ ತಲೆಯೆಂಬುದು ಯುದ್ಧಭೂಮಿಯಾಗಿ ಪರಿಣಮಿಸಿತ್ತು. ಕಣ್ಣಿನ ಎವೆ ಮುಚ್ಚಿದರೆ ಸಾಕು, ಗಾಢ ನಿದ್ದೆಯನ್ನು ಆವಾಹಿಸಿಕೊಳ್ಳುತ್ತಿದ್ದ ಅವರಿಗೆ ಸುಖನಿದ್ರೆ ಎನ್ನುವುದು ಮರೀಚಿಕೆಯಾಗಿತ್ತು. ಪ್ರೊ. ಜೆ.ಜಿ.ಪಾಟೀಲ ಎಂದೇ ಪ್ರಸಿದ್ಧಿ ಪಡೆದಿದ್ದ ಅವರ ಕ್ರಾಂತಿಕಾರಿ ಭಾಷಣ ಕೇಳಿದ ಪುಢಾರಿಗಳು ಬೆಚ್ಚಿ ಬೀಳುತ್ತಿದ್ದರು. ಪಾಟೀಲರ ಭಾಷಣವೆಂದರೆ ಎಲ್ಲೆಡೆ ಮನೆ ಮಾತಾಗಿತ್ತು. ಅಂತಹ ವಾಗ್ಮಿ ಮಾತು ಕಳೆದುಕೊಂಡು ಮೌನವಾಗಿದ್ದರು.

ಖುರ್ಚಿಯಲ್ಲಿ ಗುಬ್ಬಚ್ಚಿಯಂತೆ ಮುದುಡಿ ಕೂತಿದ್ದ ಪಾಟೀಲರು, ಕುಂತ ನಿಲುವು ಬದಲಿಸಿದರು. ಆರೂವರೆ ಅಡಿಯ ಅಜಾನುಬಾಹು ದೇಹದ ಅವರಲ್ಲಿ ನಿಟ್ಟುಸಿರು ಬಿಡಲೂ ತ್ರಾಣವಿರದಂತಾಗಿತ್ತು. ಜೀವನದಲ್ಲಿ ಮೊದಲ ಬಾರಿಗೆ ಅವರು ಮಾನಸಿಕವಾಗಿ ಕುಗ್ಗಿದ್ದರು. ತಮ್ಮ ಮಗ ರಕ್ಷಿತ ಅಂತರಜಾತಿಯ ವಿವಾಹವಾದಾಗಲೂ ಅವರು ಈ ಬಗೆಯಲ್ಲಿ ಕುಗ್ಗಿರಲಿಲ್ಲ. ಮಗನ ಆಯ್ಕೆಗೆ ಸಮ್ಮತಿ ನೀಡಲು ತಮ್ಮ ಹೆಂಡತಿ ನಿರಾಕರಿಸಬಹುದೆಂಬ ಪಾಟೀಲರ ನಿರೀಕ್ಷೆ ಸುಳ್ಳಾಗಿತ್ತು. ತಮಗಿಂತಲೂ ಒಂದು ಸ್ತರ ಮೇಲಿರುವ 'ಜಾತೀಯ' ಹುಡುಗಿಯನ್ನು ಆಯ್ಕೆ ಮಾಡಿಕೊಂಡ ಮಗನ ಜಾಣ್ಮೆಯನ್ನು ಹೆಂಡತಿ ಕೊಂಡಾಡಿದಾಗ, ಪಾಟೀಲರು ದಿಗಿಲು ಮತ್ತು ಸಂತೋಷ ಎರಡೂ ಅನುಭವಿಸಿದ್ದರು.


ಸಾಫ್ಟ್‌ವೇರ್ ಇಂಜಿನಿಯರಿಂಗ್‌ನಲ್ಲಿ ಪದವಿ ಪಡೆದಿದ್ದ ಮಗ - ಸೊಸೆ ವಿದೇಶಕ್ಕೆ ಹೋಗುವುದು ಪ್ರೊ. ಪಾಟೀಲರ ಹೆಂಡತಿಗೆ ಸುತರಾಂ ಇಷ್ಟವಿರಲಿಲ್ಲ. ಮಗ, ಸೊಸೆ ತಮ್ಮ ಮಾತು ಮೀರಿದರಲ್ಲ ಎಂಬ ಕೊರಗು ಅವರ ಹೆಂಡತಿಯಲ್ಲಿ ಕೊರೆಯುತ್ತಿತ್ತಾದರೂ, ಕೈಗೆ ಬಂದ ಮಕ್ಕಳು ಎಲ್ಲಾರು ಇರ್‍ಲಿ, ಚಲೋ ಇದರ ಸಾಕು ಎಂದು ಬರಬರುತ್ತಾ ಸಮಾಧಾನ ತಂದುಕೊಂಡಿದ್ದರು. ಮಗ-ಸೊಸೆ ವಿದೇಶಕ್ಕೆ ಹೋದದ್ದರ ಬಗ್ಗೆಯಾಗಲಿ, ಅಂತರಜಾತಿ ವಿವಾಹವಾದ್ದರ ಬಗೆಯಾಗಲಿ ಪಾಟೀಲರಿಗೆ ಅಸಮಾಧಾನವೇನೂ ಆಗಿರಲಿಲ್ಲ. ಹಾಗೆ ನೋಡಿದರೆ, ಮಗ ಬೇರೆ ಜಾತಿಯ ಹುಡುಗಿಯೊಂದಿಗೆ ಮದುವೆಯಾದದ್ದು ಅವರ ವರ್ಚಸ್ಸು ಹೆಚ್ಚುವಂತೆ ಮಾಡಿತ್ತು. ಕ್ರಾಂತಿಕಾರಿ ಭಾಷಣಕ್ಕೆ ಹೆಸರಾದ ಅವರು, ಇತ್ತೀಚಿನ ದಿನಗಳಲ್ಲಿ ಮಾತು ಮತ್ತು ಕ್ರಿಯೆ ಒಂದಾಗಬೇಕೆಂದೂ ಹೇಳಿ, ತಮ್ಮ ಮಗ ಅಂತರಜಾತಿ ವಿವಾಹವಾದದ್ದನ್ನು ಉಲ್ಲೇಖಿಸಿ, ಪುಳಕಿತರಾಗಿ ಅಪಾರ ಅಭಿಮಾನ ಪಡುತ್ತಿದ್ದರು.

ಆದರೆ ಈಗ ಖುರ್ಚಿಯಲ್ಲಿ ಮುದುಡಿ ಕೂತ ಪಾಟೀಲರು, ತಮ್ಮೆದುರು ದುತ್ತೆಂದು ಎದುರಾದ ಹೊಸ ಸಮಸ್ಯೆಗೆ ಕಂಗಾಲಾಗಿ ಹೋಗಿದ್ದರು. ಮಗನ ಜಾಣ ಆಯ್ಕೆ ಅವರಿಗೆ ವರ್ಚಸ್ಸು, ಖ್ಯಾತಿ ಹೆಚ್ಚಿಸಲು ನೆರವಾಗಿದ್ದರೆ, ಮಗಳ ನಿರ್ಧಾರ ಮನದ ನೆಮ್ಮದಿ ಕೆಡಿಸಿತ್ತು. ಅವರ ಹೆಂಡತಿ ನಾಗಮ್ಮನವರಂತೂ 'ನೀವು ಮಗಳ ಮಾತಿಗೆ ಒಪ್ಪಿ ಆ ಸಂಬಂಧ ಬೆಳೆಸಿದರೆ ನನ್ನ ಹೆಣಾ ಕಾಣಬೇಕಾಗ್ತದೆ' ಅಂತ್ಹೇಳಿ ಗಾಬರಿ ಹುಟ್ಟಿಸಿದ್ದರು.

... ಟೇಬಲ್ ಮೇಲೆ ಅಸ್ತವ್ಯಸ್ತವಾಗಿ ಹರಡಿಕೊಂಡಿದ್ದ ಪುಸ್ತಕಗಳತ್ತ ಪಾಟೀಲರ ದೃಷ್ಟಿ ಹರಿಯಿತು. ಮನದೊಳಗೆ, 'ನಂಗೆ ಯಾಕ್ ಹಿಂಗಾಗಲ್ಖತ್ಯಾದು, ಪುಸ್ತಕ ಓದಲಿಕ್ಕ ಶುರು ಮಾಡಿದರ ಚಿಂತಿ ಮರ್‍ತುಹೋಗ್ತಿತ್ತು. ಅದರೀಗ ಯಾವ ಪುಸ್ತಕ ಹಿಡಿದರೂನೂ ಅಕ್ಷರಗಳು ಕಣ್ಣಾಗ ಮೂಡ್ತಿಲ್ಲ, ತಲ್ಯಾಗ ಇಳೀತಿಲ್ಲ' ಎಂದು ವ್ಯಥೆ ಪಟ್ಟರು. ಅಡಿಗೆ ಮನೆಯಿಂದ ಗಂಗಾಳ ತಂಬಿಗಿ ಬಿದ್ದ ಸಪ್ಪಳ ಕೇಳಿಬಂತು. ಟೇಬಲ್ ಮೇಲೆ ಕೈಯಿಟ್ಟು ಎದ್ದು ನಿಂತರು. ಹೋಗಲೋ ಬೇಡವೋ ಅಂತ ಕ್ಷಣ ಹೊತ್ತು ಆಲೋಚಿಸಿ "ಥೂ ಹಾಳಾದ ಬೆಕ್ಕಿನ ಕಾಟ ಸಾಕಾಯಿತು' ಎಂದು ಖುರ್ಚಿಯಲ್ಲೇ ಕುಳಿತರು.

ಕಥೆ

ಟೇಬಲ್ ಮೇಲೆ ಮುಂಗೈ ಊರಿ, ಗದ್ದಕ್ಕೆ ಅಂಗೈ ಆನಿಸಿ ಕೂತ ಪಾಟೀಲರ ದೃಷ್ಟಿ ನೀಟಾಗಿ ಜೋಡಿಸಿಟ್ಟ ಪುಸ್ತಕಗಳತ್ತ ಹರಿಯಿತು. ಒಂದೊಂದೇ ಪುಸ್ತಕದ ಮೇಲೆ ಕಣ್ಣಾಡಿಸಿದರು. ತಮಗಿರುವ ಓದಿನ ಗೀಳಿನ ಬಗ್ಗೆ ತಾವೇ ಆಶ್ಚರ್ಯಪಟ್ಟರು. ಅವರಿಗೆ ಓದಿನ ಹಾದಿ ಸಿಕ್ಕಿದ್ದೇ ಪವಾಡಸದೃಶ ರೀತಿಯಲ್ಲಿ. ಪ್ರೊ. ಜೆ.ಜಿ.ಪಾಟೀಲರ ಅಪ್ಪ ಗುರುಲಿಂಗಪ್ಪಗೌಡರು ಇನ್ನೂರು ಎಕರೆ ಜಮೀನಿನ ಮಾಲೀಕರಾಗಿದ್ದರು. ಮನೆಯಲ್ಲಿ ಸಂಪತ್ತು ಕಾಲು ಮುರಿದುಕೊಂಡು ಬಿದ್ದಿತ್ತು. ಅವರು ಏಳು ಗೇಣಿನ ಕುದುರೆ ಮೇಲೆ ಕುಂತು ಹೊಲಕ ಹೋಗಿ, ಮನೀಗಿ ಬಂದರೇನೆ ಊರ ಜನ ಬೆಕ್ಕಸ ಬೆರಗಾಗಿ ನೋಡುತ್ತಿದ್ದರಂತೆ.



ಹೀಗಿದ್ದರೂ ಗುರುಲಿಂಗಪ್ಪಗೌಡರು ದರ್ಪದ ಗೌಡಕಿ ಮಾಡಿದವರಲ್ಲ. ಎದ್ದು ಕಾಣುವ ಹಾಗೆ ಹಣೆಮೇಲೆ ಮೂರು ಬಟ್ಟಿ ವಿಭೂತಿ ಹಚ್ಚಿಕೊಂಡು 'ನಿನ್ನೊಳಗ ನೀ ತಿಳಿಕೋ...' ಎಂದು ಗುಣುಗುತ್ತಲೇ ಸಂಸಾರ ಮಾಡಿದವರು. ಪೂಜೆ-ಪುನಸ್ಕಾರ, ನೇಮ-ನಿಷ್ಟಿ ಎಲ್ಲಾ ಮಾಡ್ತಿದ್ದ ಅವರು, ತನ್ನ ಮಗಾ ತನ್ನಂಗೇ ಹಳ್ಳಿ ಗೌಡಾಗಿ ಉಳಿಬಾರದು ಅಂತ ಅನಕೊಂಡವರು. ಏಳು ಹೆಣ್ಣು ಒಂದು ಗಂಡಿನ ತಂದೆಯಾಗಿದ್ದ ಅವರು, ತಮ್ಮ ಮಗ ಜಗನ್ನಾಥನನ್ನು ಕಲಬುರ್ಗಿಯಲ್ಲಿಟ್ಟು ಆಸ್ಥೆಯಿಂದಲೇ ಓದಿಸಿದ್ದರು. ಪರೀಕ್ಷೆ ಪಾಸಾಗಲೆಂದು ನಗರಕ್ಕೆ ಓದಲು ಬಂದ ಜಗನ್ನಾಥ ಓದು ಹುಚ್ಚಿನ ಗೆಳೆಯರ ಸಹವಾಸದಲ್ಲಿ ಪುಸ್ತಕ ಓದುವುದನ್ನು ಉಸಿರಾಗಿಸಿಕೊಂಡಿದ್ದ. ಮುಂದೆ ಎಂ.ಎ.ಪಿ.ಎಚ್.ಡಿ. ಮುಗಿಸಿ, ವಿಶ್ವವಿದ್ಯಾಲಯದಲ್ಲಿ ಕಲಿಸುವ ನೌಕರಿ ಪಡೆದು, ಖ್ಯಾತ ಸಮಾಜ ವಿಜ್ಞಾನಿಯೂ ಎನಿಸಿಕೊಂಡರು. ಹೀಗಾಗಿ, ಜಗನ್ನಾಥ, ಪ್ರೊ ಜೆ.ಜಿ.ಪಾಟೀಲ ಹೆಸರಿನಲ್ಲಿ ಜನಮನದಲ್ಲಿ ಚಿರಪರಿಚಿತರಾದರು.

ಪುಸ್ತಕಗಳ ಮೇಲೆ ಹರಿದಾಡಿದ ಕಣ್ಣುಗಳು ದಣಿದವು. ಪಾಟೀಲರು ಕ್ಷಣಹೊತ್ತು ಕಣ್ಣು ಮುಚ್ಚಿದರು. ಕಣ್ಣಲ್ಲಿ ಮೂಡಿದ್ದು, ಹಠ ಹಿಡಿದು ಕೂತ ಹೆಂಡತಿ ಮತ್ತು ಮಗಳ ಚಿತ್ರವೇ. ಮಗಳು ಶಿಲ್ಪಾಳ ನಿರ್ಧಾರ ತಮ್ಮ ಭಾಷಣಕ್ಕಿಂತಲೂ ಕ್ರಾಂತಿಕಾರಿಯಾದದ್ದು ಎಂದು ಬೆಚ್ಚಿಬಿದ್ದರು. ಮನದೊಳಗಿನ ಸಂಘರ್ಷ ಮತ್ತಷ್ಟು ಹೆಚ್ಚಾಯಿತು. 'ಆದದ್ದಾಯಿತು, ಒಪ್ಪಿಗೆ ಕೊಡ್ಲೇನು?' ಎಂದು ಒಂದು ಕ್ಷಣ ಅಂದುಕೊಂಡರು. ಅದರ ಹಿಂದೆಯೇ 'ಅದೆಲ್ಲ ಆಗದ ಮಾತು' ಎನ್ನುವುದನ್ನು ಸಮರ್ಥಿಸುವ ವ್ಯಾವಹಾರಿಕ ಬದುಕಿನ ನಿದರ್ಶನಗಳು ಹರಿದುಬರತೊಡಗಿದವು.

ಗದ್ದಕ್ಕೆ ಆನಿಸಿ ಹಿಡಿದ ಕೈ ತೆಗೆದು ನೇರ ಕೂತರು. ತಲೆ ಕೆಳಗೆ ಮಾಡಿ ಕೈ ಗಡಿಯಾರ ನೋಡಿಕೊಂಡರು. ಗಡಿಯಾರ ನಿಂತಂತಿತ್ತು. ಕಿವಿಗೆ ಹಿಡಿದು ಪರೀಕ್ಷಿಸಿದರು. ಟಿಕ್‌ಟಿಕ್ ಸದ್ದು ಕೇಳುತ್ತಿರಲಿಲ್ಲ. ಮುಖ ಮೇಲೆತ್ತಿ ಗೋಡೆ ಗಡಿಯಾರ ನೋಡಿದರು. ಐದೂ ಹದಿನೈದಾಗಿತ್ತು. ಕಿಟಕಿಯ ಪರದೆ ಸರಿಸಿ ಹೊರಗೆ ಕಣ್ಣು ಹಾಯಿಸಿದರೆ, ಕತ್ತಲೆ ಕರಗುತ್ತಿರುವಂತೆ ಭಾಸವಾಯಿತು. ಇನ್ನೂ ಚುಮುಚುಮು ಬೆಳಕು ಹರಿದಿರಲಿಲ್ಲ.

ಪ್ರೊ. ಪಾಟೀಲರು ಇಡೀ ರಾತ್ರಿ ಜಾಗರಣೆ ಮಾಡಿದ್ದರು. ಕಣ್ಣಿಗೆ ಕಣ್ಣು ಹತ್ತಲಾರದಷ್ಟು ರಾತ್ರಿಯಿಡೀ ಎಚ್ಚರವಿದ್ದುದು ಇತ್ತೀಚಿನ ದಿನಗಳಲ್ಲಿ ಇದು ಪ್ರಥಮ ಬಾರಿ. ನಿನ್ನೆ, ಮೊನ್ನೆ, ಆಚೆಮೊನ್ನೆ ಒಂದಷ್ಟಾದರೂ ನಿದ್ದೆ ಮಾಡಿದ್ದರು. 'ಅಜೀರ್ಣದಿಂದಾಗಿ ನಿದ್ದೆ ಬರುತ್ತಿಲ್ಲವೇ?' ಎಂದು ತರ್ಕಿಸಿದರು. ಆದರೆ, ನಿನ್ನೆ ರಾತ್ರಿ ಒಂದು ಕಪ್ಪ ಹಾಲು ಕುಡಿದದ್ದು ಬಿಟ್ಟು ಮತ್ತೇನನ್ನೂ ಸೇವಿಸಿರಲಿಲ್ಲ.

ನಿನ್ನೆ ರಾತ್ರಿಯಂತೂ ಹೆಂಡತಿ ಮತ್ತು ಮಗಳ ರಂಪ ಅತಿಗೆ ಹೋಗಿತ್ತು. ಸಿಟ್ಟಿಗೆದ್ದ ಹೆಂಡತಿ, ಮಗಳಿಗೆ ಬಾಯಿಗೆ ಬಂದಂತೆ ಬೈದು, ಮುಖ ಮಾರಿ ಎನ್ನದೇ ಥಳಿಸಿದ್ದಳು. ಬಿಡಿಸಲು ಹೋಗಿ ಏಟು ತಿಂದ ಪಾಟೀಲರಿಗೂ, ಚೆನ್ನಾಗಿ ಬೈದು ದೂರ ತಳ್ಳಿದ್ದಳು. ಏನೋ ಹೇಳಲು ಹೋಗಿ ರಂಪಕ್ಕೆ ಹಾದಿ ಮಾಡಿಕೊಟ್ಟಿದ್ದರು. ಹೆಂಡತಿ ಮಾತ್ರ ಗಟ್ಟಿ ಧನಿಯಲ್ಲಿ 'ಇಕೀ ಹೀಂಗಾಗಲಿಕ್ಕೆ ನೀವೇ ಕಾರಣ. ನಿಮ್ಮಂತರವರ ಭಾಷಣ ಕೇಳಿ ಇಕಿ ಹಾದಿ ಬಿಟ್ಟಿದ್ದು' ಎಂದು ಪಾಟೀಲರನ್ನೇ ಗುರಿ ಮಾಡಿದ್ದಳು.

ಹೆಂಡತಿ ಮೊದಲಿನಿಂದಲೂ ಹಾಗೇಯೇ; ಅವರನ್ನು ತಮ್ಮ ಹಾದಿಗೆ ತರಬೇಕೆಂದು ಪಾಟೀಲರೂ ಏನೆಲ್ಲಾ ಚ್ಯಾಷ್ಟಿ ಮಾಡಿದ್ದರು. ಮದುವೆಯಾದ ಶುರುವಾತಿನಲ್ಲೇ, ಜಗುಲಿ ಮೇಲಿನ ದೇವರುಗಳನ್ನು ಮಾಳಿಗೆ ಮೇಲೆ ಎಸೆದಿದ್ದರು. ಅವಳ ದೈವಭಕ್ತಿಯನ್ನು ವ್ಯಂಗ್ಯವಾಡಿ ಬಹಳ ದಿನಗಳವರೆಗೆ ಬುದ್ಧಿಹೇಳಿ ನೋಡಿದರು. ಯಾವುದೂ ನಾಟಲಿಲ್ಲ. ಬದಲಿಗೆ ಪಾಟೀಲರ ಹೆಂಡತಿಯ ದೈವಭಕ್ತಿ ಇಮ್ಮಡಿಸಿತ್ತು. ಮದುವೆಯಾದ ಮೇಲೆ ಪಾಟೀಲ ದಂಪತಿಗಳಿಗೆ ನಾಲ್ಕೈದು ವರ್ಷ ಮಕ್ಕಳಾಗಲಿಲ್ಲ. ಕಂಡ ಕಂಡ ದೇವರಿಗೆ ಹರಕೆ ಹೊತ್ತು, ವ್ರತ, ನೇಮ, ನಿಷ್ಠೆ, ಉಪವಾಸಗಳಲ್ಲಿ ಮಗ್ನರಾಗುತ್ತಿದ್ದ ಅವರ ಹೆಂಡತಿಗೆ ಕೊನೆಗೊಮ್ಮೆ ಮಕ್ಕಳಾದಾಗ, 'ಇದೆಲ್ಲ ನನ್ನ ದೈವಭಕ್ತಿಯ ಫಲ' ಎಂದು ಸಮರ್ಥಿಸಿಕೊಂಡು, ಆ ಕುರಿತು ಗಂಡ ಎಂದೂ ಚಕಾರ ಎತ್ತದ ಹಾಗೆ ಮಾಡಿದ್ದಳು.

ಹಿಂದಿನ ರಾತ್ರಿಯ ಘಟನೆಯಿಂದ ಪ್ರೊ. ಪಾಟೀಲರಿಗೆ ತೀವ್ರ ಅವಮಾನವೆನಿಸಿದಂತಾಗಿತ್ತು. ಮಗಳಿಗೆ ಬುದ್ಧಿವಾದ ಹೇಳಲು ಯತ್ನಿಸಿದರಾದರೂ ನೇರ ಹೇಳಲು ಧೈರ್ಯ ಸಾಕಾಗಲಿಲ್ಲ. ಆದರೂ ಸುತ್ತಿ ಬಳಸಿ, 'ನಿನ್ನ ನಿರ್ಧಾರ ತಪ್ಪು' ಎನ್ನುವ ಅರ್ಥದಲ್ಲೇ ಮನವರಿಕೆ ಮಾಡಿ ಕೊಡಲು ಹೆಣಗುತ್ತಿದ್ದರು. ಹಾಗೆ ಮಾಡುವಾಗಲೆಲ್ಲ ಅವರ ಮಾತುಗಳೇ ಅವರನ್ನು ಅಣಕಿಸುತ್ತಿದ್ದವು. ಪಾಪ ಮಗಳು ಮಾತ್ರ ತುಟಿ ಬಿಚ್ಚಿರಲಿಲ್ಲ. ಪಾಟೀಲರಿಗೆ ಬಾಯಿ ಒಣಗಿದಂತೆನಿಸಿ ಟೇಬಲ್ ಮೇಲಿದ್ದ ತಂಬಿಗೆಯಿಂದ ಗ್ಲಾಸ್‌ನಲ್ಲಿ ನೀರು ಹಾಕಿಕೊಂಡು ಗಟಗಟ ಕುಡಿದರು. ತಂಬಿಗೆ, ಗ್ಲಾಸ್‌ಗಳನ್ನು ಮೊದಲಿನಂತೆ ಟೇಬಲ್ ಮೇಲಿಟ್ಟು, ಎದ್ದು ನಿಲ್ಲಲು ಯತ್ನಿಸಿದರು. ಯಾಕೋ ಮನಸ್ಸಾಗಲಿಲ್ಲ.

'ಪಕ್ಕದ ರೂಮಿನಲ್ಲಿ ಮಲಗಿರುವ ಹೆಂಡತಿ, ಮಗಳು ನನ್ನ ಹಾಗೆಯೇ ನಿದ್ದೆಗೆಟ್ಟಿದ್ದಾರೋ ಇಲ್ಲಾ, ಗಾಢ ನಿದ್ರೆಯಲ್ಲಿದ್ದಾರೋ'' ಎಂದು ಯೋಚಿಸಿದರು. ಆ ರೂಮಿನಿಂದ ಯಾವ ಮಿಸುಕಾಟದ ಸದ್ದೂ ಕೇಳುತ್ತಿರಲಿಲ್ಲವಾದ್ದರಿಂದ ನಿದ್ದೆ ಮಾಡುತ್ತಿರಬೇಕೆಂದು ಕೊಂಡರು. ಹಾಗ ನೋಡಿದರೆ, ಅಷ್ಟೊತ್ತಿನವರೆಗೆ ಪ್ರೊ. ಪಾಟೀಲರ ಗಮನ ಪಕ್ಕದ ರೂಮಿನೆಡೆಗೆ ಹರಿದಿರಲೇ ಇಲ್ಲ. ಎಂ.ಎ. ಇಂಗ್ಲೀಷಿನಲ್ಲಿ ತನಗೆ ಸಹಪಾಠಿಯಾಗಿದ್ದ ದಲಿತ ಯುವಕನನ್ನು, ಅದೂ ಬಡ ದಲಿತನನ್ನು ಪ್ರೀತಿ ಮದುವೆಯಾಗಲು ಮುಂದಾಗಿರುವ ಮಗಳ ನಿರ್ಧಾರ, ಅದಕ್ಕೆ ಪ್ರತಿಯಾಗಿ ಚಂಡಿಯಂತೆ ವಿರೋಧಿಸುತ್ತಿರುವ ಹೆಂಡತಿ, ಆ ಕಾರಣಕ್ಕೇ ರಣರಂಗವಾಗಿರುವ ಮನೆ ಅವರನ್ನು ಹಿಡಿದು ನಿಲ್ಲಿಸಿದ್ದವು. ಪರಿಹಾರಗೊಳ್ಳದ ದ್ವಂದ್ವದಲ್ಲಿ ಸಿಲುಕಿ, ವಿಲಿ ವಿಲಿ ಒದ್ದಾಡುತ್ತಿರುವ ಪಾಟೀಲರ ಗಮನ ಬೇರೆಕಡೆಗೆ ಹರಿಯಲು ಸಾಧ್ಯವೇ ಇರಲಿಲ್ಲವೆನ್ನುವಷ್ಟು ಏಕಾಗ್ರವಾಗಿ ರೂಮಿನ ಮೌನದಲ್ಲಿ ಒಂದಾಗಿದ್ದರು.

ಈಗ ಹೊರಗೆ ಬೆಳಕು ಹರಿಯತೊಡಗಿದಂತೆ ಅವರಲ್ಲಿನ ಆತಂಕ, ಉದ್ವೇಗ ಹೆಚ್ಚತೊಡಗಿತು. ಬೆಳಕನ್ನು ಎದುರಿಸುವುದೇ ಪ್ರೊ. ಪಾಟೀಲರಿಗೆ ಹಿಂಸೆಯೆನಿಸತೊಡಗಿತ್ತು.

ಕೃಪೆ:

'ಭಾವನಾ' ಮಾಸ ಪತ್ರಿಕೆಯಿಂದ

STATEMENT OF THE OWNERSHP ETC. THE WEEKLU NEWSPAPER 'AIKYARANGA'

Form IV

(See Rule 8)

1. Place of Publication	: 12, 18th Cross, S.R.Nagar, Bangalore-560 027
2. Periodicity of Pbublication	: Weekly
3. Printer's Name	: S.Suryanarayana Rao
(Whether Citizen of India? if Forigner, State the Country of Origin)	: Indian
Address	: 12, 18th Cross, S.R.Nagar, Bangalore-560 027
4. Publisher's Name	: S.Suryanarayana Rao
(Whether Citizen of India? if Forigner, State the Country of Origin)	: Indian
Address	: 12, 18th Cross, S.R.Nagar, Bangalore-560 027
5. Editor's Name	: S.Y.Gurushanth
(Whether Citizen of India? if Forigner, State the Country of Origin)	: Indian
Address	: 12, 18th Cross, S.R.Nagar, Bangalore-560 027
6. Name and address of individuals who own the Newspaper and partners or shareholders holding more than one percent of the total capital.	: Karnataka State Committee of Communist Party of India(Marxist) 12, 18th Cross, S.R.Nagar, Bangalore- 560 027

I S. Suryanarayana Rao hereby declare that the particulers given above are true to the best of my knowladge and belief

Sd/-

S.Suryanarayana Rao

Publisher

Date: 25 Feb 2001





ಉತ್ತಮ ನಿರ್ದೇಶನ - ಪಲಾಯನವಾದದ ಸಂದೇಶ

ಕನ್ನಡ ಚಿತ್ರರಂಗದ ರಿಮೇಕ್ ಚಿತ್ರಗಳಿಂದ ತುಂಬಿ ತಲೆ ಚಿಟ್ಟು ಹಿಡಿಸುವ ಈ ಸಂದರ್ಭದಲ್ಲಿ 'ಮತದಾನ' ಗಮನಸೆಳೆಯುವ ಚಿತ್ರ. ನಾಟಕ, ಟಿ.ವಿ.ಧಾರವಾಹಿಗಳನ್ನು ಸಮರ್ಥವಾಗಿ ನಿರ್ದೇಶಿಸಿದ ಟಿ.ಎನ್.ಸೀತಾರಾಂರವರ ಪ್ರತಿಭೆ ಈ ಚಿತ್ರದ ನಿರ್ದೇಶದನಲ್ಲಿ ಪರಿಣಾಮಕಾರಿಯಾಗಿದೆ.

'ಮತದಾನ' ಖ್ಯಾತ ಕಾದಂಬರಿಕಾರ ಎಸ್.ಎಲ್.ಭೈರಪ್ಪನವರ ಕೃತಿ. ಅವರ ಇತರೆ ಕಾದಂಬರಿಗಳಿಗೆ ಹೋಲಿಸಿದರೆ ಇದೊಂದು ಸಾಧಾರಣದ್ದು. ಮೇಲಾಗಿ ಅವರ ಆರಂಭದ ದಿನಗಳ ಸೃಷ್ಟಿ. ಹಾಗೆ ನೋಡಿದರೆ ಈ ಕಾದಂಬರಿ ಬರೆದು ಬಹುತೇಕ 25 ವರ್ಷಗಳೇ ಸರಿದು ಹೋಗಿವೆ.

ಈ ಕಥಾವಸ್ತುವಿನ ಭೂಮಿಕೆಯಾಗಿರುವ ಕರ್ನಾಟಕದ ಆರ್ಥಿಕ, ಸಾಮಾಜಿಕ ಸಂಬಂಧಗಳಲ್ಲಿ ಹಲವಾರು ಬದಲಾವಣೆಗಳು, ಸಂಭವಿಸಿವೆ. ರಾಜಕಾರಣವೂ ಗಣನೀಯವಾಗಿ ಮತ್ತು ಮತದಾರ ಜನತೆಯೂ ಬೌದ್ಧಿಕವಾಗಿ ಬೆಳೆದಿದ್ದಾರೆ. ಹಲವು ಸ್ಥಿತ್ಯಂತರಗಳು ಘಟಿಸಿವೆ. ಆದರೆ ಇವೆಲ್ಲ ಸೂಕ್ಷ್ಮ ಬದಲಾವಣೆಗಳನ್ನು ನಿರ್ದೇಶಕರು ಪರಿಗಣಿಸಿ, ಕಥೆಯನ್ನು ಸಮಕಾಲೀಕಗೊಳಿಸಬಹುದಿತ್ತು, ಬೇಕಿತ್ತು ಸಹ. ನಿರ್ದೇಶಕರು ಈ ಕಡೆಗೆ ಇಣುಕು ನೋಟವನ್ನು ಬೀರಿಲ್ಲ. ರಾಜಕೀಯವೆಂದರೆ ಯಾವಾಗಲೂ ಹೀಗೆ, ಇಷ್ಟೇ ಇನ್ನೇನಿದೆ? ಎಂಬ ಯಾಂತ್ರಿಕ, ಸ್ಥಗಿತ ಮನೋಗತಿಯ ಪ್ರತಿಫಲನವಿದು. ಹೀಗಾಗಿ ನಿರ್ದೇಶನ, ನಟರುಗಳ ಅತ್ಯುತ್ತಮ ಅಭಿನಯ, ಚಾಕಚಕ್ಯತೆಯ ಸಂಭಾಷಣೆ, ಸಂಗೀತವಿದ್ದರೂ ಇಂದಿನ ಜನಮನವನ್ನು ಸೆಳೆಯುವಲ್ಲಿ ವಿಫಲವಾಗಿಬಿಡುತ್ತದೆ. ರಾಜಕೀಯ ಸಂಘರ್ಷದ ಬಿಸಿ ಪ್ರತಿಯೊಬ್ಬರಿಗೂ ತಟ್ಟುತ್ತಿದ್ದರೂ, ಹೆಪ್ಪುಗಟ್ಟಿಸುವ ಅನುಭವಗಳನ್ನು ತೋರಿಸಿ, ಸ್ಪಂದಿಸಿ ಪ್ರತಿಕ್ರಿಯುವಷ್ಟಕ್ಕೇರದೇ ಸೋತು ವಿಮುಖತೆ ಅನುಭವಿಸುತ್ತದೆ. ಹೀಗಾಗಿ ಇಂತಹ ವೈವಿಧ್ಯ ಸಿನಿಮಾ ಎಷ್ಟು ದಿನ ನಡೆದೀತು ಎನ್ನುವಂತಹವರು ಸ್ವತಃ ನಿರ್ಮಾಣಕಾರರೇ ಪಟ್ಟ ಅನುಮಾನವನ್ನು ಸ್ವಲ್ಪ ಹುಸಿಗೊಳಿಸಿ 'ಮತದಾನ' ನಾಲ್ಕು ವಾರ ಓಡಿ, ಮಾಡಿದ್ದ ಖರ್ಚು ಗಿಟ್ಟಿತು ಎಂಬ ಸಮಾಧಾನದ ನಿಟ್ಟುಸಿರಿಟ್ಟರೂ, ವಿವಿಧ ಪ್ರೇಕ್ಷಕರನ್ನು ಸೆಳೆಯುವಲ್ಲಿ ವಿಫಲವಾಗಿದೆ. ಕಥೆ, ಕಾದಂಬರಿ ಓದುವವರಲ್ಲಿ ಒಂದು ಸಣ್ಣ ವಿಭಾಗದ 'ಬಾಲ್ಯಾನಿ ಬಂಧುಗಳ' ಸಿನಿಮಾವಾಗಿ ಮಾರ್ಪಟ್ಟಿದೆ.

ಚಿತ್ರಕಥೆ ಮೂಲಕ ಕಾದಂಬರಿಗೆ ಏನೊಂದೂ ಅಪಾಯವಾಗದಂತೆ ಯಥಾರೀತಿ ಬಿಂಬಿಸಿದ ಪ್ರಾಮಾಣಿಕ ನಿರ್ದೇಶನ ಮೆಚ್ಚುವಾಗಲೇ, ಜನ ಜನಿತವಾಗದೇ ಹೋಗುವುದರಲ್ಲಿ ನಿರ್ದೇಶಕನ ಸೋಲು ಇದೆ. ಅತ್ಯಂತ ಮಸಾಲೆ ಮಿಕ್ಸ್‌ಗಳ ರಿಮೇಕ್ ಚಿತ್ರವಾಗಿರುವ 'ಯಜಮಾನ' ಕಿಕ್ಕಿರಿದು ಪ್ರದರ್ಶನ ಕಂಡು 20 ಕೋಟಿ ರೂ. ಗಳಿಕೆಯ ಹಾದಿಯಲ್ಲಿ ಓಡುತ್ತಿರುವುದು ಯಾಕೆಂದು ಸಹ ಗಮನಿಸಬೇಕಾಗುತ್ತದೆ. ಪ್ರೇಕ್ಷಕರ ಮನಸ್ಸನ್ನು ತಟ್ಟದ, ಅವರನ್ನು ಕೂದಲೆಳೆಯೂ ಬೆಳೆಸದ ಚಿತ್ರಗಳು ವಿಫಲಗೊಳ್ಳುತ್ತವೆ.


'ಮತದಾನ'ದ ಕಥಾವಸ್ತು ರಾಜಕೀಯ ದೊಂಬರಾಟ. ಮಾರ್ಕಂಡೇಗೌಡ(ದೇವರಾಜ್) ರಾಮಲಿಂಗೇಗೌಡ(ಅನಂತ್‌ನಾಗ್) ರು ಒಂದೇ ಕುಲಸ್ಥರು. ಇಬ್ಬರು ಗೌಡರ ನಡುವೆ ಪ್ರತಿಯೊಂದಕ್ಕು ಜಿದ್ದಾಜಿದ್ದಿ - ಹಣಾಹಣಿ. ಮೊದಲು ಮಾರ್ಕಂಡೇಗೌಡ ಶಾಸಕನ ಸ್ಥಾನಕ್ಕೆ ಸ್ಪರ್ಧಿಸಿ ಸೋತವ, ಕೊನೆಗೂ ಗೆದ್ದವ. ಹಲವಾರು ರಾಜಕೀಯ ಪಟ್ಟು ಹಾಕುವಲ್ಲಿ ನಿಪುಣ. ಆದರೆ ರಾಮಲಿಂಗೇಗೌಡ ಇದಕ್ಕಿಂತ ಭಿನ್ನ, ಚುರುಕು ಬುದ್ಧಿಯ ಮಂತ್ರಿ ಪುಟ್ಟೇಗೌಡನ ಆಪ್ತ. ಆತನನ್ನೇ ನಂಬಿದವ, ಹೇಳಿದಂತೆ ಕೇಳುವವ. ಈ ಒಬ್ಬರ ಮೇಲಿನ ಒಬ್ಬರ ಮೇಲಾಟದಲ್ಲಿ ಏನೊಂದು ಅಭಿವೃದ್ಧಿ ಕಾಣದ, ಹಲವಾರು ರೋಗಗಳಿಗೆ ಬಲಿಯಾಗುವ, ಏನೂ ಮಾಡಲಾಗದ, ಹತಾಶ ಜನತೆ. ಅಂತಹವರಿಗೆ ಈ ನಡುವೆ ಮರಳುಗಾಡಿನ ಒರತೆ 'ಒಯಸಿಸ್' ನಂತಿರುವ ಡಾಕ್ಟರ್ ಶಿವಪ್ಪ. ಈತ ಆದರ್ಶವಂತ.

ಈ ರಾಜಕೀಯ ಪ್ರತಿಸ್ಪರ್ಧಿಗಳ ಚದುರಂಗ ದಾಟದಲ್ಲಿ ದಾಳಗಳಂತೆ ಬಳಸಲ್ಪಡುವವರು ರಾಮಲಿಂಗೇಗೌಡರು (ಅನಂತನಾಗ್), ಅವರ ಮಗಳು(ತಾರಾ) ಮತ್ತು ಡಾ. ಶಿವಪ್ಪ(ಹೇಮಂತ ವಶಿಷ್ಟ). ಪರಿಣಾಮ ಹಲವು ಸಂಕಷ್ಟಗಳು, ದುರಂತಗಳನ್ನು ಅನುಭವಿಸಬೇಕಾಗಿ ಬರುತ್ತದೆ. ಮಂತ್ರಿ ಪುಟ್ಟೇಗೌಡನ ಬೇಕು-ಬೇಡಗಳಿಗೆ ತನ್ನನ್ನು ಒಪ್ಪಿಸಿಕೊಂಡ ವಿಧೇಯ ಅನಂತ್‌ನಾಗ್ ಆತ್ಮಹತ್ಯೆ ಮಾಡಿಕೊಂಡು ತನ್ನೆದುರಿನ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಬೇಕಾಗುತ್ತದೆ. ರಾಜಕೀಯ ಚದುರಂಗದಾಟದಲ್ಲಿ ಬೇಸತ್ತ ಜನತೆ ಚುನಾವಣಾ ಸಂದರ್ಭದಲ್ಲಿ ಡಾ. ಶಿವಪ್ಪನನ್ನು ಮೂರನೇ ಪರ್ಯಾಯವಾಗಿ ಕಾಣುತ್ತಾರೆ. ಈತನ ಸ್ಪರ್ಧೆಯೇ ಒಂದು ತಂತ್ರವಾಗಿದ್ದರಿಂದ ಗೆಲ್ಲುವುದಿಲ್ಲ. ಆದರೆ ಅಂತಿಮವಾಗಿ ಈ ಹೋರಾಟವನ್ನು ಮುಂದುವರಿಸದೇ ಅದಕ್ಕೆ ಬೆನ್ನು ತೋರಿಸುವ, ಜನರನ್ನು ಅದೇ ಗೂಳಿಗಳಿಗೊಪ್ಪಿಸುವ ವಿಮುಖತೆ, ಪಲಾಯನವಾದವೇ ಚಿತ್ರದ ಸಂದೇಶವಾಗಿಬಿಡುತ್ತದೆ. ಹೀಗೆ ಬದಲಾವಣೆ ಬೇಡದ, ಯಥಾಸ್ಥಿತಿ ಸಮರ್ಥನೆಯ, ರಾಜಕೀಯದ ಬಗ್ಗೆ ಸಿನಿಕತನವಿರುವ, ಬೇರೊಂದು ಪರ್ಯಾಯವನ್ನು ಅಲ್ಲಗಳೆಯುವ ಅಪಾಯದ ಹೂರಣವನ್ನು ಉಣಬಡಿಸುತ್ತದೆ.

ಇದು ಕೇವಲ ನಿರ್ದೇಶಕನ ಮಿತಿ ಮಾತ್ರವಾಗಿರದೆ ಮೂಲತಃ ಕಾದಂಬರಿಕಾರ ಭೈರಪ್ಪನವರ ತೀವ್ರ ಮಿತಿಯೂ ಹೌದು. ಭೈರಪ್ಪನವರು ಬಹುತೇಕ ಎಲ್ಲ ಕಾದಂಬರಿಗಳಲ್ಲಿಯೂ ತಮ್ಮ ಈ ಮಿತಿಗಳನ್ನು, ಸಿನಿಕತನ ಮೌಢ್ಯತೆ ಮತ್ತು ಪ್ರಗತಿ ವಿರೋಧಿ, ಸನಾತನೀಯತೆಯ ನಿಲುವುಗಳನ್ನು ಧಾರಾಳವಾಗಿ ಕಾಣಬಹುದು. ಮತದಾನದಲ್ಲಿ ಅಂತೂ ಕೊನೆಗೆ ಸಂದರ್ಭಗಳಿಗೆ ಶರಣಾಗಿದ್ದ ಲಕ್ಷ್ಮಿ (ತಾರಾ) ತನಗೆ ಒಲ್ಲದ ಕೊಳಕು ಬುದ್ಧಿಯ ಗಂಡ ಸಣ್ಣತಮ್ಮಯ್ಯ (ಅವಿನಾಶ್) ನನ್ನು ಧಿಕ್ಕರಿಸಿ, ತಾನು ಹಿಂದಿನಿಂದಲೂ ಪ್ರೇಮಿಸುತ್ತಿದ್ದ ಡಾ|| ಶಿವಪ್ಪನವರನ್ನು ಮದುವೆಯಾಗುವುದು ಒಂದು ಭಿನ್ನ ಅಂಶವಷ್ಟೆ.

ಈ ಎಲ್ಲವುಗಳ ನಡುವೆಯೂ ಯರ್ರಾಬಿರ್ರಿ ಹೊಡೆದಾಟ, ಅಶ್ಲೀತೆ, ಗಿಮಿಕ್ಸ್‌ಗಳಿಲ್ಲದ 'ಮತದಾನ' ನೋಡಬೇಕಾದ ಚಿತ್ರ. ಯಾವೊಂದು ಪಾತ್ರವನ್ನು ವಿಜೃಂಭಿಸದೆ ಪ್ರತಿಯೊಂದು ಪಾತ್ರವೂ ಅದರದೇ ಆದ ಪ್ರಾಮುಖ್ಯತೆಯನ್ನು ಪಡೆದಿದೆ. ಅನಂತ್‌ನಾಗ್, ದೇವರಾಜ್, ಅವಿನಾಶ್, ತಾರ, ನವನಟ ಹೇಮಂತ್ ಎಲ್ಲರೂ ಪೈಪೋಟಿಯ ಮೇಲೆ ಅಭಿನಯ ನೀಡಿದ್ದಾರೆ. ಛಾಯಾಗ್ರಹಣ, ಸಂಕಲನ ಪರಿಣಾಮಕಾರಿ. ಮನೋಹರ್, ಸಿ.ಅಶ್ವತ್ಥರ ಸಂಗೀತವೂ ಉತ್ತಮ. ಒಂದೆರೆಡು ಹಾಡುಗಳೂ ಇಂಪಾಗಿವೆ. ಗಾಯಕ ಅಶ್ವತ್ಥ ಈ ಚಿತ್ರದಲ್ಲಿ ದಾಸಯ್ಯನ ವೇಷ ಹಾಕಿ ಹಾಡಿರುವುದು ವಿಶೇಷ.

- ಎಸ್.ವೈ.ಜೀ.



ಕ್ರೀಡಾಮನೋಭಾವದ ಶಿಖರ - ಕ್ರಿಕೆಟ್ ದಿಗ್ಗಜ ಬ್ರಾಡ್ಮನ್ ಇನ್ನಿಲ್ಲ

ದೇಶದ ವಿವಿಧ ಕ್ಷೇತ್ರಗಳಲ್ಲಿ ಉನ್ನತಿ ಸಾಧಿಸಿದವರಿಗೆ ಪ್ರತಿವರ್ಷ ಭಾರತ ಸರ್ಕಾರ ಅತ್ಯುನ್ನತ ಪ್ರಶಸ್ತಿಗಳಾದ ಭಾರತರತ್ನ, ಪದ್ಮವಿಭೂಷಣ, ಪದ್ಮಭೂಷಣ ಮತ್ತು ಪದ್ಮಶ್ರೀ ನೀಡಿ ಗೌರವಿಸುತ್ತದೆ. ಈ ಬಾರಿ ಕ್ರಿಕೆಟ್‌ಗೆ ಈ ಯಾವ ಪ್ರಶಸ್ತಿಯೂ ಲಭ್ಯವಾಗಿಲ್ಲ. ಭಾರತ ಕ್ರಿಕೆಟ್ ತಂಡದ ನಾಯಕ ಸೌರವ್‌ಗಂಗೂಲಿಗೆ ಪದ್ಮಶ್ರೀ ನೀಡುವುದಾಗಿ ತಿಳಿಸಿ ನಂತರ ತಡೆ ಹಿಡಿಯಲಾಯಿತು ಎಂಬ ವರದಿ ಇದೆ. ಏಕೆಂದರೆ, ಕ್ರಿಕೆಟ್ ಇದೊಂದು ಜೂಜುಕೋರರ, ಮೋಸಗಾರರ, ವಂಚಕರ ಜಾಲವೆಂದು ಈಗ ಇಡೀ ವಿಶ್ವವೇ ಇತ್ತ ಬೆನ್ನು ತೋರಿಸಿದೆ. ಇಂತಹ ಕ್ರಿಕೆಟ್‌ಗೆ 30-40 ರ ದಶಕದಲ್ಲಿ ಖ್ಯಾತಿ ಹಾಗೂ ಸಭ್ಯತೆಯುನ್ನು ಗಳಿಸಿಕೊಟ್ಟ ಟೆಸ್ಟ್ ಚರಿತ್ರೆಯ ಮಹಾನ್ ಬ್ಯಾಟ್ಸ್‌ಮನ್ ಸರ್ ಡೊನಾಲ್ಡ್ ಜಾರ್ಜ್ ಬ್ರಾಡ್ಮನ್ ಫೆಬ್ರವರಿ 25 ರಂದು ಕಣ್ಮರೆಯಾದರು. ಕ್ರೀಡಾ ಮನೋಭಾವದ ಸಂಕೇತವಾಗಿದ್ದ ಅವರು ಆಸ್ಟ್ರೇಲಿಯಾ ಕ್ರೀಡಾರಂಗದ ಪರ್ವತವಾಗಿದ್ದರು. ಅವರ ನಿಧನದಿಂದ ಒಂದು ಕ್ರೀಡಾ ಯುಗ ಮುಗಿದಂತೆ ಆಗಿದೆ.

1908 ರಲ್ಲಿ ಆಸ್ಟ್ರೇಲಿಯಾದಲ್ಲಿ ಜನಿಸಿದ ಬ್ರಾಡ್ಮನ್ 1928 ರಲ್ಲಿ ಪ್ರಥಮ ದರ್ಜೆ ಕ್ರಿಕೆಟ್‌ಗೆ ಕಾಲಿಟ್ಟ ಅದ್ಭುತ ಆಟಗಾರ. 52 ಟೆಸ್ಟ್‌ಗಳ 80 ಇನ್ನಿಂಗ್‌ನಲ್ಲಿ 99.94 ರ ಸರಾಸರಿಯಲ್ಲಿ 6996 ರನ್ ಗಳಿಸಿ, ಗ್ಯಾರಿಸೋಬರ್ಸ್, ಸುನೀಲ್ ಗವಾಸ್ಕರ್, ಸಚಿನ್ ತೆಂಡೂಲ್ಕರ್, ಬ್ರಿಯಾನ್ ಲಾರಾ ಇತ್ಯಾದಿಯಾಗಿ ಯಾರಿಂದಲೂ ಮುರಿಯಲಾಗದ ಸಾಧನೆಗೈದ ಮಹಾನ್ ದಾಂಡಿಗರಾಗೇ ಉಳಿದಿದ್ದಾರೆ.

ಪ್ರಥರ್ಮ ದರ್ಜೆ ಕ್ರಿಕೆಟ್‌ನಲ್ಲಿ 28 ಸಾವಿರಕ್ಕೂ ಅಧಿಕ ರನ್ ಗಳಿಸಿರುವ ಬ್ರಾಡ್ಮನ್ 31 ದ್ವಿಶತಕ ಮತ್ತು 117 ಶತಕಗಳನ್ನು ತಮ್ಮ ಬಗಲಲ್ಲಿರಿಸಿಕೊಂಡ ಅದ್ಭುತ, ದೈತ್ಯ ಕ್ರೀಡಾ ಪ್ರತಿಭೆ. ಟೆಸ್ಟ್‌ನಲ್ಲಿ ಬ್ರಾಡ್ಮನ್(ಒಂದೇ ದಿನದಲ್ಲಿ) ಗಳಿಸಿರುವ 334 ರನ್ ಇಂದಿಗೂ ದಾಖಲೆಯಾಗಿ ಉಳಿದಿದೆ. (ಅದೇ ದೇಶದ ಮಾರ್ಕ್ ಟೇಲರ್ 334 ರನ್ ಗಳಿಸಿ ಬ್ರಾಡ್ಮನ್ ಗೌರವಾರ್ಥ ಡಿಕ್ಲೆರ್ ಮಾಡಿಕೊಂಡರು).

1948 ರಲ್ಲೇ ನಿವೃತ್ತಿಯಾದ ಬ್ರಾಡ್ಮನ್ ನಾಲ್ಕು ದಶಕಗಳ ಕಾಲ ಅಧಿಕಾರಿಯಾಗಿ, ಆಯ್ಕೆದಾರರಾಗಿ, ಟ್ರಸ್ಟಿಯಾಗಿ ದುಡಿದು ಆಸ್ಟ್ರೇಲಿಯಾ ಕ್ರಿಕೆಟ್‌ನ ಶಿಖರವಾಗಿದ್ದರು. ಕ್ರೀಡಾಮನೋಭಾವದ ಸಂಕೇತವಾಗಿದ್ದ ಸರ್ ಡೊನಾಲ್ಡ್ ಭವಿಷ್ಯದ ಆಟಗಾರರಿಗೆ ಹೆಗ್ಗುರುತು ಆಗಿದ್ದರು.

ಇಂದು ಭಾರತ, ದ.ಆಫ್ರಿಕಾ, ಇಂಗ್ಲೆಂಡ್, ಶ್ರೀಲಂಕಾ ಇತ್ಯಾದಿಗಳಾಗಿ ಇಡೀ ಕ್ರಿಕೆಟ್ ಜಗತ್ತಿನ ಪ್ರಮುಖರು ಲಂಚಕ್ಕಾಗಿ ವಂಚನೆಯಲ್ಲಿ ತೊಡಗಿ, ಕ್ರಿಕೆಟ್ಟನ್ನೇ ಏಕೆ ಇಡೀ ಕ್ರೀಡೆಯತ್ತ ಜನರು ಅನುಮಾನದ ದೃಷ್ಟಿ ನೆಟ್ಟಿರುವಾಗ ಅಂತಹ ಮಹಾನ್ ಆಟಗಾರ ಹೆಸರು ಗಳಿಸಿಕೊಟ್ಟ ಆಸ್ಟ್ರೇಲಿಯಾ ತಂಡವೂ 'ಮ್ಯಾಚ್ ಫಿಕ್ಸಿಂಗ್' ನಂತಹ ವಂಚನೆಯಲ್ಲಿ ಸಿಲುಕಿರುವುದು ವಿಪರ್ಯಾಸವೇ ಸರಿ.

ಸರ್ ಡೊನಾಲ್ಡ್ ಬ್ರಾಡ್ಮನ್ ಆಸ್ಟ್ರೇಲಿಯ ತಂಡದ ಪರ ಆಡುತ್ತಿದ್ದರು. ಇಡೀ ಕ್ರಿಕೆಟ್ ಜಗತ್ತು ಮತ್ತು ಕ್ರೀಡಾಭಿಮಾನಿಗಳು ಬ್ರಾಡ್ಮನ್ನರನ್ನು ಗೌರವಪೂರ್ವಕವಾಗಿ ಕಾಣುತ್ತಿದ್ದರು. ಹೊಲಸೆದ್ದು ಹೋಗಿರುವ ಕ್ರಿಕೆಟ್ ಮತ್ತು ಇನ್ನಿತರ ಮೋಸದಾಟದಲ್ಲಿ ತೊಡಗಿಸಿಕೊಂಡಿರುವ ಕ್ರೀಡಾಳುಗಳು ಅದಕ್ಕೊಂದು ಘನತೆ, ಗೌರವ ಮತ್ತು ಅಭಿಮಾನವನ್ನು ಗಳಿಸಿಕೊಡುವ ಮೂಲಕ



ಸರ್ ಬ್ರಾಡ್ಮನ್‌ರಿಗೆ ಶ್ರದ್ಧಾಂಜಲಿ ಸಲ್ಲಿಸಬೇಕಾಗಿದೆ.

- ಜಯರಾಮು

PRB DECR 319-79/79 AIKYARANGA WEEKLY Reg. No. 17015/64 KRNM/BGS-405 MAG(2)

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಎಸ್ ವೈ ಗುರುಶಾಂತ್. ಸಂಪಾದಕೀಯ ಕಛೇರಿ: ನಂ.12, 18ನೇ ಅಡ್ಡ ರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು-1

Printed & Published by Communist Party of India(Marxist), Karnataka State Committee. Editor : S.Y.GURUSHANTH